
# ಅಖಿಲ ಭಾರತ ಪತ್ರಿಕೆ

## ಜನವರಿ 2022



# ಪ್ರೇಮ-ನಾದ

ಬೆಲೆ : 15/-



ಓ ಶುಭ್ರ–ತೇಜ ಸೌಂದರ್ಯ ಸತ್ಯ ಸಾವಿತ್ರಿ ರಾಜಪುತ್ರಿ,
ನಿನ್ನಾತ್ಮ ಮುದದ ಜೊತೆ ಎನ್ನ ಹ್ಲಾದ ಬಲಗಳಲಿ ಯೋಗ ಖಾತ್ರಿ,
ಇದು ನಿನ್ನ ಕೋಶ ಜೊತೆ ಪುಣ್ಯತೀರ್ಥ ಬಾ ಎನ್ನ ಉಸಿರಿಗೀಗ
ಶಕ್ತಿಗಳು ಮೇಳ–ಸಮ್ಮೇಳಗೊಳುವ ಮಹತಿಯಾ ತಾಣಕೀಗ

**ಅನು: ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 5 ರೇಣು 3 ಪುಟ 409)**

**ಫೋಟೊ: ಇಮೇಜಿಂಗ್ ಸಾವಿತ್ರಿ**

**ಅಖಿಲ ಭಾರತ ಪತ್ರಿಕೆ**
**ಜನವರಿ 2022**

ಸಂಪುಟ: 32 ಸಂಚಿಕೆ: 01

# ಪರಿವಿಡಿ

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪಸೆ
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

## ಪ್ರೇಮ–ನಾದ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಶ್ರೀಮಾತೆಯವರ ದೃಷ್ಟಿಯಲ್ಲಿ 'ಸಾವಿತ್ರಿ'**
ಅನು: ಶ್ರೀ ಪುಟ್ಟು ಕುಲಕರ್ಣಿ 9

**'ಸಾವಿತ್ರಿ' ಕಾವ್ಯದಿಂದ ಆಯ್ದ ಸಾಲುಗಳು** 20
ಅನು: ಶ್ರೀ ಪುಟ್ಟು ಕುಲಕರ್ಣಿ

**'ಸಾವಿತ್ರಿ'– ಅಂತರಾರ್ಥ** 41
– ಶ್ರೀ ಪುಟ್ಟು ಕುಲಕರ್ಣಿ

**'ಮಂತ್ರ'; ಒಂದು ಸೈದ್ಧಾಂತಿಕ ಜಿಜ್ಞಾಸೆ** 47
– ಶ್ರೀ ಪುಟ್ಟು ಕುಲಕರ್ಣಿ

**'ಸಾವಿತ್ರಿ'; ಅನುಸಂಧಾನ** 57
ಶ್ರೀಮಾತೆ; ಡಾ॥ ಕೆ.ಎಸ್. ಅಮೂರ
ಡಾ॥ ಬಿ.ಆರ್. ಭೀಡ

**'ಸಾವಿತ್ರಿ'ಯ ರಹಸ್ಯ** 70
– ಶ್ರೀ ಪುಟ್ಟು ಕುಲಕರ್ಣಿ

**ವಾರ್ತಾಪತ್ರ** 73

# ಸಂಪಾದಕರ ಟಿಪ್ಪಣಿ

'ಸಾವಿತ್ರಿ' ರೂಪಾಂತರಣದ ಮಂತ್ರವಾಗಿದೆ, ಇದನ್ನೇ ಶ್ರೀಮಾತೆಯವರು ನಮಗೆ ಸ್ಪಷ್ಟಪಡಿಸಿದ್ದಾರೆ. ಇದನ್ನು ಓದುತ್ತಾ ಓದುತ್ತಾ ಹೋದಂತೆ, ಅದರ ವಲಯದಲ್ಲಿಯೇ ಇರುವಂತೆ ಅಧ್ಯಯನ ಮಾಡುತ್ತಾ ಸಾಗಿದಂತೆ, ಅದರ ಕುರಿತು ಬರೆಯುತ್ತಾ, ಆಲಿಸುತ್ತಾ, ಮನನಗೊಳಿಸುತ್ತಾ, ಧ್ಯಾನಪೂರ್ವಕವಾಗಿ ಆರಾಧಿಸುತ್ತಾ ಸಾಗಿದಂತೆ, ನಾವು, ಋತದ ಮತ್ತು ಸೌಂದರ್ಯದ ಪ್ರಕಾಶದ ಆಂತರ್ಯದಲ್ಲಿಯೇ ಇರುವ ಭವಿಷ್ಯವನ್ನು ಈ ಸಾವಿತ್ರಿ ನಮಗೆ ರೂಪಿಸುತ್ತದೆ. ಶ್ರೀ ಅರವಿಂದರ ಮಹತ್ವಪೂರ್ಣ ಗ್ರಂಥವೆಂದರೆ 'ಸಾವಿತ್ರಿ'. ಔನ್ನತ್ಯದಲ್ಲಿರುವ ಪರಮೋಚ್ಚ ಚೇತನದ ದ್ವಾರಗಳನ್ನು ನಮ್ಮ ಸಲುವಾಗಿ ತೆರೆಯುತ್ತದೆ, ಸತ್ಯ ಮತ್ತು ಸೌಂದರ್ಯದ ದ್ವಾರಗಳನ್ನು ತೆರೆಯುತ್ತದೆ, ನಿರ್ಮಾಯ ಶಾಂತಿಯ ಮತ್ತು ವೈಶಾಲ್ಯತೆಯ ಅವಕಾಶವನ್ನು ಪಡೆದುಕೊಳ್ಳಲು ದ್ವಾರವನ್ನು ತೆರೆಯುತ್ತದೆ. ಅನಂತಾನಂತವಾಗಿರುವ ದೈವೀ ಪ್ರೇಮ ಮತ್ತು ಆನಂದದ ದ್ವಾರಗಳನ್ನೂ ತೆರೆಯುತ್ತದೆ. ಪರಮೋಚ್ಚ ಸ್ವರೂಪದ ಸೌಷಮ್ಯದ ನಾದಗಳನ್ನು ಸಹಿತ ಪಡೆದುಕೊಳ್ಳಲು ದ್ವಾರಗಳನ್ನು ತೆರೆಯುತ್ತದೆ.

ಆ ಪರಮಾತಿ ಪರಮವನ್ನು ಸ್ಪರ್ಶಿಸಲು ಮತ್ತು ಅದರ ಅನುಭೂತಿಯನ್ನು ಪಡೆದುಕೊಳ್ಳಲು, ಆ ಮೂಲಕ ಅಂತರ್ಜ್ಞಾನವನ್ನು ಅರಿತುಕೊಳ್ಳುವ ಸಲುವಾಗಿ ಈ ಸಂಚಿಕೆಯಲ್ಲಿ ಸಾವಿತ್ರಿ ಗ್ರಂಥದಿಂದ ಕೆಲವು ಸಾಲುಗಳನ್ನು ಆಯ್ದುಕೊಳ್ಳಲಾಗಿದೆ. ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ 'ಶಬ್ದ–ಸ್ವರೂಪ' ಮತ್ತು 'ಧ್ವನಿಪೂರ್ಣ–ಸ್ವರೂಪ'ಗಳ ಸ್ಪಂದನಕ್ಕೆ ಒಳಗೊಳ್ಳುವ ಸಲುವಾಗಿ, ಅದಕ್ಕೊಂದು ಸ್ವರೂಪವನ್ನು ಒದಗಿಸಿ ಸನ್ನಿಹಿತಗೊಳಿಸಿ ಪ್ರತಿಷ್ಠಾಪಿಸಿಕೊಳ್ಳಲು ಮತ್ತು ಆ ಮೂಲಕ ಅದರ ಶಾಶ್ವತವಾಗಿರುವ ಜೀವಂತಿಕೆಯೊಂದಿಗೆ ಸಂಪರ್ಕ ಸಾಧಿಸಲು ಇದೊಂದು ಆಮಂತ್ರಣವಾಗಿರುತ್ತದೆ. ಎಲ್ಲ ಯುಗಗಳಿಗೂ ಅನ್ವಯವಾಗಿರುವಂತೆ, ಮನುಕುಲವು ಕ್ರಮಿಸಬೇಕಾಗಿರುವ ಕಷ್ಟದಿಂದ ಕೂಡಿರುವ ಪಥದಲ್ಲಿ ಯಾನವು ಸುಗಮವಾಗಿರುವಲ್ಲಿ ಸಹಾಯಕಾರಿಯಾಗಿರುವಂತೆಯೇ, ದೃಷ್ಟಾರರಾಗಿರುವ ಶ್ರೀ ಅರವಿಂದರು ಇದನ್ನು ಚೈತನ್ಯಪೂರ್ಣ ಅಸ್ತಿತ್ವವಾಗಿಯೇ ಸಂಯೋಜಿಸಿದ್ದಾರೆ. ಭವಿಷ್ಯದ ಅತಿಮಾನವ ಹಂತದ ದಿವ್ಯ–ಮಾನವೀಯತೆಯ ಸಲುವಾಗಿ ಪೂರ್ವಭಾವಿಯಾಗಿಯೇ ಇದು ಸೃಷ್ಟಿಗೊಂಡಿದೆ.

*

# ಸಂಪಾದಕೀಯ

## ಸಾವಿತ್ರಿ; ಆಯಾಮಗಳು ಮತ್ತು ಪರಂಪರೆ

"ಸಾವಿತ್ರಿ" ಒಂದು ಮಂತ್ರ ಕಾವ್ಯವಾಗಿದೆ. ಹೀಗಾಗಿ ಇದನ್ನು ಎರಡು ವಿಧಾನದಲ್ಲಿ ಅಧ್ಯಯನ ಮಾಡುವ ಕ್ರಮಾಂಕವಿರುತ್ತದೆ. ಒಂದು ಅನುಷ್ಠಾನ ಪರಂಪರೆ; ಮತ್ತೊಂದು ಆವಿಷ್ಕಾರ ಪರಂಪರೆ. ಇವೆರಡೂ ಪರಂಪರೆಗಳ ಮಧ್ಯದಲ್ಲಿ ಪಯಣಿಸುತ್ತಿರುವಾಗ ನಿರ್ಮಾಣವಾಗುವ ಸಂದರ್ಭಗಳು/ಸಂಗತಿಗಳು ಒಮ್ಮೊಮ್ಮೆ 'ವೈಚಾರಿಕ ಸಂಘರ್ಷ'ದಂತೆ ಭಾಸವಾಗುವದು ಸಹಜ. ಆದರೆ ಮೂಲ ವಿಷಯದ ತಾಯಿಬೇರಿನೊಡನೆಯೇ ಇಲ್ಲಿ ಸ್ಪಂದನವಿರುವದರಿಂದ, ಎರಡೂ ಮಾರ್ಗದಲ್ಲಿ ಪಯಣಿಸುತ್ತಿರುವವರಿಗೆ ಯಾವುದೇ ಸಂಘರ್ಷ ಉದ್ಭವಿಸುವದೇ ಇಲ್ಲ.

ಋತದ ದರ್ಶನವನ್ನು ಪಡೆದ ದೃಷ್ಟಾರನಿಗೆ ವಿಶ್ವನಾದವೂ ಸಹಿತ ದರ್ಶನಕ್ಕೆ ಬಂದಿರುತ್ತದೆ. ಆ ಹಂತದವರೆಗೂ ಅದು ಅಪೌರುಷೇಯವೇ ಆಗಿರುತ್ತದೆ. ಒಮ್ಮೆ ಈ ದರ್ಶನವಾದ ಹಂತದಲ್ಲಿ, ಆ ದೃಷ್ಟಾರನಿಂದ ಅಭಿವ್ಯಕ್ತಗೊಳ್ಳುವ ಧ್ವನಿಯೂ ಸಹಿತ ಪ್ರಕೃತಿಭಾವದ ಧ್ವನ್ಯಾತ್ಮಕವಾದ ಸ್ವರೂಪದಲ್ಲಿಯೇ ಇರುತ್ತವೆ. ಅದನ್ನು ಆ ವ್ಯಕ್ತಿಯು ತನಗೆ – ತನ್ನ ಪರಿಸರದ ಮೂಲಕ ರೂಪುಗೊಂಡಿರುವ ಭಾಷಾ ವ್ಯವಸ್ಥೆಯಲ್ಲಿ ವ್ಯಕ್ತಪಡಿಸಿದ ಮೇಲೆ ಅದು 'ಪೌರುಷೇಯವೇ ಆಗುತ್ತದೆ'. ಏಕೆಂದರೆ ಅವನ ಈ ಅಭಿವ್ಯಕ್ತಿಯು ಶ್ರುತಿಯಾಗಿರುತ್ತದೆ. ಲೇಖನ ಕಲೆ ಗೊತ್ತಿರದ ಅವಧಿಯಲ್ಲಿ ಅದನ್ನು ಸ್ಮೃತಿಯ ಹಂತದಲ್ಲಿ ಚಿರಂತನವಾಗಿರಿಸಿಕೊಳ್ಳುವ ವಿಧಾನಗಳಿದ್ದವು.

ಈ ಹಿನ್ನೆಲೆಯಲ್ಲಿ 'ಸಾವಿತ್ರಿ'ಯೂ ಸಹಿತ ದೃಷ್ಟಾರನೋರ್ವನಿಗೆ ದೃಷ್ಟಗೊಂಡ ದರ್ಶನಗಳು' ಎನ್ನುವದು ಮುಖ್ಯ ಸಂಗತಿ. ಆ ವ್ಯಕ್ತಿಯ ಸಮಕಾಲೀನರಿಗೆ, ಈ ದೃಷ್ಟಾರನು ಕಂಡುಕೊಂಡ 'ಸತ್ಯದ' ಕುರಿತು ಸಹಜವಾಗಿಯೇ ಆರಾಧನಾ ಮನೋಭಾವ ರೂಪುಗೊಂಡಿರುತ್ತದೆ. ಆ ವ್ಯಕ್ತಿಯಿಂದಲೇ ಬಂದ ಅನುಭವದ ಮಾತುಗಳನ್ನು ರೂಪಕದಲ್ಲಿಯೇ ಸ್ವೀಕರಿಸುತ್ತಾರೆ. ಇದು ಸಾಮಾಜಿಕ ಅನಿವಾರ್ಯತೆಯೂ ಹೌದು. ಆದರೆ ಆ ವ್ಯಕ್ತಿಯ "ನಂತರದಲ್ಲಿ" ಆ ಅಭಿವ್ಯಕ್ತಿಗಳು ವಿಶ್ಲೇಷಣೆಯ ಪ್ರಕ್ರಿಯೆಗೆ ಒಳಪಡುತ್ತವೆ.

ವಿಶ್ವಸತ್ಯ, ಪ್ರಕೃತಿಭಾವ, ಮಾನವನ ಬದುಕು ಮತ್ತು ಅವನ ಅನುಭವದ ಅಭಿವ್ಯಕ್ತಿಗಳು ಸಮಸ್ಪಂದಿಯಾಗಿಯೇ ನಾದಮಯವಾಗಿ ರೂಪುಗೊಂಡಿದ್ದು ಕೇವಲ ಉಪನಿಷತ್ ಅವಧಿ (ನೆನಪಿಡಿ ವೇದದ ಅವಧಿಯಲ್ಲ), ಕಾಳಿದಾಸನ ಅವಧಿ,

ವಚನಗಳ ರಚನಾ ಅವಧಿ (ಇದು ಕಾಶ್ಮೀರ ಶೈವ ಪಂಥದ ಆರನೇ ಆಯಾಮದ ಪರಿಪೂರ್ಣ ವಿಕಾಸದ ಹಂತವಾಗಿದೆ) ಹಾಗೂ ಇದೀಗ ಶ್ರೀ ಅರವಿಂದರ ಸಮಯದಲ್ಲಿ ಮಾತ್ರ. ಹೀಗಾಗಿ ಕೇವಲ ಶಾಬ್ದಿಕ ಹಿನ್ನೆಲೆಯಲ್ಲಿ (ನಮ್ಮದೇ) ಬೌದ್ಧಿಕ ನೆಲೆಗೆ ಕಟ್ಟಿಹಾಕಿಕೊಳ್ಳುವದಕ್ಕಿಂತ, ಈ ರೀತಿಯಲ್ಲಿ ವಿಶ್ವಾತ್ಮಕವಾಗಿ ಸಂರಚನೆಗೊಳ್ಳುತ್ತಿರುವ ಧ್ವನಿಗಳ ಅವಧಿಯಲ್ಲಿ ನಾವೂ ಇದ್ದೇವೆ ಎನ್ನುವದೇ ಒಂದು ಸುಯೋಗ.

ಆ ನಾದದಲ್ಲಿ ರೂಪುಗೊಳ್ಳುವ ಶಬ್ದದಲ್ಲಿ ಅಡಗಿರುವ ಆಂತರ್ಯಕ್ಕೆ ಹೋಗುವ ಮುನ್ನ, ಆ ಶಬ್ದವು ರೂಪಣೆಗೊಂಡಿರುವ ಸಂದರ್ಭವನ್ನು ಮೊದಲು ಅರ್ಥೈಸಿಕೊಂಡರೆ, ಮುಂದಿನ ಪಯಣ ಅತ್ಯಂತ ಸುಲಭದಲ್ಲಿರುತ್ತದೆ. ಶಬ್ದವೊಂದು ರೂಪು ತಾಳಬೇಕಾದ ಸಂದರ್ಭದ ಹಿನ್ನೆಲೆಯಲ್ಲಿ ಸಂಸ್ಕೃತಿ ವಿಕಾಸವೂ ಆಗುತ್ತಿರುತ್ತದೆ; ರೂಪಾಂತರವನ್ನೂ ತಾಳುತ್ತಿರುತ್ತದೆ. ಇದನ್ನು ನಾವು ಗಮನಿಸುವದು ಒಂದು ಸಾಧನೆಯಾಗಿದೆ. ಈ ರೀತಿಯ ವಿಶ್ಲೇಷಣೆಯು ವಿಚಲನೆಯ ಅಪಾಯವನ್ನೂ ಎದುರಿಸಬೇಕಾಗುತ್ತದೆ. ರೂಪಕದ ಆರಾಧನಾ ಕವಚದಿಂದ ಅದನ್ನು ಮತ್ತೂ ಮುಚ್ಚುವ ಕ್ರಿಯೆಯೂ ನಡೆಯುತ್ತದೆ; ಅದೇ ಸಮಯಕ್ಕೆ ನಿಯತಿಯ ಪ್ರಕಾರ, ಆ ಅಭಿವ್ಯಕ್ತಿಗಳಲ್ಲಿ ರೂಪಣೆಗೊಳ್ಳಲೇಬೇಕಾದ ಸಂಗತಿಗಳು ಜಿಜ್ಞಾಸೆಯ ಮೂಲಕ ಆ ಅಭಿವ್ಯಕ್ತಿಗಳಲ್ಲಿ ಇರುವ ಪ್ರತಿಮಾತ್ಮಕವಾದ ಸಂಗತಿಗಳನ್ನು ವಿಶ್ಲೇಷಿಸತೊಡಗುತ್ತವೆ. ಇಂತಹ ಎರಡು ಮಾರ್ಗಗಳು ಕ್ರಮೇಣ ತಮ್ಮದೇ ಮಾರ್ಗಗಳನ್ನು ಸೃಷ್ಟಿಸಿಕೊಂಡು ‘ಭಕ್ತಿ ಮಾರ್ಗ’ ಮತ್ತು ‘ಜ್ಞಾನ ಮಾರ್ಗ’ವೆಂದು ಎರಡು ಆಯಾಮಗಳನ್ನೇ ಸೃಷ್ಟಿಸಿಕೊಂಡವು. ಇಲ್ಲಿ ಯಾರದೂ ತಪ್ಪು ಎಂದು ಹೇಳಲು ಬರುವದಿಲ್ಲ. ಬಹುತೇಕವಾಗಿ ಜನ ಮಾನಸವು ಭಕ್ತಿಯ ಹಂತದಲ್ಲಿ ತಮ್ಮ ಕೃತಕೃತ್ಯತೆಯನ್ನು ಅನುಭವಿಸಲು ಇಷ್ಟಪಡುತ್ತದೆ. ಏಕೆಂದರೆ ಇದು ಜ್ಞಾನ ಮಾರ್ಗದಷ್ಟು ಕಠಿಣ ನಿಯಮಗಳನ್ನು ಹೊಂದಿರುವದಿಲ್ಲ.

ದೃಷ್ಟಾರನೋರ್ವನು ತಾನು ದರ್ಶಿಸಿದ ‘ಪರಮ ಸತ್ಯ’ವನ್ನು, ಅವನು ಭವಬದುಕಿನ ವ್ಯವಸ್ಥೆಯಲ್ಲಿ ಇದ್ದಾಗ, ಆಯಾ ವ್ಯವಸ್ಥೆಗನುಗುಣವಾಗಿ ಸಂವಹನಕ್ಕೆ ಅವಕಾಶ ಒದಗಿಸುವ ಭಾಷಾ ವ್ಯವಸ್ಥೆಯಲ್ಲಿ ಲಭ್ಯವಿರುವ ‘ಶಬ್ದಗಳಲ್ಲಿಯೇ’ ಅಭಿವ್ಯಕ್ತಗೊಳಿಸುತ್ತಾನೆ. ಆದರೆ ಈ ದರ್ಶನದ ಹಂತದ ಧ್ವನಿಗಳು ಆಕಾಶದಿಂದಲೇ ಸ್ವರೂಪವನ್ನು ನಿಗದಿಗೊಳಿಸಿಕೊಂಡೇ ಭೂಬದುಕಿನ ಶಬ್ದದ ಆಕಾರದಲ್ಲಿ ಪ್ರಕಟವಾಗುತ್ತವೆ. ಇದು ಪ್ರತಿಮಾ ಹಂತದ ಅಭಿವ್ಯಕ್ತಿ. ಹೀಗಾಗಿ, ಇಂತಹ ಪ್ರತಿಮಾ

ಹಂತದ ಅಭಿವ್ಯಕ್ತಿಯನ್ನು ಅದರ ನಿಗೂಢತೆಗೆ ಧಕ್ಕೆ ಬಾರದ ಹಾಗೆ, ಮುಂದಿನ ಪೀಳಿಗೆಗೆ ಒದಗಿಸುವ ಹೊಣೆಗಾರಿಕೆಯೂ ಒಂದು ಜ್ಞಾನದ ಮಾರ್ಗವೇ ಆಗಿದೆ.

'The Veda itself gives a key to the Veda' ಎನ್ನುವ ಮಾತಿದೆ. ವೇದ(ಗಳಿಗೆ)ಕ್ಕೆ ಇರುವ ಕಾಲಾತೀತ ಸ್ವಭಾವವು ಅದು ಅಭಿವ್ಯಕ್ತಗೊಳಿಸಲ್ಪಟ್ಟ ಭಾಷಾ ವ್ಯವಸ್ಥೆಯಲ್ಲಿ ರೂಪುಗೊಂಡಿದೆ. ಒಂದು ನಿಗದಿತ ಹಂತದಲ್ಲಿ ಮಾತ್ರ ಮಾನವನಿಗೆ ಈ ವೈಶ್ವಿಕ ಸತ್ಯಗಳನ್ನು ಅಭಿವ್ಯಕ್ತಗೊಳಿಸಲು ಭಾಷಾ ವ್ಯವಸ್ಥೆಯು ಸ್ಪಂದಿಸುತ್ತದೆ.

ವೇದಕ್ಕೆ ಇರುವ 'ಜ್ಞಾನಕಾಂಡ'ದ ಬಗೆಗಿನ ವಿವರಗಳು ಸಾಯಣರಿಂದಲೂ ಅಭಿವ್ಯಕ್ತಗೊಳಿಸಲ್ಪಡಲಿಲ್ಲ. ಜ್ಞಾನಕಾಂಡದ ಆಯಾಮಗಳು ಪ್ರಕಾಶನಗೊಳ್ಳಲಿಲ್ಲ. ಈ ಮೊದಲೇ ಹೇಳಿರುವಂತೆ, ಸತ್ಯಯುಗದ ಅವಧಿಯಲ್ಲಿಯೂ ಸಹಿತ ಕೊನೆಯ 'ಆನಂದ–ಚಿತ್–ಸತ್' ಹಂತಗಳ ಸುಸ್ಪಷ್ಟ ಅನುಭಾವವಾಗಿರುವ ಸಂಭವ ಕಡಿಮೆ. ಹಾಗಿದ್ದಲ್ಲಿ 'ಸಾವಿತ್ರಿ' ಈ 'ಆನಂದ–ಚಿತ್–ಸತ್' ಹಂತದ ಆಯಾಮವನ್ನು ಪ್ರಕಾಶನಗೊಳಿಸುತ್ತದೆ ಎಂದಾಗುತ್ತದೆ.

ಮಾನವನ ಪ್ರಜ್ಞಾ ಹಂತದಲ್ಲಿ ಅಧಿಮಾನಸ–ಅತಿಮಾನಸ–ಚೇತನದ–ಮೂಲಕವೇ ಋತ–ಚೇತನವನ್ನು ದರ್ಶಿಸಬಹುದು ಎಂದು ಸಾವಿತ್ರಿಯ ಸೂತ್ರ. ಅದರ ಪಥವನ್ನು ಸಾವಿತ್ರಿ ನಿರ್ಮಿಸಿದೆ. ಹಾಗೆಂದು ಮೊದಲಿನ ಸ್ತರಗಳಲ್ಲಿ ನಿರ್ಮಿತಿಗೊಂಡ ಅನುಭವಿಸಿದ 'ಸಂಗತಿಗಳನ್ನು' ಕಡೆಗಣಿಸುವಂತಿಲ್ಲ. ಇತ್ತೀಚೆಗೆ ಖಭೌತ ಶಾಸ್ತ್ರದಲ್ಲಿ ಸಂಶೋಧಿಸಲ್ಪಡುತ್ತಿರುವ (ಅದರ ಬಗೆಗೆ ಮತ್ತೆ ಬರೆಯುವೆ) ವೈಶ್ವಿಕ ಆಯಾಮಗಳ – ಸೃಷ್ಟಿ ವೈವಿಧ್ಯೋಗಳ ಕುರಿತೂ 'ಸಾವಿತ್ರಿ' ತನ್ನ 'ದರ್ಶನ'ದ ಹಂತದಲ್ಲಿ ಅನುಭವಗಳನ್ನು ಒಳಗೊಂಡಿದೆ. ಹೀಗಾಗಿ ಯಾವ ಕಾವ್ಯವು ಆಯಾ ಕಾಲದ/ಸಮಯದ ಚಿಂತಕನ–ಸಾಧಕನ ಸಾಧನೆಯ ಅನುಗುಣವಾಗಿ ದರ್ಶನವನ್ನು ಒದಗಿಸುವ ಅಭಿವ್ಯಕ್ತಿಗೆ 'ಮಂತ್ರಕಾವ್ಯ' ಎಂದೇ ಕರೆಯಲಾಗುತ್ತಿದೆ.

ಇದನ್ನು ಪುರಾವಿಸುವ ಸಂಗತಿಗಳನ್ನೂ ಸಹಿತ ಸಾವಿತ್ರಿಯ ಪ್ರಥಮ ದಳದಲ್ಲಿಯೇ ಕಾಣಬಹುದು. ಈ 'ಸತ್–ಚಿತ್–ಆನಂದ'ದ ಯಾತ್ರೆಗೆ ಅವಶ್ಯವಿರುವ ಮಾನವನ 'ಮನೋಸಾಮರ್ಥ್ಯ'ವು ಈಗ ಇರುವ ಹಂತಕ್ಕಿಂತಲೂ ಸಂಪೂರ್ಣ ಬೇರೆಯದೇ ಆದ ಆಯಾಮವನ್ನು ಆಶಿಸುತ್ತದೆ. ಅದು ಬಯಕೆಯ ಹಂತದಿಂದ ಅಭೀಪ್ಸೆಯ ಹಂತದ್ದಿರಬೇಕು. ಅದನ್ನೇ 'ಸಾವಿತ್ರಿ',

**ದರ್ಶನಕೆ ಸಿಗದ ಆತ್ಮಶಕ್ತಿಯದು ಅನವರತ ಅರಿಯಲೆಳಸಿ**
**ಸುಪ್ತ ಪ್ರಜ್ಞೆಯಲಿ ಚಿರದ ಕರ್ಮವಿದೆ ಮರುಕಳಿಸಿ ಜನಿಸಿ ಜನಿಸಿ**

(1–1– ಪುಟ 1)

ಎನ್ನುವ ಸಾಲುಗಳು ಸಕಲ ಚೇತನಕ್ಕೆ ಮೂಲ ಸೆಲೆಯಿತ್ತ ಆ ಘನದ ದಿವ್ಯ–ತಿಮಿರವಿದ್ದರೂ, ಅರಿವಿನಾಚೆಗಿಹ ಕಾಲವರಿಯದಿಹ ನಿಶ್ಶೂನ್ಯವಿಹುದು ತೀರ ಎನ್ನುವದು ಇದೇ ಈ ಸಕಲ ಚೇತನಕೆ ಮೂಲ ಸೆಲೆಯಿತ್ತ ತಿಮಿರವಾಗಿದೆ. ಇದು ನಮ್ಮ ಮನಸ್ಸಿನ (ವಿಶಾಲಾರ್ಥದಲ್ಲಿ ಹೇಳುವದಾದಲ್ಲಿ ಚಿತ್ತದ ಪ್ರಾರಂಭದ ಸ್ಥಿತಿಯನ್ನು) ತೋರುತ್ತಿದೆ. ಅಂಧಕಾರವೇ ಪ್ರಧಾನಾಂಶವಾಗಿರುವದು ಒಂದು ವೈಶ್ವಿಕ ಸೋಜಿಗ. ಇದನ್ನು ಶ್ರೀ ಅರವಿಂದರು 'ತಮದ ಆರ್ಣವಗಳಲ್ಲಿ (ಸಮುದ್ರಗಳಲ್ಲಿ) ಬೆಳಕಿನ ದ್ವೀಪಗಳಂತೆ' ಎಂದೇ ಬರೆಯುತ್ತಾರೆ. ಅದನ್ನೇ 'ಸಾವಿತ್ರಿ'ಯ ಪ್ರಥಮ ದಳವು,

**ನಿಶ್ಶಬ್ದದಾಳ ನಿಶ್ಶೂನ್ಯದಲ್ಲಿ ಚಿಂತನವ ಬಿತ್ತಿ ಅಂದು**
**ಘನತಿಮಿರದಾಳದೆದೆಯಲ್ಲಿ ಆಗ ಉದಿಸಿತ್ತು ಪ್ರಜ್ಞೆ ಬಿಂದು**

(1–1– ಪುಟ 3)

ಎಂದು ವಿವರಿಸಿದ್ದಾರೆ.

ಇವೆಲ್ಲ ಸಂಗತಿಗಳ ಜೊತೆಗೆ 'ಸಾವಿತ್ರಿ'ಯನ್ನು ಮಂತ್ರಕಾವ್ಯವೆಂದು ಆರಾಧಿಸಲಾಗುತ್ತಿದೆ. ಹೀಗೆ ಸಾವಿತ್ರಿಗೆ ಇರುವ ವಿವಿಧ ಆಯಾಮಗಳ– ಜ್ಞಾನ ಯೋಗದ, ಭಕ್ತಿ ಯೋಗದ ಹಾಗೂ ಅವೆರಡೂ ಪೂರ್ಣ ಯೋಗದ ನೆಲೆಗೆ–ಪಥ ನಿರ್ಮಿಸಿರುವದರ ಕುರಿತು, ಈ ಸಂಚಿಕೆಯಲ್ಲಿ ಪ್ರಥಮ 200 ಪುಟಗಳ ವರೆಗಿನ ಆಯ್ದ ಸಾಲುಗಳ ಕುರಿತು ಅಧ್ಯಯನದ ಸಂಗತಿಗಳನ್ನು ರೂಪಿಸಲು ಅಭೀಪ್ಸೆ ಹೊಂದಿದೆ. ಇನ್ನು ಈ ಸಂಚಿಕೆಯಲ್ಲಿ 'ಪ್ರೇಮ–ನಾದ'ದ ಕುರಿತಾದ ಆಯ್ದ ಸಾಲುಗಳಿವೆ. ಅವುಗಳಲ್ಲಿ ಅಂತರ್ಗತವಾಗಿರುವ ಆಯಾಮಗಳನ್ನು ಅರಿತುಕೊಳ್ಳುವ ಪ್ರಯತ್ನ ಇಲ್ಲಿದೆ. ಇದು ಆಯಾ ವ್ಯಕ್ತಿಗಳು/ಸಾಧಕರು ಅವರವರ ಪಥದಲ್ಲಿ ಕಂಡುಕೊಂಡಿರುವ ಸಂಗತಿಗಳೇ ವಿನಾ, ಇದೇ 'ಸಾವಿತ್ರಿಯ ಅಂತರಾರ್ಥ' ಅಲ್ಲ ಎನ್ನುವದನ್ನು ಇಲ್ಲಿ ಸ್ಪಷ್ಟಪಡಿಸಲಾಗುತ್ತದೆ.

ಇದೇ ರೀತಿಯಲ್ಲಿಯೇ ಮುಂದಿನ ಸಂಚಿಕೆಗಳಲ್ಲಿ, ಸಾವಿತ್ರಿಯ ಉಳಿದ ಪುಟಗಳ (ಪ್ರೇಮ–ನಾದದ ಕುರಿತು) ವಿಷಯಗಳನ್ನು ಒದಗಿಸಲಾಗುವದು. (ಪಿಪಿಕೆ)



Bonne Année
blessings

**“ಆ ದೇವಸ್ಪರ್ಶ ತಾನಿರಲು ಸರ್ವ–ಸರ್ವಸ್ವ ಘಟನೆಗೊಂಡು”**

**– ಶ್ರೀ ಅರವಿಂದರು (ಸಾವಿತ್ರಿ; ಪುಟ 3)**

## 1972
## ಸೌಹಾರ್ದತೆಯ ವರ್ಷ

ಈ ವರ್ಷವನ್ನು ಶ್ರೀ ಅರವಿಂದರ ಜ್ಞಾನವನ್ನು ಪಡೆದುಕೊಳ್ಳುವ ಸಲುವಾಗಿ ಪ್ರತಿಷ್ಠಾಪಿಸಲಾಗುತ್ತದೆ.

ಅವರ ಅಭಿವ್ಯಕ್ತಿಗಳನ್ನು ಇನ್ನೂ ಪರಿಣಾಮಕಾರಿಯಾಗಿ ಅರ್ಥೈಸಿಕೊಳ್ಳಲು ಮತ್ತು ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸಲಾಗುವದು, ಅವರು ಕೊಟ್ಟಿರುವ ಪ್ರಕಾಶಕ್ಕೆ, ಜ್ಞಾನಕ್ಕೆ ಮತ್ತು ಬಲಕ್ಕೆ – ಅವೆಲ್ಲವನ್ನೂ ಈ ಭೂಮಿಗೆ ಅವತರಣಗೊಳಿಸಿ ಔದಾರ್ಯಪೂರ್ಣವಾಗಿ ನಮಗೆ ದತ್ತಗೊಳಿಸಿರುವದಕ್ಕೆ, ನಾವು ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸಬೇಕಾಗಿದೆ.

ಅವರ ಉಪದೇಶಗಳು ನಮ್ಮನ್ನು ಜಾಗೃತಗೊಳಿಸುವಂತಾಗಲಿ, ನಮಗೆ ಮಾರ್ಗದರ್ಶನ ನೀಡಲಿ, ಮತ್ತು ನಾವು ಯಾವುದನ್ನು ಇಂದು ಮಾಡಿಲ್ಲವೋ ಅದನ್ನು ನಾಳೆಯೇ ಮಾಡುವಂತಾಗಲಿ.

ಇದಕ್ಕಾಗಿ ಎಲ್ಲ ರೀತಿಯಲ್ಲಿಯೂ ಪ್ರಾಮಾಣಿಕರಾಗಿ ಸೂಕ್ತ ದೃಷ್ಟಿಕೋನವನ್ನು ಹೊಂದುವಂತಾಗಲಿ, ಅಂದರೆ ಮಾತ್ರ ಇದು **"ನಿಜವಾಗಿಯೂ ಸೌಹಾರ್ದತೆಯ ವರ್ಷ"**ವಾಗುತ್ತದೆ.

**31 ಡಿಸೆಂಬರ್ 1971**

* * *

ದೇವಕೃಪೆ ಇಲ್ಲದೇ ಹೋದರೆ ನಾವು ಸೀಮಿತರಾಗುತ್ತೇವೆ, ಅಸಮರ್ಥರಾಗುತ್ತೇವೆ ಮತ್ತು ಅಸಹಾಯಕ ಜೀವಿಗಳಾಗುತ್ತೇವೆ. ದೈವತ್ವದ ಕೃಪೆ ಇದ್ದಲ್ಲಿ, ಮತ್ತು ನಮ್ಮನ್ನು ನಾವು ಸಂಪೂರ್ಣವಾಗಿಯೇ ಅವನಿಗೆ ಸಮರ್ಪಣೆಗೊಳಿಸಿಕೊಂಡಲ್ಲಿ, ಆಗ ಎಲ್ಲ ಸಾಧ್ಯತೆಗಳೂ ಲಭ್ಯವಾಗುವದಲ್ಲದೇ ನಾವೂ ಸಹಿತ ಸೀಮಾತೀತರಾಗುತ್ತೇವೆ.

ಶ್ರೀ ಅರವಿಂದರ ಶತಮಾನೋತ್ಸವದ ಈ ಸಂದರ್ಭದಲ್ಲಿ ವಿಶೇಷವಾಗಿರುವ ಸಹಾಯವೊಂದು ಈ ಭೂಮಿಯ ಮೇಲೆ ಅವತರಣಗೊಂಡಿದೆ. ಇದು ನಮ್ಮಲ್ಲಿರುವ ಅಹಂಕಾರವನ್ನು ಹೋಗಲಾಡಿಸಿ, ಪ್ರಕಾಶದಲ್ಲಿ ಲೀನಗೊಳ್ಳುವಂತೆ ಇರುವ ಈ ಸದವಕಾಶವನ್ನು ಸ್ವೀಕರಿಸೋಣ.

**1 ಜನವರಿ 1972**

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/16** **– ಶ್ರೀಮಾತೆ**

# ಶ್ರೀಮಾತೆಯವರ ದೃಷ್ಟಿಯಲ್ಲಿ 'ಸಾವಿತ್ರಿ'

**– ಅನುವಾದ: ಪುಟ್ಟು ಕುಲಕರ್ಣಿ**

## ಸಾವಿತ್ರಿ ಮಹತ್ವ

ಪ್ರತಿಯೊಬ್ಬರೂ ತಮ್ಮ ತಮ್ಮ ಜ್ಞಾನವನ್ನು ವಿಸ್ತಾರಗೊಳಿಸಿಕೊಳ್ಳುವ ಸಲುವಾಗಿ, ತಮ್ಮ ತಮ್ಮ ಜಾಣ್ಮೆಯನ್ನು ಪ್ರಗತಿಗೊಳಿಸಿಕೊಳ್ಳುವದರ ಸಲುವಾಗಿ ಮತ್ತು ಯಾವುದೇ ವಿಷಯದ ಕುರಿತು ಆಳವಾದ ಜ್ಞಾನವನ್ನು ಪಡೆದುಕೊಳ್ಳುವಲ್ಲಿ 'ಸಾವಿತ್ರಿ'ಯನ್ನು ಓದಲೇಬೇಕಾಗಿದೆ. ಭಕ್ತಿಯ ತಲ್ಲೀನತೆಯಲ್ಲಿ, ಸಮಾಧಿ ಹಂತದವರೆಗಿನ ಸಾಧನಾ ಕ್ರಮದಲ್ಲಿ ತನ್ನನ್ನು ತೊಡಗಿಸಿಕೊಂಡು, ಜೊತೆಗೆ ಈ ಹಂತದಲ್ಲಿಯೇ ಶ್ರೀ ಅರವಿಂದರಿಂದ ಸಹಾಯ–ಮಾರ್ಗದರ್ಶನ ಪಡೆಯಲು ಅವರ ಸಂಪರ್ಕಕ್ಕೆ ಬರಬೇಕಾಗಿದೆ. ಒಂದು ವೇಳೆ ಇವೆಲ್ಲ ಸಂಗತಿಗಳು ನಿಮಗೆ ಮೌಲ್ಯಯುತವೆನಿಸಿದಲ್ಲಿ, ಆಗ ನೀವು ಇವುಗಳನ್ನು ದಿನನಿತ್ಯವೂ ಆಚರಣೆ ಮಾಡಬೇಕಾಗುತ್ತದೆ. ಆದರೆ ಪ್ರಜ್ಞೆಯನ್ನು ಆವರಿಸಿರುವ ಸೋಮಾರಿತನವು ನಿಮ್ಮನ್ನು ಆ ರೀತಿ ಮಾಡದಂತೆ ಅಡೆತಡೆ ಒಡ್ಡುತ್ತಾ ಇರುತ್ತದೆ. ಈ ಆಧ್ಯಾತ್ಮಿಕ ಮತ್ತು ಪ್ರಜ್ಞಾಪೂರ್ಣವಾಗಿರುವ ಜೀವನವನ್ನು ಹೊಂದಲೆಂದೇ ನೀವು ಜನಿಸಿರುವದು. ಆದರೆ ಇದನ್ನು ಅರಿತುಕೊಳ್ಳುವಲ್ಲಿ ನೀವಿನ್ನೂ ಪ್ರಾರಂಭಾವಸ್ಥೆಯಲ್ಲಿ ಇರುವಿರಿ.

ಆಶೀರ್ವಾದಗಳು.

**– ಶ್ರೀಮಾತೆ: 'ಶ್ರೀಮಾತೆಯವರ ಉತ್ತರಗಳು' – 23 ಜುಲೈ 1969**

'ಸಾವಿತ್ರಿ' ನಿಮಗೆ ಅರ್ಥವಾಗುತ್ತಿಲ್ಲವೆಂದರೂ ಪರವಾಗಿಲ್ಲ, ಅದನ್ನು ಯಾವಾಗಲೂ ಅಧ್ಯಯನ ಮಾಡುತ್ತಲೇ ಇರಬೇಕು. ಈ ರೀತಿಯಲ್ಲಿ ಪ್ರತಿಬಾರಿ ಓದಿದಾಗಲೂ, ಹೊಸ ಹೊಸ ಅನುಭವವು ದೊರೆಯುತ್ತಿರುವದನ್ನು ನೀವು ಕಾಣುತ್ತೀರಿ; ಯಾವ ವಸ್ತು–ವಿಷಯಗಳು 'ಇಲ್ಲಿ' ಇಲ್ಲ ಎಂದುಕೊಂಡಿರುತ್ತೀರೋ ಅಥವಾ ಯಾವುದು ಇದುವರೆಗೂ ನಿಮಗೆ ಅರ್ಥವಾಗಿರಲಿಲ್ಲವೋ, ಅವೆಲ್ಲ ಇದ್ದಕಿದ್ದಂತೆಯೇ ಅವತರಿಸಿಕೊಂಡು ಸುಲಭದಲ್ಲಿ ಗ್ರಾಹ್ಯವಾಗುತ್ತವೆ, ಸುಸ್ಪಷ್ಟಗೊಳ್ಳುತ್ತವೆ. ಈ ರೀತಿಯ ಅನೀರಿಕ್ಷಿತವಾಗಿರುವ ದೃಷ್ಟಿಕೋನವು ತಾನೆ ತಾನಾಗಿ ಉದ್ಗಮಿಸುತ್ತದೆ – ಅದೂ ಸಾಲು ಸಾಲುಗಳಲ್ಲಿ ಅಥವಾ ಶಬ್ದಗಳಲ್ಲಿ ಅವತರಿಸುತ್ತದೆ. ಹೀಗಾಗಿ, ಪ್ರತಿ ಬಾರಿಯೂ ಇದನ್ನು ಓದಿ, ಅರ್ಥೈಸಿಕೊಳ್ಳಿ. ಇದರಿಂದ ಯಾವುದು

ಇಲ್ಲಿಯವರೆಗೂ ಪರದೆಯ ಹಿಂದೆ ಅಡಗಿತ್ತೋ ಅದು ತಂತಾನೆ ಪ್ರತ್ಯಕ್ಷವಾಗುತ್ತದೆ, ವೈವಿಧ್ಯತೆಯಿಂದ ಕೂಡಿಕೊಂಡೇ ಅನುಭವಕ್ಕೆ ದಕ್ಕುತ್ತದೆ. ನಾನು ಇಲ್ಲಿ ಖಚಿತವಾಗಿ ಹೇಳಬಯಸುವದೇನೆಂದರೆ, ನೀವು ಈ ಹಿಂದೆ ಓದಿರುವ ಸಾಲುಗಳೇ, ಮತ್ತೊಮ್ಮೆ ಓದುವಾಗ ಮತ್ತೊಂದು ಆಯಾಮದ ಬೆಳಕಿನಲ್ಲಿಯೇ ಗೋಚರಿಸುತ್ತವೆ. ಇದು ಯಾವಾಗಲೂ ಸುಸ್ಥಿರತೆಯಿಂದಲೇ ಕೂಡಿರುತ್ತದೆ. ನಿಮ್ಮ ಅನುಭವವು ಸಂಪೂರ್ಣತೆಯಿಂದಲೇ ಸಮೃದ್ಧವಾಗಿರುತ್ತದೆ. ಇದು ರಹಸ್ಯೋದ್ಘಾಟನೆಯ ಕ್ರಿಯೆಯೇ ಆಗಿರುತ್ತದೆ.

ಆದರೆ ನೀವು ಈ 'ಸಾವಿತ್ರಿ'ಯನ್ನು ಉಳಿದ ಪುಸ್ತಕಗಳನ್ನೋ ಅಥವಾ ದಿನಪತ್ರಿಕೆಗಳನ್ನೋ ಓದುವಂತೆ ಓದುವಂತಿಲ್ಲ. ಇದನ್ನು ಓದಲು ಪ್ರಾರಂಭ ಮಾಡುವಾಗ ನಿಮ್ಮ ಬುದ್ಧಿಯನ್ನು ಸಂಪೂರ್ಣವಾಗಿ ಶುದ್ಧವಾಗಿರಿಸಿಕೊಳ್ಳಬೇಕು, ಮುಕ್ತ ಮನಸ್ಸಿನಿಂದ ಓದಬೇಕು. ಆಗ ಬೇರೆ ಯಾವುದೇ ವಿಚಾರಗಳು ಅಡ್ಡ ಬರದಂತೆ ಇರಬೇಕು. ಸಂಪೂರ್ಣವಾಗಿ ಏಕಾಗ್ರಚಿತ್ತರಾಗಿ ಪಠಿಸಬೇಕು. ಮತ್ತೂ ಮತ್ತೂ ಮುಕ್ತರಾಗುತ್ತ ಹೋಗುವಂತೆ ನಿಮ್ಮ ಮನಸ್ಸನ್ನು ಪರಿಶುದ್ಧವಾಗಿರಿಸಿಕೊಳ್ಳುತ್ತ ಸಾಗಬೇಕು. ಪ್ರಶಾಂತಗೊಳಿಸಿಕೊಳ್ಳಬೇಕು. ಆಗ ಮಾತ್ರ, ಆ ಧ್ವನಿಪೂರ್ಣ ಶಬ್ದಗಳು, ನಾದಭರಿತ ಲಯವಿನ್ಯಾಸಗಳು, ಸ್ಪಂದನಗಳು ನೇರಾನೇರವಾಗಿ ಬಿಳಿಹಾಳೆಯ ಮೇಲೆ ಧಾರಾಕಾರವಾಗಿ ಪ್ರವೇಶಗೊಳ್ಳುತ್ತವೆ. ಈ ಧ್ವನಿಪೂರ್ಣ ಶಬ್ದಗಳೇ ನಿಮ್ಮ ಬುದ್ಧಿಯನ್ನೂ ಪ್ರಭಾವಿಸುತ್ತವೆ. ಅದರ ಮೇಲೆ ಮಹತ್ತರವಾದ ಮೊಹರನ್ನು ಹಾಕುತ್ತವೆ. ನಿಮಗೆ ಯಾವುದೇ ರೀತಿಯ ಒತ್ತಡವಿಲ್ಲದಂತೆಯೇ ತಾನೇ ತಾನಾಗಿ ಅದರ ವಿವರಗಳು ಲಭ್ಯವಾಗುತ್ತ ಬರುತ್ತವೆ.

ನಿಮ್ಮನ್ನು ನೀವು ಔನ್ನತ್ಯದ ಪರಮಾವಧಿಗೆ ಆರೋಹಣಗೊಳಿಸಿಕೊಳ್ಳಲು 'ಸಾವಿತ್ರಿ' ಒಂದೇ ಸಾಕು. 'ಸಾವಿತ್ರಿ'ಯನ್ನು ನಿಜವಾಗಿ ಅರ್ಥೈಸಿಕೊಳ್ಳುವದು ಹೇಗೆ ಎಂದು ಹಾಗೂ ಅದಕ್ಕಾಗಿ ಯಾವ ರೀತಿಯಲ್ಲಿ ಏಕಾಗ್ರತೆಯಲ್ಲಿ ಧ್ಯಾನಸ್ಥರಾಗಬೇಕು ಎನ್ನುವದು ತಿಳಿದಿರುವಲ್ಲಿ, ಆಗ ಎಲ್ಲ ರೀತಿಯ ಸಹಾಯಗಳು ತಾನೇ ತಾನಾಗಿ ಲಭ್ಯಗೊಳ್ಳುತ್ತವೆ. ಯಾರು ಈ ಪಥದಲ್ಲಿ ಸಾಗಲು ಇಚ್ಛಿಸುತ್ತಾರೋ, ಅವರಿಗೆ ಇಲ್ಲಿ ಸುಸಂಬದ್ಧವಾದ ಸುಭದ್ರವಾಗಿರುವ ಸಹಾಯವು ಆ ಪರಮಾತ್ಮನಿಂದ ಲಭ್ಯವಾಗುತ್ತದೆ. ಆ ದೇವನು ಸ್ವತಃ ತನ್ನ ಕರಗಳಲ್ಲಿಯೇ ನಿಮ್ಮನ್ನು ಕರೆದುಕೊಂಡು ಹೋಗುತ್ತಾನೆ. ನಿಮ್ಮನ್ನು ಗುರಿಗೆ ತಲುಪಿಸುತ್ತಾನೆ. ಇದಾದ

ಮೇಲೆ, ನಿಮ್ಮಲ್ಲಿ ಯಾವುದೇ ಪ್ರಶ್ನೆಗಳು ಬಂದರೂ, ಅದು ನಿಮ್ಮ ಯಾವುದೇ ವೈಯಕ್ತಿಕ ಹಂತದೊಳಗಿನ ವಿಷಯವಾಗಿದ್ದರೂ, ಅವೆಲ್ಲಕ್ಕೂ ಇಲ್ಲಿ ಪರಿಹಾರವಿದೆ. ಪ್ರತಿಯೊಂದು ತೊಂದರೆಗೂ ಇಲ್ಲಿ ಪರಿಹಾರ ಲಭ್ಯವಿದೆ. ಆದರೆ ಇದಕ್ಕಾಗಿ 'ಯೋಗ' ಪಥದಲ್ಲಿ ಸಾಗುವ ಅವಶ್ಯಕತೆ ಇದೆ.

"ಇಡೀ ವಿಶ್ವವನ್ನೇ ಈ ಒಂದೇ ಒಂದು ಗ್ರಂಥದಲ್ಲಿ ಅವರು ಅಳವಡಿಸಿದ್ದಾರೆ". ಇದೊಂದು ಅತ್ಯದ್ಭುತವಾಗಿರುವ ಕೃತಿ. ಆತ್ಯಾಕರ್ಷಕವಾಗಿ ಮಹತ್ವಪೂರ್ಣವಾಗಿದೆ. ಯಾವುದರೊಂದಿಗೂ ಹೋಲಿಸಲಾಗದ ಪರಿಪೂರ್ಣತೆಯಲ್ಲಿ ಇದೆ. 'ಸಾವಿತ್ರಿ'ಯನ್ನು ರಚಿಸುವ ಪೂರ್ವದಲ್ಲಿ ಶ್ರೀ ಅರವಿಂದರು ನನಗೆ ಏನು ಹೇಳಿದ್ದಾರೆ ಗೊತ್ತಿದೆಯೇ?, "ನಾನೊಂದು ನೂತನ ಆವಿಷ್ಕಾರವನ್ನು ಕೈಕೊಳ್ಳಲು ಪ್ರೇರೇಪಣೆಗೆ ಒಳಪಡಲ್ಪಟ್ಟಿದ್ದೇನೆ; ಪ್ರಾರಂಭದಲ್ಲಿ ನಾನು ಅದಕ್ಕೆ ಹಿಂಜರಿದಿದ್ದೆ, ಆದರೆ ಇದೀಗ ನಾನು ಅದನ್ನು ನಿರ್ಧರಿಸಿ ಆಗಿದೆ. ಆದರೆ ಈಗಲೂ ನಾನು ಅದರಲ್ಲಿ ಎಷ್ಟು ಯಶಸ್ವಿಯಾಗುತ್ತೇನೆಯೋ ಎನ್ನುವದು ನನಗೆ ಗೊತ್ತಿಲ್ಲ. ನನಗೆ ಸಹಾಯ ಬೇಕು ಎಂದು ಪ್ರಾರ್ಥಿಸುತ್ತೇನೆ". ಅದು ಏನಾಗಿತ್ತು ಎನ್ನುವದು ನಿಮಗೆ ಗೊತ್ತಿದೆಯೇ? – ಅದು ಪ್ರಾರಂಭಕ್ಕಿಂತಲೂ ಮುನ್ನ, ಈ ವಿಷಯದಲ್ಲಿ ನಿಮ್ಮನ್ನು ನಾನು ಮುಂಚಿತವಾಗಿಯೇ ಸಿದ್ಧಗೊಳಿಸುತ್ತಿದ್ದೇನೆ, – ಇದು ಅವರು ಮಾತನಾಡುವ ರೀತಿಯೂ ಆಗಿತ್ತು, ಅದು ಸಂಪೂರ್ಣ ವಿನಮ್ರತೆಯಿಂದ ಹಾಗೂ ದೈವಿಕ–ಸವಿನಯತೆಯಿಂದಲೂ ಕೂಡಿತ್ತು. ಅವರು ತಮ್ಮನ್ನು ತಾವು ಎಂದಿಗೂ – ಪ್ರತಿಪಾದಿಸಿಕೊಳ್ಳಲಿಲ್ಲ. ಅದು ನಿಖರವಾಗಿ ಪ್ರಾರಂಭವಾದ ದಿನವೇ, ಅವರು ನನಗೆ ಹೇಳಿದ್ದೇನೆಂದರೆ, 'ಅನಂತಾನಂತವಾಗಿರುವ ಈ ಸುವ್ಯಾಪ್ತತೆಯ ಯಾನಕ್ಕಾಗಿ, ಚುಕ್ಕಾಣಿ ಇಲ್ಲದ ಹಡಗಿನಲ್ಲಿ ನನ್ನನ್ನೇ ನಾನೀಗ ತೊಡಗಿಸಿಕೊಳ್ಳುತ್ತಿದ್ದೇನೆ'. ಯಾವಾಗ ಅವರು ಈ ರೀತಿಯಲ್ಲಿ ತಿಳಿಸಿ, ಪಯಣ ಪ್ರಾರಂಭಿಸಿದರೋ, ಅಂದಿನಿಂದ ಯಾವುದೇ ವಿಶ್ರಾಂತಿಯನ್ನು ತೆಗೆದುಕೊಳ್ಳದೇ ಪುಟಗಟ್ಟಳೇ ಬರೆಯಲು ಪ್ರಾಂಭಿಸಿದರು. ಅದನ್ನು ಗಮನಿಸಿದರೆ, ಆ ವಿಷಯವು ಸಂಪೂರ್ಣವಾಗಿಯೇ ಅವತರಿಸಿಕೊಂಡು, ಅವರ ಮೂಲಕ ಇಲ್ಲಿ 'ಲಿಪಿ' ಸ್ವರೂಪದಲ್ಲಿ ದಾಖಲಾಗತೊಡಗಿತು ಎನಿಸುತ್ತದೆ.

ನಿಜವಾಗಿಯೂ ಈ 'ಸಾವಿತ್ರಿ'ಯ ಸಂಪೂರ್ಣ ಸ್ವರೂಪವು 'ಸಮಗ್ರತೆಯ ಒಟ್ಟಂದ'ವಾಗಿಯೇ, ಆ ಊರ್ಧ್ವಾತಿಊರ್ಧ್ವದಿಂದ – ಆ ವಲಯದಿಂದ –

ಅವತರಣಗೊಂಡಿದೆ. ಶ್ರೀ ಅರವಿಂದರು ಇಲ್ಲಿ ತಮ್ಮ ಪ್ರತಿಭಾ ಸಾಮರ್ಥ್ಯದಿಂದ ಅದನ್ನು ಒಂದು ಸರ್ವೋಚ್ಚ ಹಾಗೂ ಅತ್ಯಾಕರ್ಷಕವಾಗಿರುವ ರೀತಿಯಲ್ಲಿ ಸಂಯೋಜಿಸಿದ್ದಾರೆ. ಕೆಲವು ಸಂದರ್ಭಗಳಲ್ಲಿ ಸಂಪೂರ್ಣ ಪಂಕ್ತಿ–ಪಂಕ್ತಿಗಳೇ ಸಂಪೂರ್ಣವಾಗಿ ತಾವೆ ತಾವಾಗಿ ಪ್ರಕಟಗೊಂಡಿರುವಾಗ, ಶ್ರೀ ಅರವಿಂದರು ಅವುಗಳನ್ನು ನೇರಾನೇರವಾಗಿ ಹಾಗೆಯೇ ಪ್ರಕಾಶನಗೊಳಿಸಿದ್ದಾರೆ. ದಣಿವಿನ ಲವಶೇಷವೂ ಇಲ್ಲದೇ, ಪರಿಶ್ರಮಿಸಿದ್ದಾರೆ. ಹೀಗಾದಾಗ ಮಾತ್ರವೇ ಆ ತುರೀಯದಲ್ಲಿರುವ ಆ ಶೃಂಗದಿಂದ ಪ್ರೇರಣೆಯು ಲಭ್ಯವಾಗುತ್ತದೆ. ಇಂತಹ ಅತ್ಯದ್ಭುತವಾಗಿರುವ ಸೃಷ್ಟಿ ಇದು, ಹೌದು, ಇದು ತಂತಾನೇ ಸೃಷ್ಟಿಸಲ್ಪಟ್ಟಿರುವ ಅತ್ಯದ್ಭುತವಾದ ಘಟನೆಯಾಗಿದೆ! ಇದು ಅತ್ಯಂತ ನೈಜ ಸೃಷ್ಟಿಯೂ ಆಗಿದೆ. ಇದೊಂದು ಯಾವುದಕ್ಕೂ ಹೋಲಿಸಲಾಗದ ಅಸಾಮಾನ್ಯ ಸಂಗತಿಯಾಗಿದೆ. ಇಲ್ಲಿ ಸರ್ವಸ್ವವೂ ಇದೆ. ಅದರಲ್ಲೂ ಇಲ್ಲಿ ಈ ಸರ್ವಸ್ವವೆಲ್ಲವೂ ಅತ್ಯಂತ ಸರಳವಾಗಿಯೇ ಸಂಯೋಜಿಸಲ್ಪಟ್ಟಿವೆ; ಸುಸ್ಪಷ್ಟವಾಗಿಯೇ ಪ್ರಕಟಿಸಲ್ಪಟ್ಟಿವೆ; ಸೌಷಮ್ಯಭರಿತವಾದ ಛಂದವನ್ನು ಹೊಂದಿರುವ ಲಯದಲ್ಲಿವೆ. ಪಾರದರ್ಶಕವಾಗಿರುವಂತೆಯೇ ಸುಸ್ಪಷ್ಟವಾಗಿ ಜೊತೆಗೆ ಶಾಶ್ವತ ಸತ್ಯವನ್ನು ಪ್ರಕಾಶನಗೊಳಿಸುತ್ತಿವೆ. ಓ ಕಂದಾ, ನಾನು ಇದನ್ನು ಹಲವಾರು ಬಾರಿ ಓದಿದ್ದೇನೆ. ನಾನು ಈಗಾಗಲೇ ಗ್ರೀಕ್, ಲ್ಯಾಟಿನ್, ಇಂಗ್ಲೀಷ್ ಹಾಗೂ ಜೊತೆಜೊತೆಗೆ ಫ್ರೆಂಚ್ ಭಾಷೆಯ ಮತ್ತೆ ಜರ್ಮನ್ ಭಾಷೆಯ ಅತ್ಯುತ್ತಮ ಸಾಹಿತ್ಯ ಕೃತಿಗಳನ್ನು ಅಭ್ಯಾಸ ಮಾಡಿದ್ದೇನೆ, ಅಲ್ಲದೇ ಪೂರ್ವ ಮತ್ತು ಪಶ್ಚಿಮದ ಮಹತ್ವದ ಕೃತಿಗಳನ್ನು – ಅದರಲ್ಲೂ ಮಹಾಕಾವ್ಯಗಳನ್ನೂ ಒಳಗೊಂಡಂತೆ – ಅಧ್ಯಯನ ಮಾಡಿದ್ದೇನೆ. ಆದರೆ, ಇಲ್ಲಿ ನಾನು ಪದೇ ಪದೇ ಪುನರಾವರ್ತನೆಯಿಂದಲೇ ಹೇಳುವದೇನೆಂದರೆ, ಎಲ್ಲಿಯೂ ಈ 'ಸಾವಿತ್ರಿ'ಗೆ ಸಮಾನವಾಗಿರುವ ಕೃತಿಗಳನ್ನು ಕಂಡಿಲ್ಲ. ಸಾವಿತ್ರಿ ಎದುರು ಇವೆಲ್ಲವೂ ಶೂನ್ಯವಾಗಿ, ಪೇಲವವಾಗಿ, ಪೊಳ್ಳು–ಪೊಳ್ಳಾಗಿ ಮತ್ತು ಯಾವುದೇ ರೀತಿಯಲ್ಲಿಯೂ ಸತ್ಯದ ಘನಸ್ವರೂಪವನ್ನು ತಿಳಿಸದೇ ಇರುವಂತೆಯೇ ಕಾಣುತ್ತವೆ, ಎಲ್ಲವೂ ಇದೇ ರೀತಿಯಲ್ಲಿ ಇವೆ ಎಂತಲ್ಲ, ಅಪರೂಪಕ್ಕೆ ಕೆಲವೊಂದು ಉತ್ತಮ ಕೃತಿಗಳೂ ಇವೆ. ಆ ರೀತಿಯಲ್ಲಿ ಇವುಗಳು ಇದ್ದರೂ ಸಹಿತ, ಅವೆಲ್ಲವೂ 'ಸಾವಿತ್ರಿ'ಯ ಕೆಲವೆ ಕೆಲವು ಭಾಗಗಳಿಗೆ ಮಾತ್ರ ಹೋಲಿಸಬಹುದಾಗಿದೆ. ಸಾವಿತ್ರಿಯು ಭವ್ಯತೆ ಮತ್ತು ವೈಶಾಲ್ಯಮಯ ಆಯಾಮವನ್ನು ಜೊತೆಗೆ 'ಸತ್ಯ'ವನ್ನೂ ಹೊಂದಿದೆ. ಇಂತಹ ಅಮರತ್ವದ ಹಾಗೂ ಶಾಶ್ವತವಾದ

ಸೃಷ್ಟಿಯನ್ನು ಶ್ರೀ ಅರವಿಂದರು ನೀಡಿದ್ದಾರೆ. ನಾನು ಪುನಃ ಹೇಳುವದೇನೆಂದರೆ, ಇಡೀ ಜಗತ್ತಿನಲ್ಲಿ ಇದಕ್ಕೆ ಪ್ರತಿಯಾಗಿ ಬೇರೆ ಏನೂ ಇಲ್ಲ. ಒಂದು ವೇಳೆ ಯಾರಾದರೂ ಈ ಸತ್ಯದ ದೃಷ್ಟಿಕೋನವನ್ನು ಬಿಟ್ಟು ನೋಡಿದರೆ, ಹಾಗೂ ಪ್ರೇರಣೆಗೆ ಅತ್ಯಗತ್ಯವಾಗಿರುವ ಸಾರವನ್ನು ಬಿಟ್ಟು ನೋಡಿ, ಅದನ್ನು ಕೇವಲ ಒಂದು ಕಾವ್ಯವೆಂದು ಪರಿಗಣಿಸಿಕೊಂಡು ಓದಿದರೂ ಸಹಿತ, ಆಗಲೂ ಅಲ್ಲಿ ಅದರದೇ ಆದ ಅಸ್ಮಿತೆಯನ್ನು ಕಾಣುತ್ತಾನೆ. ಅದರಲ್ಲೂ ಔನ್ನತ್ಯದ ಶಾಸ್ತ್ರೀಯ ಸ್ವಭಾವದಲ್ಲಿಯೇ ಗಣಿಸುತ್ತಾನೆ. ಶ್ರೀ ಅರವಿಂದರು ಏನನ್ನು ಸೃಷ್ಟಿಸಿದ್ದಾರೆಯೋ, ಅದನ್ನು ಸಾಮಾನ್ಯ ಜನರು ಊಹಿಸಲೂ ಸಾಧ್ಯವಿಲ್ಲ. ಅದಕ್ಕಾಗಿಯೇ ಹೇಳುವದು ಇಲ್ಲಿ ಎಲ್ಲವೂ ಇದೆ. ಎಲ್ಲರಿಗಾಗಿಯೂ ಇದೆ. ಯಾವಾಗಲೂ ಇದೆ.

ಈ ಎಲ್ಲ ಹಿನ್ನೆಲೆಯಲ್ಲಿ 'ಸಾವಿತ್ರಿ'ಯನ್ನು ಶ್ರುತಿ ಅಥವಾ ರಹಸ್ಯೋದ್ಘಾಟನದ ಕೃತಿ ಎಂದು ಹೇಳಬೇಕಾಗುತ್ತದೆ. ಇದೊಂದು 'ಧ್ಯಾನ'ವೂ ಆಗಿದೆ. ಇದು ಅನಂತತೆಯನ್ನು ಅರಸುವ ಹೃದಯಾಭಿಲಾಶೆಯಾಗಿದೆ. ಇದು ಶಾಶ್ವತವಾಗಿದೆ. ಅಮರತ್ವವನ್ನು ಪಡೆದುಕೊಳ್ಳುವ ಸಲುವಾಗಿ ಅಭೀಪ್ಸೆಯನ್ನು ಹೊಂದಿ ಇದನ್ನು ಅಧ್ಯಯನ ಮಾಡಿದಲ್ಲಿ, ಇದರ ಓದುವಿಕೆಯೇ ಅಮರತ್ವದೆಡೆಗೆ ಮಾರ್ಗದರ್ಶನ ಮಾಡುತ್ತ ಕರೆದೊಯ್ಯುತ್ತದೆ. ಸಾವಿತ್ರಿಯನ್ನು ಪಠಣ ಮಾಡಲು ದಿವ್ಯವನ್ನು ಅರಿತುಕೊಳ್ಳಬೇಕು. ಯೋಗದ ಪ್ರತಿಯೊಂದು ಹೆಜ್ಜೆಯನ್ನೂ ಇಲ್ಲಿ ತಿಳಿಸಲಾಗಿದೆ, ಜೊತೆಗೆ ಇನ್ನುಳಿದ ಯೋಗಗಳ ರಹಸ್ಯವನ್ನೂ ಇಲ್ಲಿ ಹೇಳಲಾಗಿದೆ. ಯಾರೇ ಆಗಲಿ ಇದನ್ನು ಪ್ರಾಮಾಣಿಕವಾಗಿ ಅನುಸರಿಸಿದರೆ, ಇಲ್ಲಿ ಪ್ರಕಾಶನಗೊಳ್ಳುತ್ತಿರುವದನ್ನು ಅನುಸರಿಸಿದರೆ, ಇಲ್ಲಿರುವ ಪ್ರತಿಯೊಂದು ಸಾಲೂ ಸಹಿತ ಅಂತಿಮವಾಗಿ 'ಉನ್ಮನೀ–ಮನೋಭಾವದ (ಅತಿಮಾನಸದ) ಯೋಗ'ಕ್ಕೆ ರೂಪಾಂತರಣ–ಗೊಳಿಸುತ್ತದೆ. ಇದು ನಿಜವಾಗಿಯೂ ದೋಷಾತೀತವಾದ ಮಾರ್ಗದರ್ಶನವನ್ನೇ ಮಾಡುತ್ತಿದೆ. ಹೀಗಾಗಿ ಇದು ಯಾವುದೇ ಕಾರಣಕ್ಕೂ ನಿಮ್ಮನ್ನು ಎಂದಿಗೂ ಕೈಬಿಡುವದಿಲ್ಲ. ಇಲ್ಲಿರುವ ಶಬ್ದಗಳು ಮತ್ತು ಅಭಿವ್ಯಕ್ತಗೊಂಡಿರುವ ಸಾಲುಗಳು ಎಷ್ಟೊಂದು ಸುವ್ಯವಸ್ಥಿತವಾಗಿ ಸಂಯೋಜಿಸಲ್ಪಟ್ಟಿರುವವೆಂದರೆ, ಇಲ್ಲಿರುವ ನಾದದ ಅನುರಣನವು ಅದರ ಮೂಲಸ್ವರೂಪದ ಕಡೆಗೆ ಅಂದರೆ ನಾದಮೂಲವಾಗಿರುವ "ಓಂ"ದ ನೆಲೆಗೆ ಕರೆದೊಯ್ಯುತ್ತದೆ.

ಓ ಕಂದಾ, ಇಲ್ಲಿ ಸರ್ವಸ್ವವೂ ಇದೆ. ಹೌದು, ಎಲ್ಲವೂ ಇದೆ. ಅತೀಂದ್ರಿಯವಿದೆ, ಗುಹ್ಯಜ್ಞಾನವಿದೆ ಮತ್ತು ತತ್ತ್ವಜ್ಞಾನ, ವಿಕಾಸದ ಇತಿಹಾಸ,

ಮಾನವನ ಇತಿಹಾಸ, ದೇವತೆಗಳ ಇತಿಹಾಸ, ಸೃಷ್ಟಿಯ ಇತಿಹಾಸ, ಪ್ರಕೃತಿಯ ಇತಿಹಾಸ ಎಲ್ಲವೂ ಎಲ್ಲವೂ ಇದೆ. ಈ ವಿಶ್ವವು ಹೇಗೆ ರಚಿಸಲ್ಪಟ್ಟಿತು, ಏತಕ್ಕಾಗಿ ರಚಿತವಾಗಿದೆ, ಯಾವ ಉದ್ದೇಶಕ್ಕಾಗಿ ಈ ಹಂತಗಳು, ಅದರ ಗಮ್ಯ ಏನು – – ಹೀಗೆ ಎಲ್ಲವೂ ಇಲ್ಲಿದೆ. ನಿಮ್ಮ ಯಾವುದೇ ಪ್ರಶ್ನೆಗಳಿಗೂ ಇಲ್ಲಿ ನೀವು ಪರಿಹಾರವನ್ನು ಪಡೆದುಕೊಳ್ಳಬಹುದು. ಇಲ್ಲಿ ಪ್ರತಿಯೊಂದನ್ನೂ ವಿವರಣಾತ್ಮಕವಾಗಿಯೇ ರೂಪಿಸಲ್ಪಟ್ಟಿದೆ. ಅಷ್ಟೇ ಅಲ್ಲದೇ 'ಮನುಕುಲದ ಭವಿಷ್ಯವನ್ನೂ' ಮತ್ತು ವಿಕಾಸವನ್ನು ಸಹಿತ ಇಲ್ಲಿ ಹೇಳಲಾಗಿದೆ. ಇದುವರೆಗೂ ಯಾರಿಗೂ ಗೊತ್ತಾಗಿರದ ಸಂಗತಿಗಳನ್ನು ಇದು ಒಳಗೊಂಡಿದೆ. ಇವೆಲ್ಲ ಸಂಗತಿಗಳನ್ನೂ ಶ್ರೀ ಅರವಿಂದರು ಆಕರ್ಷಕವಾಗಿ, ಸುಲಭಾತಿ ಸುಸ್ಪಷ್ಟವಾಗಿರುವ ಶಬ್ದಗಳಲ್ಲಿ ವಿವರಿಸಿದ್ದಾರೆ. ಇದರಿಂದಾಗಿ, "ಯಾರು ಆಧ್ಯಾತ್ಮದ ಪಥದಲ್ಲಿ ಶೋಧನೆಗೆಂದು ಪಯಣಿಸುತ್ತಾರೆಯೋ", ಯಾರು ಇವೆಲ್ಲ ರಹಸ್ಯಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಾರೆಯೋ ಅವರು ಈ ಸಂಗತಿಗಳನ್ನು ಇಲ್ಲಿ ಸುಲಭವಾಗಿಯೇ ಕಂಡುಕೊಳ್ಳುತ್ತಾರೆ. ಆದರೆ, ಇಲ್ಲಿ ಈ ರಹಸ್ಯವು ಶಬ್ದಗಳಲ್ಲಿ ಮತ್ತು ಸಾಲು–ಸಾಲುಗಳಲ್ಲಿ ರಹಸ್ಯಮಯವಾಗಿರಿಸಲ್ಪಟ್ಟಿವೆ. ಹೀಗಾಗಿ ಇಲ್ಲಿ ಸಾಗುತ್ತಿರುವ ಪಥಿಕನು, ಆರೋಹಣಾ ಕ್ರಮದಲ್ಲಿಯೇ, ಅದಕ್ಕಾಗಿ ಅವಶ್ಯವಿರುವ ಹಂತದಲ್ಲಿ ಆ ಚೈತನ್ಯದ ಮೂಲವಾಗಿರುವ ಸತ್ಯದ ಪಥದಲ್ಲಿಯೇ ಶೋಧಿಸಬೇಕು. ಇಲ್ಲಿರುವ ಎಲ್ಲ ಪ್ರಹೇಳಿಕೆಗಳು (ಭವಿಷ್ಯವಾಣಿಗಳು) ಸುನಿರ್ದಿಷ್ಟವಾದ ಹಾಗೂ ವಿಸ್ಮಯಕರವಾದ, ಸುಸ್ಪಷ್ಟತೆಯಲ್ಲಿ ಅಭಿವ್ಯಕ್ತಗೊಂಡಿವೆ. ಶ್ರೀ ಅರವಿಂದರು ಇಲ್ಲಿ ಸತ್ಯದ ಸಾಕ್ಷಾತ್ಕಾರದ ಸಲುವಾಗಿ, ಚೇತನವನ್ನು ಶೋಧಿಸುವ ಸಲುವಾಗಿ, ರೂಪಾಂತರಣಕ್ಕಾಗಿ ಅವತರಣಗೊಳ್ಳುವ ಪ್ರಕಾಶವು ಹೇಗೆ ಧುಮ್ಮಿಕ್ಕಿ ಬರುತ್ತದೆ ಎನ್ನುವದನ್ನು ಅರಿತುಕೊಳ್ಳಲು, ನಿಮಗೆ ಒಂದು 'ಸೂತ್ರ'ವನ್ನು ಕೊಟ್ಟಿದ್ದಾರೆ. ಆ ಮೂಲಕ ಸಮಸ್ಯೆಗಳನ್ನು ಪರಿಹರಿಸಿಕೊಂಡು, ರೂಪಾಂತರವನ್ನು ಪಡೆಯಬೇಕಾಗಿದೆ.

ಇದರ ಪಥವನ್ನು ಅವರು ತೋರಿಸಿದ್ದಾರೆ. ಈ ಮೂಲಕ ಅಜ್ಞಾನದ ಕವಚದಿಂದ ಹೊರಬಂದು ಮುಕ್ತರಾಗಿ ತಮ್ಮನ್ನು ತಾವೇ ರೂಪಾಂತರಣ–ಗೊಳಿಸಿಕೊಳ್ಳುವದು ಹೇಗೆ ಎನ್ನುವದನ್ನು ಇಲ್ಲಿ ರೂಪಿಸಿದ್ದಾರೆ. ಆರೋಹಣಾ ಪಥದ ಮೂಲಕ ಅತಿ ಚೇತನದ ಹಂತದವರೆಗೂ ಸಾಗುವ ಪಥ ಇದಾಗಿದೆ.

ಪ್ರತಿಯೊಂದು ಹಂತದಲ್ಲಿ, ಚೇತನದ (ಪ್ರಜ್ಞೆಯ) ಪ್ರತಿಯೊಂದು ಸ್ತರದಲ್ಲಿ, ಅವುಗಳನ್ನು ಹೇಗೆ ಅರ್ಥೈಸಿಕೊಳ್ಳುತ್ತ ಸ್ಪಂದಿಸಬೇಕು, ಸಾವಿನ ಅಡೆತಡೆಯನ್ನೂ ಸಹಿತ ಹೇಗೆ ಮೀರಲು ಸಾಧ್ಯ ಹಾಗೂ ಅಮರತ್ವವನ್ನು ಪಡೆದುಕೊಳ್ಳುವ ಪಥದ ವಿವರಣೆಗಳು ಇಲ್ಲಿವೆ. ನಿಮ್ಮ ಯಾನಕ್ಕಾಗಿ ಇರುವ ಎಲ್ಲ ವಿವರಗಳನ್ನೂ ಇಲ್ಲಿ ಕಾಣಬಹುದು. ಅದಕ್ಕಿಂತಲೂ ಮಿಗಿಲಾದ ವಿವರಗಳೂ ಇಲ್ಲವೆ. 'ಸಾವಿತ್ರಿ'ಯನ್ನು ಓದುವದೇ ಒಂದು ನೈಜ ಅನುಭವವಾಗಿದೆ; ಅನುಭಾವವೂ ಆಗಿದೆ. ಮಾನವನು ಪಡೆದುಕೊಳ್ಳಬಹುದಾದ ಎಲ್ಲ ರಹಸ್ಯಗಳೂ ಇಲ್ಲಿವೆ. ಇವೆಲ್ಲ ಸಂಗತಿಗಳನ್ನೂ ಶ್ರೀ ಅರವಿಂದರು ಪ್ರಕಾಶನಗೊಳಿಸಿದ್ದಾರೆ. ತನ್ಮೂಲಕ ಭವಿಷ್ಯದಲ್ಲಿಯೂ ಇದನ್ನು ಕಾಣಲು ಸಾಧ್ಯವಿದೆ. ಇವೆಲ್ಲ ಸಂಗತಿಗಳು ಸಾವಿತ್ರಿಯ ಆಂತರ್ಯದಲ್ಲಿ ಹುದುಗಿಸಿಡಲ್ಪಟ್ಟಿವೆ. ಇಲ್ಲಿ ಮುಖ್ಯವಾಗಿ ಬೇಕಾಗಿರುವದು ಇದನ್ನು ಸಂಶೋಧಿಸುವ ಜ್ಞಾನ. ಸಾವನ್ನು ಜಯಿಸುವ ವಿಧಾನವನ್ನು ಅನುಭವದ ಮೂಲಕವೇ ಪಡೆದುಕೊಳ್ಳುವ ಸಂಗತಿ ಇಲ್ಲಿದೆ. ಅಲ್ಲಿರುವ ಎಲ್ಲ ಹಂತಗಳನ್ನೂ ಶ್ರೀ ಅರವಿಂದರು ಅಭಿವ್ಯಕ್ತಗೊಳಿಸಿದ್ದಾರೆ. ಈ ಹೆಜ್ಜೆಗಳೇ "ಪೂರ್ಣ ಯೋಗ"ದ ಪಥದಲ್ಲಿ ಪರಿಪೂರ್ಣತೆಯನ್ನು ಪಡೆದುಕೊಳ್ಳುವ ಹಾಗೂ ಪ್ರಗತಿ ಹೊಂದುವ ವಿವರಗಳಿವೆ.

ಇದೆಲ್ಲವೂ ನನ್ನ ಸ್ವಯಂ ಅನುಭವವೂ ಹೌದು. ಅದಕ್ಕಿಂತಲೂ ಹೆಚ್ಚಾಗಿ ಇದು ಅತ್ಯಂತ ಅಚ್ಚರಿದಾಯಕವಾಗಿರುವ ಅನುಭವವಾಗಿದೆ. ಇದು ನನ್ನದೇ ಸಾಧನೆ ಆಗಿದ್ದರೂ ಅದರ ರೂವಾರಿ ಅವರೇ ಆಗಿದ್ದಾರೆ. ಪ್ರತಿ ಸಂಗತಿಯಲ್ಲಿ, ಪ್ರತಿಯೊಂದು ಘಟನೆಯಲ್ಲಿ, ಪ್ರತಿಯೊಂದು ಸಾಕ್ಷಾತ್ಕಾರದಲ್ಲಿ, ಎಲ್ಲ ವಿವರಣಾತ್ಮಕ ಸಂಗತಿಗಳೊಡನೆ, ಅದಕ್ಕಿಂತಲೂ ವರ್ಣಗಳ (ಬಣ್ಣಗಳ) ವಿಷಯದಲ್ಲಿಯೂ ಸಹಿತ, ಯಾವುದನ್ನು ನಾನು ಕಂಡಿದ್ದೆನೋ, ಅದನ್ನೇ ಹೂಬೇಹೂಬಾಗಿ ಅವರು ತಮ್ಮ ಶಬ್ದಗಳಲ್ಲಿ ಹೇಳುತ್ತಿದ್ದರು. ಉಕ್ತಿಗಳೂ ಸಹಿತ ಯಥಾವತ್ತಾಗಿಯೇ ನಾನು ಕೇಳಿದಂತೆಯೇ ಇರುತ್ತಿದ್ದವು. ನಾನು ಪುಸ್ತಕವನ್ನು ಓದುವದಕ್ಕಿಂತ ಮೊದಲೇ ನಡೆದ ಘಟನೆಗಳು ಇವು. ಇದಾದ ನಂತರದಲ್ಲಿ ನಾನು ಸಾವಿತ್ರಿಯನ್ನು ಹಲವಾರು ಬಾರಿ ಓದಿದ್ದೇನೆ. ಆದರೆ ಅದಕ್ಕಿಂತ ಮೊದಲು, ಅಂದರೆ ಅದನ್ನು ಶ್ರೀ ಅರವಿಂದರು ರಚಿಸುತ್ತಿದ್ದಾಗ, ಅವರು ಅದನ್ನು ನನ್ನೆದುರು ಓದುತ್ತಿದ್ದರು. ಪ್ರತಿದಿನ ಮುಂಜಾನೆ ನಾನು ಅವರಿಂದ ಈ ಸಾವಿತ್ರಿಯನ್ನು ಆಲಿಸಿದ್ದೇನೆ.

ರಾತ್ರಿಯ ಸಮಯದಲ್ಲಿ ಅವರು ಅದನ್ನು ಬರೆಯುತ್ತಿದ್ದರು. ಅದನ್ನೆ ಮರುದಿನ ಮುಂಜಾನೆ ನನ್ನೆದುರು ಓದುತ್ತಿದ್ದರು. ನಾನು ಯಾವುದನ್ನು ಹಿಂದಿನ ರಾತ್ರಿಯಲ್ಲಿ ಪದ–ಪದಗಳಲ್ಲಿ ಕಾಣುತ್ತಿದ್ದೆನೋ ಅದನ್ನೇ ಅವರು ಓದುತ್ತಿದ್ದರು. ಹೌದು, ಅಲ್ಲಿ ಎಲ್ಲ ವಿವರಣೆಗಳು, ವರ್ಣಗಳು ನಾನು ಕಂಡ ದೃಶ್ಯಗಳು, ನಾನು ಆಲಿಸಿದ ಶಬ್ದಗಳು ಎಲ್ಲವೂ ಎಲ್ಲವೂ ಇರುತ್ತಿದ್ದವು. ಆದರೂ ಅವರು ಓದುವದನ್ನು ನಾನು ಕೇಳುತ್ತಿದ್ದೆ, ಅವರ ಅಪ್ರತಿಮ ಕಾವ್ಯದ ಮೂಲಕ ಅವರನ್ನು ಈ ಅಪ್ರತಿಮ ಕಾವ್ಯದಲ್ಲಿ ಕಾಣುತ್ತಿದ್ದೆ. ಅವೆಲ್ಲವೂ ನಾನು ಕಂಡ ಅನುಭವಕ್ಕೇ ಸಮಸಮವಾಗಿಯೇ ಇರುತ್ತಿದ್ದವು. ಇದು ಕೇವಲ ಆಕಸ್ಮಿಕವಾಗಿ ಒಂದೋ ಎರಡು ದಿನದ ಘಟನೆಯಾಗಿರಲಿಲ್ಲ. ಇದೊಂದು ದಿನದಿಂದ ದಿನಕ್ಕೆ ಮುಂದುವರೆಯುತ್ತಲೇ ಇತ್ತು. ಅವರು ಪ್ರತಿಬಾರಿ ಓದುತ್ತಿದ್ದಾಗಲೂ ಸಹಿತ, ನಾನು ಅದರ ಹಿಂದಿನ ದಿನ 'ಕಂಡ' ದೃಷ್ಟಾಂತಗಳ ಸಂಗಡ ಹೋಲಿಸಿಕೊಳ್ಳುತ್ತಿದ್ದೆ. ಅವೆಲ್ಲವೂ ನನ್ನದೇ ಅನುಭವಕ್ಕೆ ಸಮಸ್ಪಂದಿಯಾಗಿಯೇ ಇರುತ್ತಿದ್ದವು. ನಾನು ಈಗಾಗಲೇ ಅವರು ಬರೆದಿರುವ ಸಂಗತಿಗಳನ್ನು ಕಂಡಿದ್ದೇನೆ ಎನ್ನುವದೂ ಅವರಿಗೆ ತಿಳಿದಿತ್ತು. ನಮ್ಮ ಜಂಟೀ–ಶೋಧನಾ ಸಾಹಸದ ಅನುಭವಗಳನ್ನೇ ಅವರು ಈ ರೀತಿಯಲ್ಲಿ ಅತಿಮಾನಸದ ಹಂತದಲ್ಲಿ ಅಥವಾ ಅವ್ಯಕ್ತವಾಗಿರುವ ಅಭಿವ್ಯಕ್ತಿ ವಿಧಾನದಲ್ಲಿ ರೂಪಿಸಿದ್ದಾರೆ.

ಈ ಎಲ್ಲ ಅನುಭವಗಳಲ್ಲೂ ಅವರ ಜೀವನವಿದೆ, ವಿಶ್ವಸತ್ಯವಿದೆ, ಋತವಿದೆ. ಈ ಎಲ್ಲ ಅನುಭವಗಳನ್ನೂ ಅವರು "ಒಂದೇ" ಅನುಭವವೆಂದುಕೊಂಡು– ಅದು ದುಃಖದ್ದೋ ಅಥವಾ ತೋಷದ್ದೋ ಯಾವುದೇ ಆಗಿದ್ದರೂ ಅದನ್ನು ಭೌತಿಕ ಸ್ವರೂಪದಲ್ಲಿ ಸಾಕ್ಷಾತ್ಕರಿಸಿಕೊಂಡಿದ್ದಾರೆ. ಅಚಿತ್‌ನ ಘನತಮದಲ್ಲಿಯೂ ಸಾಗಿ, ಸಾವಿನ ಸಮೀಪದಲ್ಲಿಯೂ ಸಾಗಿ, ಮುನ್ಸೂಚನೆಯಲ್ಲಿ ಗೋಚರಿಸಿದ ಕಷ್ಟಗಳನ್ನೂ ಸಮರ್ಥವಾಗಿ ಎದುರಿಸಿದರು. ಈ ಕೆಸರಿನಿಂದ ತುಂಬಿರುವ ಜಗತ್ತಿನಿಂದ ಹೊರಬಿದ್ದು, ಜಗತ್ತಿನ–ದುಃಖದಿಂದ ಮುಕ್ತವಾಗಿ, ಪರಮೋಚ್ಚ ಸಮೃದ್ಧತೆಯ ವೈರಾಜ್ಯದ ಸ್ಪಂದನದ ಉಸಿರಾಟವನ್ನು ಕಂಡರು. ಈ ಮೂಲಕ ಪರಮಾನಂದವನ್ನು–ಸಚ್ಚಿದಾನಂದವನ್ನು ಪಡೆದುಕೊಂಡರು. ಈ ಎಲ್ಲ ಸ್ತರಗಳನ್ನೂ ಯಶಸ್ವಿಯಾಗಿ ದಾಟಿ, ಆಯಾ ಸಂದರ್ಭಗಳನ್ನು ನಿಭಾಯಿಸುತ್ತ, ಕಷ್ಟಪಡುತ್ತ ಹಾಗೂ ಯಾರೂ ಊಹಿಸಲೂ ಸಾಧ್ಯವಿಲ್ಲದ ಅನುಭವಗಳನ್ನು ಭೌತಿಕವಾಗಿ ಸಹಿಸಿಕೊಳ್ಳುತ್ತಲೇ ಸಾಗಿದ್ದರು. ಅವರಂತೆ ಇಷ್ಟೊಂದು ಕಷ್ಟಪಟ್ಟ ಬೇರೆ ಯಾವುದೇ

ವ್ಯಕ್ತಿಯೂ ಇಲ್ಲ. ಆ ಪರಮೋಚ್ಚವಾಗಿರುವ ತೋಷವನ್ನು ಪಡೆದುಕೊಳ್ಳುವಲ್ಲಿ ಈ ಯಾತನೆಯನ್ನು ಅನುಭವಿಸುವದು ಎಂದು ತಿಳಿದಿದ್ದರೂ ಅದನ್ನು ಸ್ವೀಕರಿಸಿದ್ದರು. ಇದೊಂದು ವಿಶ್ವದಲ್ಲಿಯೇ ಅನನ್ಯವಾಗಿರುವ ಮತ್ತು ಹೋಲಿಕೆ ಮಾಡಲು ಸಾಧ್ಯವಿರದ ಘಟನೆಯಾಗಿದೆ. ಈ ಹಿಂದೆ ಇಂತಹ ಘಟನೆ ನಡೆದಿರಲಿಲ್ಲ. ಇಲ್ಲಿಯವರೆಗೂ "ಅಜ್ಞಾತವಾಗಿರುವ ಪಥವನ್ನು" ಅವರು ಗುರುತಿಸಿದ್ದಾರೆ. ಹೀಗಾಗಿ ಅವರು ರೂಪಿಸಿದ ಆ ಪಥದಲ್ಲಿ ನಮಗೆ ಸಾಗಲು, ಆ ಅತಿಮಾನಸ ಹಂತದಲ್ಲಿ ಖಚಿತತೆಯನ್ನು ಹೊಂದಿಯೇ ಸಾಗಲು ಸಮರ್ಥರಾಗುತ್ತೇವೆ. ಈ ಮೂಲಕ ನಮಗೆ ಸುಲಭವಾದ ಪಥವನ್ನು ಅವರು ರೂಪಿಸಿದ್ದಾರೆ. "ಸಾವಿತ್ರಿಯು ರೂಪಾಂತರಣದ ಸಲುವಾಗಿ ರೂಪಿತಗೊಂಡಿರುವ ಯೋಗವೇ ಆಗಿದೆ." ಇದು ಪ್ರಪ್ರಥಮ ಬಾರಿಗೆ ಈ ಭೂ–ಚೇತನದಲ್ಲಿ (ಮೃಣ್ಮಯದ ಬದುಕಿನಲ್ಲಿ) ಅಥವಾ ಮಾನವ ಕುಲಕ್ಕೆ ಲಭ್ಯವಾಗಿರುವ 'ಚೇತನ'ವಾಗಿದೆ.

ಆದರೆ, ಮಾನವನಿನ್ನೂ ಇದನ್ನು ಸ್ವೀಕರಿಸಲು ಸಮರ್ಥನಾಗಿಲ್ಲವೆಂದು ನನ್ನ ಅಭಿಪ್ರಾಯವಿದೆ. ಇದು ಮಾನವನಿಗೆ ನಿಲುಕದಷ್ಟು ಔನ್ನತ್ಯದಲ್ಲಿ ಹಾಗೂ ವೈಶಾಲ್ಯತೆಯಲ್ಲಿ ಇದೆ. ಇದನ್ನು ಅರ್ಥೈಸಿಕೊಳ್ಳಲು ಅಥವಾ ಗ್ರಹಿಸಿಕೊಳ್ಳಲು ಮಾನವನಿಗೆ ಇನ್ನೂ ಸಾಧ್ಯವಾಗಿಲ್ಲ, ಈ ಸಾವಿತ್ರಿಯನ್ನು ಕೇವಲ ಮನಸ್ಸಿನ ಹಂತದಲ್ಲಿ ಮಾತ್ರ ಗ್ರಹಿಸಿಕೊಳ್ಳಲು ಬರುವದಿಲ್ಲ. ಇದಕ್ಕಾಗಿ ಆಧ್ಯಾತ್ಮಿಕ ಅನುಸಂಧಾನ ಮತ್ತು ಅನುಭವಗಳ ಅವಶ್ಯಕತೆ ಇದೆ. ಈ ಮೂಲಕವೇ ಅದನ್ನು ಅರ್ಥೈಸಿಕೊಂಡು ಅದರೊಡನೆ ಮಿಳಿತಗೊಳ್ಳಬಹುದು. ಯಾರು ಯೋಗದ ಪಥದಲ್ಲಿ ಪ್ರಗತಿಯನ್ನು ಸಾಧಿಸಿಕೊಳ್ಳುತ್ತ ಆರೋಹಣದಲ್ಲಿ ಇರುತ್ತಾರೆಯೋ, ಅವರು ಮತ್ತೂ ಮತ್ತೂ ವಿಕಾಸಗೊಳ್ಳುತ್ತ ಈ ವಿಷಯದೊಡನೆ ಸುಲಭವಾಗಿ ಸ್ಪಂದಗೊಳ್ಳುತ್ತಾರೆ. ಇದು ಭವಿಷ್ಯಕ್ಕಾಗಿಯೇ ರೂಪಿತವಾಗಿರುತ್ತದೆ, ಇದು ಭವಿಷ್ಯದ ಕಾವ್ಯವೇ ಆಗಿದೆ. ಈ ವಿಷಯವನ್ನು ಶ್ರೀ ಅರವಿಂದರು ತಮ್ಮ "ಭವಿಷ್ಯ ಕಾವ್ಯ"ದಲ್ಲಿ ಸ್ಪಷ್ಟಗೊಳಿಸಿದ್ದಾರೆ. ಇದು ಸೂಕ್ಷ್ಮಾತಿ ಸೂಕ್ಷ್ಮವಾಗಿದ್ದು, ಪರಮಾತಿ ಪರಮ ಪರಿಶುದ್ಧವೂ ಆಗಿದೆ. ಇದು ಕೇವಲ ಮನಸ್ಸಿನಲ್ಲಾಗಲೀ ಅಥವಾ ಮನಸ್ಸಿನ ಹಂತದಲ್ಲಾಗಲಿ ಅಥವಾ ಮನಸ್ಸಿನ ಮೂಲಕವಾಗಲಿ ಪ್ರಾಪ್ತಗೊಳ್ಳುವದಲ್ಲ. ಇದನ್ನು ತಲ್ಲೀನ ಧ್ಯಾನಾವಸ್ಥೆಯಲ್ಲಿಯೇ ಪ್ರಕಾಶನಗೊಳಿಸಿಕೊಳ್ಳುವ ಹಂತದಲ್ಲಿ ಈ 'ಸಾವಿತ್ರಿ' ರೂಪುಗೊಂಡಿದೆ.

ಮತ್ತೆ ಕೆಲವರು ಈ 'ಸಾವಿತ್ರಿ'ಯನ್ನು ವರ್ಜಿಲ್ ಅಥವಾ ಹೋಮರ್ ರಚಿತ ಕೃತಿಗಳಿಗೆ ಹೋಲಿಸುವ ದುಸ್ಸಾಹಸಕ್ಕೂ ತೊಡಗಿ, ಇದು ಅವುಗಳಿಗಿಂತ ನಿಕೃಷ್ಟವಾದದ್ದು ಎನ್ನುವ ಅಭಿಪ್ರಾಯ ರೂಪಿಸಲು ಯತ್ನಿಸಿದ್ದಾರೆ. ಆದರೆ ಈ ಸಾವಿತ್ರಿಯನ್ನು ಅವರು ಅರ್ಥೈಸಿಕೊಂಡಿಲ್ಲ, ಅವರು ಅರ್ಥೈಸಿಕೊಳ್ಳಲೂ ಸಾಧ್ಯವಿಲ್ಲ. ಅವರಿಗೆ ಗೊತ್ತಿರುವದಾದರೂ ಏನು? ಏನೇನೂ ಇಲ್ಲ! ಅವರಿಗೆ ತಿಳಿಹೇಳುವದೂ ಸಹಿತ ಉಪಯೋಗವಿಲ್ಲ. ಇದು ಏನಿದೆ ಎನ್ನುವದನ್ನು ಜನರು ಮುಂದೆ ಅರಿತುಕೊಳ್ಳುವರು, ಅದೂ ಸುದೂರ–ಭವಿಷ್ಯದಲ್ಲಿ. **ಆಗಮಿಸಲಿರುವ ನವಪೀಳಿಗೆ ಮಾತ್ರ ನವೀನ ಚೇತನಾಸ್ವರೂಪದ ಸ್ಪಂದನದಲ್ಲಿ ಮಾತ್ರ ಇದನ್ನು ಅರಿತುಕೊಳ್ಳಲು ಸಮರ್ಥವಾಗುವದು**. ಈ ಭೂಮಸದೃಶವಾಗಿರುವ ನೀಲಾಕಾಶದಲ್ಲಿ ಈ ಸಾವಿತ್ರಿಗೆ ಹೋಲಿಕೆಯಾಗಬಲ್ಲ ಇನ್ನೊಂದು ವಸ್ತು ಇಲ್ಲ. ಇದೊಂದು ಅದ್ಭುತಗಳಲ್ಲಿ ಅತ್ಯದ್ಭುತವಾಗಿದೆ; ಇದೊಂದು ಮಹೋನ್ನತ–ಕಾವ್ಯ; ಮಹೋನ್ನತವಾಗಿರುವ ಸಾಹಿತ್ಯವಾಗಿದೆ. ಮಹೋನ್ನತವಾಗಿರುವ ಮಹಾಕಾವ್ಯವಾಗಿದೆ. ಔನ್ನತ್ಯದ ಪರಮೋಚ್ಚ ಕಾಣ್ಕೆಯನ್ನು ಹೊಂದಿದೆ. ಇಲ್ಲಿ ನಿರೂಪಿತಗೊಂಡಿರುವ ಸಾಲುಗಳ ಸಂಖ್ಯೆಯನ್ನು ಗಮನಿಸಿದರೂ ಸಾಕು, ಇದೊಂದು ಮಹಾನ್–ಕೃತಿಯಾಗಿದೆ ಎನ್ನುವದು ಮನದಟ್ಟಾಗುತ್ತದೆ. ಪ್ರಚಲಿತದಲ್ಲಿ ಬಳಸಲ್ಪಡುತ್ತಿರುವ ಯಾವುದೇ ಶಬ್ದಗಳೂ ಸಹಿತ ಈ 'ಸಾವಿತ್ರಿ'ಯನ್ನು ವರ್ಣಿಸಲು ಅಸಮರ್ಥವಾಗಿವೆ. ಇದನ್ನು ಅರ್ಥೈಸಿಕೊಳ್ಳಲು, ನೀವು ಸರ್ವೋತ್ಕೃಷ್ಟತೆಯ ಹಾಗೂ ಅತಿಪರಾವಲಯದ (ಹೈಪೆರಬೊಲಾ) ಹಂತದ ವಿವರಣೆಗಳನ್ನು ಅರಿತಿರಲೇಬೇಕಾಗುತ್ತದೆ. ಇದೊಂದು 'ವೈರಾಜ್ಯದ–ಕಾವ್ಯ'ವಾಗಿದೆ (ಹೈಪರ್–ಎಪಿಕ್). 'ಸಾವಿತ್ರಿ' ಏನು ಎನ್ನುವದನ್ನು ಹೇಳಲು ಶಬ್ದಗಳೇ ಇಲ್ಲ. ನನಗೂ ಸಹಿತ ಅವುಗಳನ್ನು ಕಾಣಲು ಸಾಧ್ಯವಾಗಿಲ್ಲ. ಇಲ್ಲಿರುವ ಮಹತ್–ಮೌಲ್ಯವು – ಅದರಲ್ಲೂ ಆಧ್ಯಾತ್ಮಿಕ ಮೌಲ್ಯ ಮತ್ತು ಉಳಿದ ಎಲ್ಲ ಮೌಲ್ಯಗಳೂ ಸಹಿತ ಮಹತಿಯನ್ನೇ ಹೊಂದಿವೆ. ಪ್ರತಿಪಾದಿತವಾಗಿರುವ ವಿಷಯದಲ್ಲಂತೂ ಇದು ಶಾಶ್ವತತೆಯನ್ನೇ ಆಳವಡಿಸಿಕೊಂಡಿದೆ. ಪ್ರತಿಪಾದಿತವಾಗುತ್ತಿರುವ ಅನ್ವಯಿಕೆಯೂ ಸಹಿತ ಅನಂತತೆಯನ್ನು ಹೊಂದಿದೆ. ಅದರದೇ ವಿನ್ಯಾಸದಲ್ಲಿ ಅದೊಂದು ಪವಾಡಸದೃಶವಾದ ಸ್ವರೂಪದಲ್ಲಿದೆ. ಅನುಷ್ಠಾನಗೊಳಿಸುವಲ್ಲಿ ಶಕ್ತಿದುಂಬಿಕೊಂಡಿದೆ. ಇದೊಂದು ಅನನ್ಯವಾಗಿರುವ ಅಸ್ಮಿತೆಯಾಗಿದೆ. ನೀವು ಎಷ್ಟು ಎಷ್ಟು ಇದರ ಸಮೀಪಕ್ಕೆ ಬರುತ್ತೀರೋ, ಅಷ್ಟೇ

ಎತ್ತರಕ್ಕೆ ನಿಮ್ಮನ್ನು ಇದು ಆರೋಹಣಗೊಳಿಸುತ್ತದೆ. ಇದೊಂದು ಅಪರೂಪದಲ್ಲಿಯೇ ಅಪರೂಪವಾಗಿರುವ ಸಂಗತಿಯಾಗಿದೆ. ಅತ್ಯಂತ ಸುಂದರವಾಗಿರುವ ವಿಷಯವೊಂದನ್ನು ಶ್ರೀ ಅರವಿಂದರು ಈ ಮಾನವ ಕುಲಕ್ಕೆ ಒದಗಿಸಿದ್ದಾರೆ. ಅದೂ ಔನ್ನತ್ಯವನ್ನು ಸಾಧಿಸುವದರ ಸಲುವಾಗಿಯೇ ನಮಗೆ ಕೊಡಲ್ಪಟ್ಟಿದೆ. ಇದು ಏನಿದೆ? ಇದನ್ನು ಮಾನವ ಕುಲ ಯಾವಾಗ ಅರಿತುಕೊಳ್ಳುವದು? ಸತ್ಯ–ಸ್ವರೂಪದ ಜೀವನವನ್ನು ಯಾವಾಗ ಅನುಷ್ಠಾನಿಸಿಕೊಳ್ಳಬಹುದು? ಯಾವಾಗ ಇದು ನಿಜವಾದ ಜೀವನ ವಿಧಾನವೆಂದು ಅರಿತು ಅನುಷ್ಠಾನಿಸಿಕೊಳ್ಳಬಹುದು? ಇದನ್ನು ಇನ್ನೂ ಅರಿತುಕೊಳ್ಳಬೇಕಾಗಿದೆ.

ಆದಾಗ್ಯೂ, ಸಾವಿತ್ರಿ ಎನ್ನುವದು ಚೇತನದೊಂದಿಗೇ ಭದ್ರವಾಗಿರುವ, ಜೀವಂತಿಕೆಯಿಂದ ತುಂಬಿರುವ, ಪರಿಪೂರ್ಣತೆಯಿಂದ ಸಮಗ್ರವಾಗಿದೆ. ಮಾನವನು ಅನುಷ್ಠಾನಿಸಿಕೊಂಡ ಎಲ್ಲ ತತ್ತ್ವಜ್ಞಾನಗಳು ಹಾಗೂ ಮತಗಳಿಗಿಂತಲೂ ಪರಮೋಚ್ಚವಾಗಿದೆ. ಇದೊಂದು ಆಧ್ಯಾತ್ಮಿಕ ಪಥವಾಗಿದೆ. ಇದೊಂದು ಯೋಗವಾಗಿದೆ. ಸಾಧನೆಯೂ ಆಗಿದೆ. ಒಟ್ಟಿನಲ್ಲಿ ಸರ್ವಸ್ವವನ್ನೂ ಒಳಗೊಂಡಿದೆ – ಅದೂ ಏಕೈಕವಾಗಿರುವ ಸಂರಚಿತ ವ್ಯವಸ್ಥೆಯಲ್ಲಿದೆ. 'ಸಾವಿತ್ರಿ'ಗೆ ಅಸಾಮಾನ್ಯವಾಗಿರುವ ಶಕ್ತಿಸಂಚಯನವಿದೆ. ಯಾರು ಸ್ವೀಕರಿಸಲು ಸಿದ್ಧರಿರುವರೋ ಅವರಿಗೆ ಈ ಶಕ್ತಿಪೂರ್ಣ ಸ್ಪಂದನಗಳನ್ನು ನೀಡಲು ಅದು ಸದಾ ಸಿದ್ಧವಿದೆ. ಇಲ್ಲಿ ಲಭ್ಯವಾಗುವ ನೈಜ ಸ್ಪಂದನಗಳೆಲ್ಲವೂ ಚೇತನಾಪೂರ್ಣವಾಗಿವೆ. ಇದನ್ನು ಯಾವುದಕ್ಕೂ ಹೋಲಿಸಲು ಸಾಧ್ಯವಿಲ್ಲ. ಇದು ಸತ್ಯದ ಬೃಹತ್–ಸ್ವರೂಪವಾಗಿದೆ. ಆ ತುರೀಯದಲ್ಲಿರುವ ಸತ್ಯವನ್ನು ಶ್ರೀ ಅರವಿಂದರು ನಮ್ಮ ಸಲುವಾಗಿ, ಈ ಭೂಮಿಯ ಮೇಲೆ ಅದನ್ನು ಅವತರಣಗೊಳಿಸಿದ್ದಾರೆ. ಓ ಕಂದಾ, ಸಾವಿತ್ರಿಯು ಪ್ರತಿನಿಧಿಸುತ್ತಿರುವ ಸತ್ಯವನ್ನು ನೀನು ಕಂಡುಕೊಳ್ಳಬೇಕಾಗಿದೆ. ಈ ಕಾರ್ಯವೇ ನಿನ್ನ ಮುಂದಿದೆ. ಇದು ಕಠಿಣವಾಗಿರುವ ಸವಾಲು ಹೌದು. ಆದರೆ ಅದೇ ನಿನ್ನ ಮುಂದೆಯೇ ಇದೆ.

**5 ನವೆಂಬರ್ 1967**

# ‘ಸಾವಿತ್ರಿ’ ಕಾವ್ಯದಿಂದ ಆಯ್ದ ಸಾಲುಗಳು

**– ಅನುವಾದ: ಪುಟ್ಟು ಕುಲಕರ್ಣಿ**

## ಬುವಿ–ಮನದ ಗುಣವ ಬದಲಿಸುವ ಕ್ರಿಯೆಯು

ಆ ಪರಮಗಂದು ನೆಲೆಗೊಳಿಸಿ ಅವಳ ಅಸ್ತಿತ್ವ ಭವ್ಯವಾಗಿ
ಮೃಣ್ಮಯದ ಮೇಲೆ ಚಿನ್ಮಯದ ಮೂಲ ವಿಕಸನವು ನಿತ್ಯವಾಗಿ
ಬುವಿಮನದ ಗುಣವ ಬದಲಿಸುವ ಕ್ರಿಯೆಯು, ಬಲು ಕಠಿಣ ಯತ್ನವಾಗಿ
ಶಾಶ್ವತದ ಸ್ಪರ್ಶ ಪಡೆಯೆ ನಶ್ವರವು, ಪಲ್ಲಟದಿ ಭಾವ ಬಾಗಿ
ಆಕ್ರಮಿಸಲೆಂದು ಹಾತೊರೆದು ಬಂದ ಅಗ್ನಿ–ಆಕಾಶ–ದ್ರವ್ಯ
ಪರಮ ಪಾವನದ ವಳಾವಳಿಯನ್ನು ಸಹಜದಲಿ ಧರಿಸಿ ಭವ್ಯ
ಸಚ್ಚಿದಾನಂದ ತಲ್ಲೀನದಲ್ಲಿ ಗುನುಗುಡುತ ನಿತ್ಯವಾಗಿ
ಅದು ತಂದ ಬೆಳಕು ನಂದಿಸಿತು ದ್ವೇಷ, ಬಹುತೇಕ ಪೂರ್ಣವಾಗಿ
ನಿರಪೇಕ್ಷ ಧ್ವನಿಯ ಮಧುರತೆಯ ಸ್ಥಿತಿಯು ಆ ಆತ್ಮಬಲವ ಕಂಡು
ಚಿರಸತ್ಯಕಿರುವ ವರವಿಗುರ್ಭಣೆಯ ಬಲಕೆ ಕಂಪಿಸಿತು ಅಂದು
ಔನ್ನತ್ಯದಲ್ಲು ಆ ವಿಶ್ವ–ನಿಯಮ ಬಾಗಿತ್ತು ಒಮ್ಮೆ ಆಗ
ಸ್ವರ್ಗಸೀಮೆಯಾ ಸುದ್ದಿಗಾಗ ಪದಪಂಕದಲಿ ಮಲಿನವಾಗ
ಚೆದುರಿ ಬಿದ್ದಿರುವ ಸಹಜ ಶಲ್ಯಗಳು ರಕ್ಷಣೆಯ ವಲಯವನ್ನು
ತಿರುಗಿ ನಿಂತಿತ್ತು, ಮತ್ತೆ ಎದುರಿಸಲು ಆ ದಯೆಯ ಹಸ್ತವನ್ನು
ದೇವಪುತ್ರರನು ಭೆಟಿ ಮಾಡಲೆಲೆ ಸಾವು–ನೋವುಗಳ ಕೊಡುಗೆ
ಹಿಡಿದು ಬಂದಿತ್ತು ಸುಳಿದು ನಿಂದಿತ್ತು ಆ ಬುವಿಯ ಮಡಿಲ ಕಡೆಗೆ

**– ಶ್ರೀ ಅರವಿಂದರ ‘ಸಾವಿತ್ರಿ’; ಪುಟ 7**

## ದೇವಮಾತೆಯ ಭಾವ–ಸಾರೂಪ್ಯ

ಮಂದ ಭೂಚಲನೆಗಂದು ಪರವಶತೆ ಬದಲಿಸಿತು ಭಾವ ಕರೆಗೆ
ಹುದುಗಿಸುತ ನೆರಳ ಅಡಗಿಸುತ ಸಾವ, ಆಗಮಿಸಿ ಪ್ರೇಮದೆದೆಗೆ
ಘನಶಕ್ತಿವಂತ ಅವಳಲ್ಲಿ ಕಂಡ, ತನಗೊಂದು ಸ್ಥಾನವಿಂದು
ಪರಿಪೂರ್ಣ ಕಾಂತಿ ಸಾರ್ಥಕ್ಯ ಸ್ಥಿತಿಯು ತನಗಿಹುದು ಖಾತ್ರಿ ಎಂದು
ಭೂಚರನು ಇಂದು ಖೇಚರನೆ ಆಗಿ ಪದವಿಡುವ ಪ್ರಥಮ ಘಳಿಗೆ

ದೀರ್ಘಾತಿದೀರ್ಘ ಸಂಘರ್ಷ ಸರಣಿ–ಸರಣಿಯೊಲು ಸ್ಪರ್ಧೆ ಒಳಗೆ
ಜ್ವಲಿಸುತಲಿ ನಮ್ಮ ಭಾವಗಳ ನಿತ್ಯ, ಶೋಧಿಸುತ ದೇವಶೀರ್ಷ
ಅರೆಬೆಂದ ಜೀವ ಧರಿಸದೆಂದಿಗೂ ಆ ಭವ್ಯ–ಕದಿರ–ವರ್ಷ
ತಳವಿರದ ನಮ್ಮ ಪಾತಾಳ ಬದುಕಿನೆದೆ ಮೇಲೆ ಮಿಂಚು ಸೆಳಕು
ಅವಳೊಲುಮೆಯಲ್ಲಿ ದಯೆಯಾಗಿ ಇಂದುದಾತ್ತತೆ ಸಾಂದ್ರ–ಬೆಳಕು

– – –

**ಜನಿಸದಿಹ ವಸ್ತು–ವಿಷಯಕ್ಕೆ ಅಗಣಿತದ ಚಿಂತನದ ಪಥವು ಉಕ್ಕಿ**
ಬುವಿಯೊಡಲ ವ್ಯಾಪ್ತಿಗತಿ ಸನಿಹದಲ್ಲಿ, ಸ್ವರ್ಗಕ್ಕೆ ನಿಕಟವಾಸಿ
ಅವಳುದಿತ ದೀರ್ಘ ಕಾಂಕ್ಷೆಗಳ–ಬಲವ ತ್ವರಿತದಲಿ ಘನತೆಗೆಳಸಿ
ಸಂಚಲಿಸುತಿತ್ತ ವೈಭವದ ಲೋಕಗಳ ಜೊತೆಗೆ, ಸ್ನಿಗ್ಧ ಭಾವ
ಚಿದ್ವೃತ್ತಿಚಿಂತ ತುಂಬಿತ್ತು ಪಥವ, ಜನಿಸಲಿಹ ವಸ್ತು–ಜೀವ
ಅವಳಾತ್ಮದಲ್ಲಿ ತಾ ಅರಳಿ ನಿಂತ ಆ ಸ್ವಯಂಕ್ಷಮತೆಯಲ್ಲಿ
ಪಥ ಬಿಡದ ಕೃತುವು ಜೊತೆಯಲ್ಲಿ ತಾನು, ಭಾವದುದ್ದೀಪ್ತಿಯಲ್ಲಿ
ಅವಳ ಮನವಿಂದು ನಿಷ್ಕಪಟ ನಿಷ್ಠೆ ಪರಿಶುಭ್ರ ಭಾವದುಧದಿ
ಪ್ರವಹಿಸಿತು ತುಂಬಿ ಪರಿಪೂರ್ಣದಲ್ಲಿ, ವಿಕ್ಷುಬ್ಧ ತೆರೆಯು ಇರದೆ
ಘನಶಕ್ತಿಯಲ್ಲಿ ಅನುಭಾವ ನೃತ್ಯವದು ತುಂಬಿ ದಿವ್ಯಭಾವ
ಪರಮ ಪರಿಶುದ್ಧ ದೈವದುನ್ಮಾದದರ್ಚಕಳು ತುಂಬಿ ಜೀವ
ಪ್ರೇರಿತಳು ಜೊತೆಗೆ ಋತದ ದೈವತ್ವದೆದೆಯಿಂದ ಮೀಟಿ ತಂತು
ಸಂಚರಿಸುತಾಗ ದೇವತೆಗಳಾ ಕೆಲ ಪ್ರವಾದಿ–ಗುಹೆಯಲಿಂತು
ದಿವ್ಯ ಮೌನದಾ ಹೃದಯವದು ತಾನು ಉಲ್ಲಸಿತ ಕರದೊಳಿರಲು
ಶ್ರೀಮಂತ ಸೃಷ್ಟಿ ಭಾವದಲಿ ಮಿಡಿತದೊಡನಿಂದು ವಾಸವಿರಲು
ಬೆಡಗಿನೊಲಯದಾ ಉಷೆಯ ತೆರದಲ್ಲಿ ತಾನಿಂದು ದೇಹವಡೆದು
ಸ್ವರ್ಣದೇವಳದ ದ್ವಾರ ತಾನಾಗಿ, ಪರಲೋಕ ಘಟನೆಗಿಂದು
ಬೇಡದಲೆ ಕೊಡುವ ಒಡಲಾಳ ಪ್ರೇಮ ಅವಳೆದೆಯ ಒಲವಿನೊಳಗೆ
ಗಗನ–ಸಾಗರದಂತೆ ಭೂಮವನು ತೋರಿ ಔದಾರ್ಯ ಹರಕೆಯೊಳಗೆ
ಉದಿಸುತಲಿ ಬಂದ ಸರ್ವಸ್ವಕೆಲ್ಲ, ರಕ್ಷಣೆಯ ಕವಚ–ಕಾರ್ಯ
ವಿಶ್ವಾತ್ಮ ಭಾವ ನೀಡುತ್ತ ಆತ್ಮಸಂಯಮದ ಜ್ಯೋತಿ–ಸೂರ್ಯ
ಅವಳ ಆ ತೀವ್ರ ಭಾವದಾವೇಶ ಕಾಂತಿ–ಸ್ವರ್ಗ ಸಮಬಲದಿ

ಬೇಟೆ ಕಾಟಕ್ಕೆ ಚಲಿಪ ಖಗದಂತೆ ಆತ್ಮಬಲ ಸಾಗುತಿರಲು
ವಿಪ್ಲವದ ಲೋಕದಾಚೆಯಲಿ ಸಾಗೆ, ಆ ದಣಿದ ರೆಕ್ಕೆಯಲ್ಲು
ತಾಯೊಡಲ ಸ್ಮರಣೆ ಜೀವಜಲ ರಕ್ಷೆ ಕಕ್ಷೆಯೆಡೆ ತಲುಪಲಲ್ಲು
ಮಧು–ಮಧುರ ಅಗ್ನಿ ಪರಿವಹನದಲ್ಲಿ ಮರು–ಜೀವ, ಸವಿದು ನಿಂತ
ರಕ್ಷಣೆಯ ನಾಕ, ಸ್ನಿಗ್ಧ ವೈಭವದಿ ಮತ್ತೆ ಶಾಂತ–ಪ್ರಶಾಂತ
ಮರೆತು ಹೋದ ಅಭ್ಯಸ್ಥ ಮೋದ, ಪಡಮರಳಿ ಪಡೆದು ಮುದದಿ
ಅವಳ ಉಜ್ವಲದಿ ಗುಣದ ಭವ್ಯತೆಯ ವಿಭೂ ತಾ ಸ್ವಾನುಭವದಿ
ಅವಳ ಹಾರ್ದಿಕದ ವಿಭಾತಿಯಲ್ಲೀಗ ಸ್ವಯಂ–ಸಂಜಾತ ಮೋದ
ಮಹತ್–ಅನುಕಂಪ, ಶುದ್ಧಾಂಗ ಮುಕ್ತ ರಕ್ಷಣೆಯ ಗೃಹದ ಶೋಧ
ಸ್ವರ್ಗದ್ವಾರದಲಿ ಇರುವ ನಿರ್ಬಂಧ–ಬಂಧವನು ತೆಗೆಯಲೆಂದು
ಅವಳಂತರಂಗ ಸಹಕರಿಸಿತಿಂದು ತೆರೆಯಲೆನೆ ದ್ವಾರ ಒಂದು. ಅವಳೆದೆಯ
ಪ್ರೇಮ ಜಗದಗಲಕಿಂತ ಮಿಗಿಮಿಗಿಲು ವ್ಯಾಪ್ತಿ ಕಕ್ಷೆ
ಅವಳ ಆ ಒಂಟಿ ಹೃದಯ ತಾಣದಲಿ ಸಂಪೂರ್ಣ ವಿಶ್ವ–ರಕ್ಷೆ

**– ಶ್ರೀ ಅರವಿಂದರ 'ಸಾವಿತ್ರಿ'; ಪುಟ 14–15**

**ಇದ್ದಕಿದ್ದಂತೆ ಹಿಡಿತ ಪಡೆದಿರುವ ಮಾಯಕದ–ಸನ್ನೆ–ಬಲವು**

ಪ್ರಜ್ವಲಿತ ಮನದ ಎದುರಲ್ಲಿ ಸ್ಥಗಿತ ಚಣವದರ ಭೂಮ–ಲೀಲೆ
ಅತಿ ಕಠಿಣವದರ ಒಡಂಬಡಿಕೆಗಳು ಸಂಧಿಸಲು ಆತ್ಮಜ್ವಾಲೆ
ಇದ್ದಕಿದ್ದಂತೆ ಹಿಡಿತ ಪಡೆದಿರುವ ಮಾಯಕದ–ಸನ್ನೆ–ಬಲವು
ಗವಸಿನೊಳಗಿದ್ದ ಅನಿರ್ವಾಚ್ಯ ತಾ ಚಲಿಸಿ ಕಾಲಕಾತೀತ–ಕೃತುವು
ಒಂದು ಪ್ರಾರ್ಥನೆಯು ಒಂದು ನಿಷ್ಣಾತ–ಕ್ರಿಯೆಯೊಂದು ಪರಮ ಚಿತ್ತು
ಜಗತ್–ಭಾವವನು ದಾಟಿ ಸಾಗಲೆನೆ ಮನು–ಬಲಕೆ ಯೋಗವಿತ್ತು
ಆಗ ಅದ್ಭುತವು ಸರಳ ನಿಯಮದಲಿ ತಾನನುಷ್ಠಾನಗೊಂಡು
ವಿರಾಟ್–ಉದ್ದೇಶ ಒಂದಿರಲು ಆಗ, ಗತಿಯದುವು ಬದಲುಗೊಂಡು
ಏಕಮೇವಾದ್ವಿತೀಯ ಚಿಂತನೆಯು ವಿಶ್ವತ್ಮವಾಯಿತಿಂದು

ಕಂಡವೆಲ್ಲವೂ ಈಗ ಪ್ರಕೃತಿಯಾ ಯಂತ್ರಗಳ ದಟ್ಟ–ಲಾಸ್ಯ
ಭೌತಿಕದ ಬದುಕ ನಿಯಮಗಳಿಗಂದು ಸಾವಿರದ ಬದ್ಧ–ದಾಸ್ಯ
ದೀರ್ಘ–ವ್ಯಾಕೃತದ ಕಠಿಣ ಸಂಕೋಲೆ ಜೊತೆಗಿರಲು ಮತ್ತೆ ತಾನು

ಅವಳ ದೃಢಚಿತ್ತ ಚಿರದ ಅಭ್ಯಾಸ, ಅಣಕಿಸುತ ನಿಯತಿಯನ್ನು
ಕುಶಲದಲಿ ರೂಪುಗೊಂಡವಳ ಅಚಿತಿ ಸಾಮ್ರಾಜ್ಯವಂದು ತಾನು
ಮನುಜನಿತ್ತಿದ್ದ ಮುಕ್ತ ಸಂಕಲ್ಪದಾ ಮನವಿ ರದ್ದು ಇನ್ನು;
ಜಡದ–ಯಂತ್ರದೊಲು ಇವ ಸಹಿತ ಯಂತ್ರ–ನಿಯಂತ್ರದಲ್ಲಿ ಸಿಲುಕಿ
ಕೊಂತದೋಪಾದಿ ಮಸ್ತಿಷ್ಕವಂದು ಚಿಂತನದ ರೂಪು ಕುಲುಕಿ
ಸದಾ ತುಡಿಯುತಿಹ ಹೃದಯದಾ ಮಿಡಿತ ಅವಿರತದಿ ಯತ್ನಿಸುತ್ತ
ತಡೆದು ನಿಲ್ಲಿಸಿತು ಭಾವನೆಯ ಮಜಲುಗಳನಿಂದು ಸುತ್ತ–ಮುತ್ತ;
ಭಾವರಾಹಿತ್ಯತೆಯ ಹಂತದಲಿ ಇರುವ ಶಕ್ತಿಯೊಂದು ಆಗ
ಕೃತ್ರಿಮದ ರೂಪ–ರೂಪಣೆಯ ವಿಧದಿ ರೂಪಿಸಿತು ಆತ್ಮವೊಂದ
ಜಡತತ್ತ್ವಕಿರುವ ಬಂಧನದ ಮಜಲುಗಳ ಸುತ್ತ ಸುತ್ತುತಿರುವ
ಪರಿವೇಶಗಳಲಿ ಅಚ್ಚೊತ್ತಿದವಳ ಆದಿಮದ ಹೆಜ್ಜೆಗಳಲಿ
ಯದೃಚ್ಛೆಯನ್ನು ಪುನರ್–ಆವರ್ತಗೊಳಿಸುತಲಿ ಬಂಧ–ನಿಯತಿ
ಇಲ್ಲದಿರೆ, ಜಗದ ಆಕಾರ, ಚಿಹ್ನೆಗಳ ತಾನು ಬೆಳಗುಗೊಳಿಸಿ
ಮನ ಬಂದ ತೆರದಿ ಅಸಮಾನ ಘಟನೆ ಸರಣಿಯೊಲು ಘಟಿಸತೊಡಗಿ
ಯಾವ ಕಾರಣಕೆ ಮಾಯಕದ ಅರಿವು ಬೆಂಬಲಿಸಿ, ಇಲ್ಲಿ ಭಾಗಿ
ಅಗಾಧತೆಯಲಜ್ಞಾನಿ ಮನಸದುವು ಅರೆಮಾನುಷತ್ವ ಕಡೆಗೊ
ಇಲ್ಲದಿರೆ ಸ್ವಯಂ ಅನುಭವದ ಜೀವ ಸ್ವತಃ ಸಿದ್ಧ ಶೋಧನೆಗೊ
ಆದರೀಗಿಲ್ಲಿ ಪ್ರಜಾನ ಉದಿಸಿ, ಜೊತೆ ಕಾಣ್ಕೆ ಅರಳಿತೊಳಗೆ;
ಆಗಲೂ ವಿಶ್ವದುಚ್ಚರಣವುದುವು ತನ್ನನ್ನೆ ತಾನು ತಿಳಿದು,
ಅವಳೊಡೆಯನಾಗಿ ತಾನಿರುವ ಭಾವ–ಪೀಠಕ್ಕೆ ಏರಿ ನಿಂದು
ಚಿತ್–ಶಕ್ತಿ ಜೊತೆಗೆ ಅವನಾತ್ಮ ಸಾಕ್ಷ್ಯವಾಗಿ ತಾ ಸ್ಪಂದಗೊಂಡು
ಅಂತರಂಗದಲಿ ಆಂತರ್ಯವರಿತ ಅವನಾತ್ಮವಾಗ ಇನ್ನು
ದರ್ಶಿಸಿತು ಚಣದಿ ಆ ಪರಮ ಪರಂಜ್ಯೋತಿ ಮೂಲವನ್ನು.
ಈ ಮಂದ್ರ–ಜಡದ ಯಾಂತ್ರಿಕದ ಘಟನೆ ಮೂಲವಿಹ ಪರಮದೇವ.
ಜ್ಞಾನಾಗ್ನಿ ವಿಜಯದುತ್ಸವದ ಒಳಗೆ ಈ ಸತ್ಯ ಕಂಡು ನೆಲೆಯ;
ಮನುಜನೆದೆಯೊಳಗೆ ದೇವ ನೆಲೆಗಾಗಿ ಜಯಿಸಿತ್ತು ಆಗ ವಿಜಯ,
ದೈವತ್ವವಿಂದು ಪ್ರತ್ಯಕ್ಷಗೊಳ್ಳುತಲಿ ಗುಪಿತ ರೂಪದೊಳಗೆ,
ಆ ಭೂಮರೂಪದಲಿ ಜಗಜ್ಜನನಿ ಅವಳುದಿತ ಭಾವದೊಳಗೆ.

**– ಶ್ರೀ ಅರವಿಂದರ 'ಸಾವಿತ್ರಿ'; ಪುಟ 20–21**

**ಭೌತಿಕದ ದೇಹದವತಾರವಿಲ್ಲಿ ವಿಭ್ರಮೆಗೆ ಇಳಿದ ರೂಪ**

ಭೌತಿಕದ ದೇಹದವತಾರವಿಲ್ಲಿ ವಿಭ್ರಮೆಗೆ ಇಳಿದ ರೂಪ;
ಬರಿ ಕವಚ ದೇಹ, ಆ ದಿವ್ಯ ಶಕ್ತಿ ಆಳದಲಿ ಅಡಗಿ ವಾಸ
ಪರಮಾತಿ ಪರಮ ಸಹನೆಯಾ ಸ್ಥಿತಿಯ ಹುಸಿಗುರುತನಿರಿಸಿಕೊಂಡು
ಯುಗಗಳುದಧಿಯಾ ಮೂಲಕವೆ, ಅವನ ನಾಜೂಕು–ನೌಕೆ ಮುಂದು
ನಿತ್ಯ ಸ್ಥಾಯಿಯಿಹ ದೇವಜ್ಯೋತಿಯೊಲು ಚೈತನ್ಯವಿತ್ತು ಆಗ
ಪರಮ ಆಶ್ಚರ್ಯ ರೂಪದಲಿ ತಾನು ಪ್ರಜ್ವಲಿತ ಭಾಗವಾಗ,
ತನ್ನ ಸೌಂದರ್ಯ ತನ್ನ ಪ್ರಭೆಯನ್ನು ತನ್ನಲ್ಲೆ ಕಂಡ ಧೀರ
ಆ ಕಲಾಕಾರ, ನಮ್ಮ ನಶ್ವರದ ಬಡಬದುಕಿನಲ್ಲು ಅಮರ,
ಅದಿತಿ ರೂಪಗಳ ಆದ್ಯತೆಯ ತೆರದಿ ಸ್ಥಾಪಿಸಿದ ಸ್ಥಪತಿಯವನು
ಅಪರಿಚಿತನಿದ್ದ ಆ ಮೂಲವಾಸಿ, ದರ್ಶಿಸಲು ಬಂದು ತಾನು
ತನ್ನ ಸ್ವಂತಿಕೆಯ ಮಾಯೆಗಳಿಗೆಲ್ಲ, ದೀಕ್ಷಿತನು ಗವಸನಿರಿಸೆ
ವಿಶ್ವ ಚಿಂತನವ ದೇವಕಣದೊಳಗೆ ಹುದುಗಿಸುತ ಆಗಲವನು,
ಗೂಢ–ಚಿಂತನೆಯ ಗಾಢ ಮೌನದಲಿ ತುಂಬಿದ್ದ ಬಲವನಂದು
ವಿಧಿಲಿಖಿತ ರೂಪ ವಿಧಿಲಿಖಿತ ಕ್ರಿಯೆಯ ನಿರ್ಧಾರ ಮಾಡಿ ತಂದು
ದೇವಕಣದಿಂದ ವಿಶ್ವರೂಪದೆಡೆ ಉತ್ಕ್ರಮದ ಹಂತದೇಣಿ
ರೂಪದಿಂ ರೂಪ, ಪಯಣಿಗನು ನಿತ್ಯ, ಸ್ವಂತಿಕೆಯ ಪ್ರತಿಮೆ ಸರಣಿ
ಅವನ ಅಭಿಲಕ್ಷ್ಯದೊಳಗೆ ಅಭಿವೃದ್ಧಿಗೊಳ್ಳುತಿಹ ಪ್ರತಿಮೆ ಘಟ್ಟಿ;
ದೇವನಾಗಮನ ಹಂಬಲಿಸಿ ಇಣುಕಿ, ಪಾತಾಳದಿಂದ ದಿಟ್ಟಿ.
ಇದೋ ಕೊನೆಗಿಲ್ಲಿ ಕಾಲ–ಪಥಗಳಲಿ ಪಯಣಿಗನು ಕಂಡನಾಗ
ಶಾಶ್ವತದ ನೆಲೆಯ ಸರಹದ್ದಿನೊಳಗೆ ಆಗಮಿಸಿ ಇಲ್ಲಿ ಈಗ.
ಮನುಜ ಭಾವನೆಯ ಹೊದಿಕೆಯಾಕರ್ಷದಾಕ್ಷಣಿಕ ಚಿಹ್ನೆಯಲ್ಲಿ
ಸಾವಿರದ ಅವನ ಆತ್ಮ ಸಾರವನು ಅವನೀಗ ಸವಿಯುವಲ್ಲಿ
ಮೃತ್ಯುವಶವಿದ್ದರಕ್ತಸಂಬಂಧವನ್ನವನು ತೊರೆದು ಬಿಟ್ಟು.
ನಿತ್ಯತೆಯ ದೂಲದಾ ತೀವ್ರ ಸೆಳಕು, ಅವನೆದೆಗೆ ಲಗ್ಗೆ ಇಟ್ಟು.

**– ಶ್ರೀ ಅರವಿಂದರ 'ಸಾವಿತ್ರಿ'; ಪುಟ 22–23**

**ಜೀವಿ ಬದುಕಿದವು ತಾನಿರಲು ದೀರ್ಘ ಅಸ್ಪಷ್ಟ ಸಜ್ಜಿನಲ್ಲಿ**

ಅವತರಣಗೊಂಡು ಆಗಮಿಸಿ ಬಂದು ಅವನಲ್ಲಿ ನೆಲೆಸಿ ದಿವ್ಯ
ಅವನಾತ್ಮ ಜೊತೆಗೆ ದೇಹವದು ತಾನು, ಸ್ವೀಕರಿಸಿ ಮುದ್ರೆ ಭವ್ಯ.
ಜೀವಿ ಬದುಕಿದುವು ತಾನಿರಲು ದೀರ್ಘ ಅಸ್ಪಷ್ಟ ಸಜ್ಜಿನಲ್ಲಿ,
ಸಂತಾಪ ಇಚ್ಛೆ– ಮತ್ತದೇ ಯುದ್ಧ–ಶಾಂತಿಗಳ ಚಕ್ರದಲ್ಲಿ
ಜಡದ ಜಡತತ್ತ್ವದಿಂದ ಮಬ್ಬಾದ ಜೀವನದ ಹಂತದೊಳಗೆ
ಪಥದಿಂದ ತಾನು ವಿಚಲನೆಗೆ ಸಿಲುಕಿ ಜಾರುತಿಹ ಘಳಿಗೆಯೊಳಗೆ,
ಉತ್ತರೋತ್ತರದ ಶೃಂಗದೆಡೆಯಿಮದ ಆರೋಹ ಕಂಡು ತಾನು
ಯಾವ ಹೆಜ್ಜೆಗಳ ಗುರುತು ಮೂಡಿರದ ಪಥ ಕಾಯುತಿತ್ತು ಇನ್ನು
ಜ್ವಾಲೆ ಜೊತೆಯಲ್ಲಿ ಚಿಮ್ಮಿ ಬಂದಿದ್ದ ಆ ಶಂಕುಛಾಯೆಗುಂಟ
ಅದರ ಮೂಲಕವೆ ಅವನ ಆನ್ವೇಷ–ಕ್ರಿಯೆ ನಡೆಯುತಿರುವ ಹಂತ,
ಸದಾ ಮರೆಯಲ್ಲಿ ತಾನಿರುವ ಚರಮತತ್ತ್ವದಾ ಕುರಿತು ಈಗ
ಅರೆಬರೆಯ ಅರಿವು, ಪಥದಿ ಮುನ್ನಡೆಯೆ, ಸದಾ ತಪ್ಪುತಿದೆ ಈಗ
ಏನಾದರೊಂದು ಯಾರನ್ನು ಇಂದು ಶೋಧಿಸುವ ಕ್ರಿಯೆಯು ಶೂನ್ಯ
ಭಾವವಾದದಾ ಪಂಥವೆಂದಿಗೂ ವಾಸ್ತವಕೆ ಬರದೆ ಮಾನ್ಯ!
ತುದಿಮೊದಲು ಇರದ ಆರೋಹ ಮತ್ತೆ ಅವರೋಹ ಶಂಕು ಮುರಿಗೆ
ಅಪರಿಮಿತ ತಾಣವನು ಅಂತು ಕೊನೆಗಿಲ್ಲಿ, ತಲುಪಿ ಗುರಿಗೆ.
ಯಾರ ಸಲುವಾಗಿ ಸೃಷ್ಟಿಗೊಂಡಿತ್ತೊ ಆ ಭವ್ಯ ಕಾಂತಿಯಾಗ
ಅವನ ಮೂಲಕವೆ ಮತ್ತೆ ಬೆಳಗಿತ್ತು ಭವ್ಯತೆಯು ಈಗಲೀಗ
ಮತ್ತೆ ನಾವೆಲ್ಲ ರಭಸದಲಿ ಜೊತೆಗೆ ನುಗ್ಗಿದ್ದೆವಲ್ಲಿ ಅಂದು
ದೇವನಾನಂತ ನಿಸ್ಸೀಮದೊಳಗೆ ನಾವೀಗ ಸೇರಿ ನಿಂದು.
ಬ್ರಹ್ಮ–ಬೆಳಕಿನಾ ಪರಮಾತಿಪರಮ ಪ್ರಕೃತಿಯಾ ಚಾಪದಲ್ಲಿ
ನಮ್ಮ ಸೃಷ್ಟಿಯಾ ಗಡಿಯಂಚಿನುದ್ದ ರೇಖೆಯಲಿ ನಾವು ನುಸುಳಿ.
ಶಕ್ತಿಮೂಲಗಳ–ವಂಶದಲ್ಲಿಂದು ಸಾಕ್ಷಿಯಾಗಿತ್ತು ಅಲ್ಲಿ
ಉತ್ತರದ–ಸಂಕ್ರಮಣಕಂದು ಅವನು ಆಧಾರವಾದನಿಲ್ಲಿ.

**– ಶ್ರೀ ಅರವಿಂದರ 'ಸಾವಿತ್ರಿ'; ಪುಟ 24**

**ತಮದಿಂದ ಮುಕ್ತಗೊಂಡ ಆತ್ಮ**

ಜೀವ–ಜೀವನದ ಚರ್ಚೆಗಂದಲ್ಲಿ ಮುಕ್ತಾಯ ನೀಡ ಬಯಸಿ
ಸರ್ವಾತ್ಮಭಾವ ವಿಸ್ತಾರಗೊಂಡು ಒಮ್ಮತವು ಮೂಡಲೆಳಸಿ.
ಭಾವ–ಬುದ್ಧಿಗಳ ತಕ–ಜಿಜ್ಞಾಸೆ ವಿಶ್ವಗಳ ಜನಕರಾಗಿ,
ಬಲಗಳೆಲ್ಲದರ ಸಂಘರ್ಷವಂದು ಪ್ರಬಲತೆಗೆ ಹೆಣಗಿ ಹೆಣಗಿ
ಇದ್ದಕಿದ್ದಂತೆ ರುದ್ರ–ಭೀಕರದ ಸಂಘಟ್ಟ ಘಟಿಸುವಂತೆ
ಪ್ರಜ್ವಲದ ಕಾಂತಿಯೊಳು ತಾರೆ ನಿತ್ಯ ತಂತಾನೆ ಬೆಳಗುವಂತೆ,
ವಿಶ್ವದಾ ಪಂಕರೇಣುವಿನ ಕಣದಿ ಪರಮಾಣು ಚಲನದಂತೆ
ತಾಂಡವದ ನೃತ್ಯ–ಪಥದಲ್ಲಿ ಲಯದ ಸಂರಚನೆ ರೂಪದಂತೆ,
ಆ ಲೋಕದಿಚ್ಛೆ ಬಯಕೆಯೊಲು ಉತ್ತ ಅವಕಾಶದೊಳಗೆ ತನ್ನ
ಆ ಕುಹರಗಣವು ತಮ್ಮ ಗುಮ್ಮಟದ ಅನುವೃತ್ತಿ ಮೌನವನ್ನ
ದೀರ್ಘವೃತ್ತದಲಿ ಪರಿವರ್ತಿಸುತ್ತ ಅವಕಾಶದಲ್ಲಿ ತನ್ನ
ಕಾಲಸಲಿಲದಲಿ ಉಕ್ಕಳಿಕೆ–ಮೆಲುಕು ಸಹಜದಲಿ ಅವಿಚ್ಛಿನ್ನ
ವಾಂಛೆ–ತೃಷ್ಣೆಗಳ ಬಲದ ಉಗ್ರತೆಯ ಯಾತನೆಯ ಅಂಚಿನಲ್ಲಿ
ಭೂತತ್ತ್ವದೊಡಲ ಜಡದ–ಭಾವದಾ ಆ ಕೆಸರು–ಕಲ್ಲಿನಲ್ಲಿ,
ಸಂಚಲನ ಉದಿಸೆ ಆ ಪಂಕದಾಚೆ ಮೂರ್ತಿಯದು ಮೂರ್ತ–ಜೀವ
ವಿಶ್ವದಾ ಹಸಿವ ತೃಪ್ತಿ ಪಡಿಸಲೆನೆ ತುಂಬಿದ್'ದ ಆರ್ತ–ಭಾವ
ಮದಚಕ್ರವಾಗ ವೇದನೆಯ ಜ್ವಾಲೆ ಸೃಷ್ಟಿಸಿಹ ಹಂತದತ್ತ,
ಪುಣ್ಯಾದಾಚರಣೆ ಸೋತು ನಿಂತಿರಲು ವಿಧಿಯದನು ದಂಡಿಸುತ್ತ,
ರೋದನದ ಪ್ರೇಮ, ದೇವ–ದೇವತೆಯ ಸಂಘರ್ಷಮಯದ ಶಾಖ
ದೀರ್ಘಾತಿದೀರ್ಘ ಉಲ್ಲಾಸವನ್ನು ಉಧ್ವಸ್ಥಗೊಳಿಸಿ ದುಃಖ,
ಸ್ವಯಂಪ್ರಭೆಯೊಳಗೆ ನಿತ್ಯ–ಸತ್ಯದಾ ಹೊಳೆ–ಹೊಳೆವ ಬೆಳಗಿನೊಳಗೆ
ಸರ್ವವದು ತಾನು ದಿಗ್ಬಂಧಗೊಂಡು ಉಸಿರಿತ್ತು ಸಹಜದೊಳಗೆ.
ಅವನಾತ್ಮವಾಗ ಮುಕ್ತತ್ವ ಹಂತದಲ್ಲೀಗ ಮಿಲನಗೊಂಡು
ಸ್ವಯಂ–ಸಾಕ್ಷಿಯೊಲು ಜೊತೆಗೆ ತಾನೊಡೆಯನಂತೆ ನವ–ಭಾವವಿಂದು.

**– ಶ್ರೀ ಅರವಿಂದರ 'ಸಾವಿತ್ರಿ'; ಪುಟ 32–33**

**ಪರಮೋಚ್ಚ ನೀತಿ ನಿರೂಪಕ**

ಅರೆಚಣದ ಕಾಲ ಮೊದಮೊದಲು ಮಾತ್ರ ದ್ಯುಲೋಕದ ಸ್ಥಿತಿಗಳೆಲ್ಲ
ಈ ಭವ್ಯ–ಬೃಹತ್–ಉನ್ನಮನ–ಕ್ಷಮತೆ ಸಹನೆಯಲಿ ಧರಿಸಿತೆಲ್ಲ
ಆ ಉಚ್ಚತಮದ ಜೊತೆ ದೀಪ್ತಿ ಹೊಳಪ ಕರ್ಷಣೆಯು ಆಗ ತಾನು
ಶೀಘ್ರಾತಿಶೀಘ್ರ ವಿಭಜಿಸುತ ಮತ್ತೆ ಲಯವಾಗತೊಡಗಿತಿನ್ನು,
ದೇಹ ಘನ ಜಡದ ಸ್ತಬ್ಧತೆಯು ಮತ್ತೆ ನಿಶ್ಚಲದ ಭಾವವಾಗಿ
ಸದ್ದಡಗಿ ನಿಂತ ಅಚೇತನದ ಗತಿ, ಜೀವನದ ಹಂತವಾಗಿ,
ನಿರ್ಜಡದ ಸ್ಥಿತಿಯ ಮಹಬಲವು ಮತ್ತೆ ನೀರವದ ಶಾಂತ ಮನದ:
ಇಲ್ಲದಿರೆ ಮೆಲ್ಲ ಮೆಲ್ಲನೇ ವಿಫಲ ಸ್ವರ್ಣಮಯ ಬೆಳಕ–ಚೋದ.
ಅಪರಲೋಕದಾ ಗಡಿಬಿಡಿಯ ಜೀವ–ಸಮುದಾಯವೆಲ್ಲ ಈಗ
ದಿವ್ಯ ಶಾಂತತೆಯ ಹಂತದಲಿ ಮತ್ತದೆ ಅಸಹನೆ ತೋರುತೀಗ;
ಗತ ದಿನದ ಕೊಂಚ ಕಾರ್ಯಗಳ ಜೊತೆಗೆ ಮುದದ ಭಾವಗಳ ವೃಂದ
ವಿವಿಕ್ತತೆಯು ತಾ ಹಂಬಲಿಸಿ ನಿತ್ಯ, ನೆನೆನೆನೆದು ನಿಲುವ ಛಂದ,
ರೂಢಿಗತವಾದ ಪದದ ಗುರುತಿಗೆನೆ ಅಪರಾದ ಮಾರ್ಗವೊಂದ
ಪರಮಾಪ್ತವಾದ ಅಣುರೂಪದಾತ್ಮಗಳ ಮರಳಿ ಕರೆವ ಬಂಧ.
ಅತಿ ಸಹಜ ಪತನಗೊಳ್ಳುತಿಹ ಕ್ಷಮತೆಗಿದೋ ನಿಲುಗಡೆಯ ಬಯಕೆ
ಅಂಬೆಗಾಲಿಡುತ ಮುಗ್ಧಮಗುವೊಂದು ಬಲು ದೂರ ಸಾಗದಂತೆ,
ಮಹದ್ಬಲಗಳನು ಬದಲಿಸಲು ಇಹುದು ಚಿರದ ಉತ್ಥಾನ ಹಂತ
ಹೃದಯಾಗ್ನಿ ಯಜ್ಞಕುಂಡಲದಿ ಪರಮ ಪಾವಿತ್ರ್ಯ ಜ್ವಾಲೆ ಶಾಂತ
ಸುಪ್ತಚೇತನದ ರಕ್ಷೆ ಕವಚದಾ ಆ ಗತದ ಎಳೆತವೊಂದು
ನವರೂಪದಲ್ಲಿ ಪರಿವರ್ತಗೊಂಡು ಮರುಕಳಿಸಿ ಜನಿಸಿತಿಂದು;
ಹಿಂಜರಿಯುತಿರುವ ಚೈತನ್ಯವನ್ನು ಔನ್ನತ್ಯ ಮೂಲದಿಂದ
ಬರಸೆಳೆದು ಅದುವು ರೂಪಿಸುತ ಸರ್ವ ಸಾಕ್ಷಿ ಚೈತನ್ಯದಿಂದ
ಇಲ್ಲದಿರೆ ನಮ್ಮ ನಿಶ್ಶೇಷವಾದ ಅಪಕರ್ಷ ಎಳೆದು ಕೆಳಗೆ
ನಮ್ಮೆದೆಯ ಮೂಲದಾ ಜಡತೆ ಕುರುಡು ಪಥವಿರುವ ಎಡೆಯ ಕಡೆಗೆ.
ಆ ಪರಮ ಪದದ ಸಮನ್ವಯಕಾರ ಇವುಗಳೆಲ್ಲವನು ಬಳಸಿ
ನಮ್ಮ ಅವನತಿಯ ಪಥವ ಬದಲಿಸುತ ಮೇರು ಉನ್ನತಿಗೆ ಸಲಿಸಿ.

**– ಶ್ರೀ ಅರವಿಂದರ 'ಸಾವಿತ್ರಿ'; ಪುಟ 34**

**ಮನುಕುಲದ ಪಾತ್ರವನ್ನಾಯ್ದುಕೊಂಡು ದರ್ಶನದಿ**

ಪರಿಮಿತಿಯೆ ಇರದ ಆದ್ಯಂತರಹಿತ ಋತವಿಂದು ಆತ್ಮರೂಪಿ
ಮೌನಮೌಕ್ತಿಕದ ಶಕ್ತಿ ಅವಕಾಶ ಜೊತೆಗಿಲ್ಲಿ ವಿಶ್ವವ್ಯಾಪಿ.
ಆ ಆತ್ಮತೇಜ–ವಿಕಸನದ ಕ್ರಿಯೆಯ ಕ್ರಮಗಳಲಿ ಅರಳುತಿರಲು
ಹಲ ಹಂತಗಳಲಿ ಅನಿರ್ವಚನೀಯ ಮಾಯಕದ ರೂಪವಿರಲು
ಅವಕಾಶದಿಂದ ಅವತರಣಗೊಂಡು ಅವತರಿಸಲೆಂದು ಬಂದು
ಭೂ–ಬದುಕನೆತ್ತಿ ಆ ಭವ್ಯದೆಡೆಗೆ ಉಡ್ಡಯನ ಗೈಯಲೆಂದು
ಮನುಕುಲದ ಪಾತ್ರವನ್ನಾಯ್ದುಕೊಂಡು ದರ್ಶನದಿ ಸ್ಪರ್ಶ ನೀಡಿ
ಚಿನ್ಮಯದ ಕಾಂತಿ–ಶಿಖೆಯೊಂದು ನಿತ್ಯ ತನ್ಮಯದಿ, ಪ್ರಭೆಯು ಮೂಡಿ
ಪರಮೋಚ್ಚ ದಿವ್ಯ ನೆಲೆಯಲಿಹ ಪ್ರಾಣದನಿಲವದು ತಾಣದಿಂದ
ಅವತರಣಗೊಂಡು ಉಸಿರಾಗಿ ಬಂದು, ಅಸ್ತಿತ್ವ ಜನನವಿಂದ
ಪಥದ ಸ್ಪರ್ಶನಕೆ ಮಾರ್ಗದರ್ಶನಕೆ ಜಾಗ ವಿಭಾತಿ–ಜ್ಯೋತಿ
ಕರಣೋಪಕರಣ ಗಣಗಳೆಡೆ ಇಳಿದು ಸ್ಥಿತಿ ಸ್ವರೂಪ ಶಕ್ತಿ;
ಕೆಲವೊಂದು ಘಳಿಗೆ ಕಣ್ಮನವ ತಣಿಸೆ ಮಣಿಶಿಲೆಯ ಮೂರ್ತಿಯಂತೆ
ಅಚಲ ಭಾವದಲಿ ನೆಲೆ ನಿಂತಿತಲ್ಲಿ ಸು–ಸ್ಥಿರದ ದೃಶ್ಯದಂತೆ;
ಘನ–ಮೌನ–ಶಿಖರ ಕಾಯವದು ನಿತ್ಯ ಆಧಾರ ಪೀಠವಾಗಿ
ನಿತ್ಯತ್ವ ಶಾಂಥದಸ್ಮಿತೆಗೆ ರೂಹು ಸಹಕಾರ ಸತ್ಯವಾಗಿ
ಹೊಮ್ಮಿತೋ ಚಿಮ್ಮಿ ಆಂತರ್ಯದಲ್ಲಿ ಸರ್ವಸ್ವ ಶೋಭೆಗೊಂಡು
ದರ್ಶನದ ದಿವ್ಯ ಪ್ರಜ್ವಲನ ಭವ್ಯ ಮಿನುಗುತಲಿ ರೂಪುಗೊಂಡು;
ಹಲಕೆಲವು ಶ್ರೇಷ್ಠ ಸುವಿಶಾಲ ಪೀಠದಾಧಾರ ಖಂಡ–ಯುಕ್ತ
ಆವರಿಸಿತೀಗ, ಆವರಣಕೆಲ್ಲ ಮುಕ್ತಿ ಸಹಜಾಭಿವ್ಯಕ್ತ
ಹೃತ್ಕೇಂದ್ರದಿಂದ ಉತ್ಕ್ರಮಿಸಿ ಚಿರದ ವೇಗದಲಿ ಸಾಗುತಿರಲು
ಚಿಜ್ಜ್ಯೋತಿವರ್ಣದಾರ್ಣವದ ಸಂಘ, ಸುಜ್ಞಾನ ಹೊಮ್ಮುತಿರಲು,
ನಿರ್ದ್ರವ್ಯ ಸ್ಥಿತಿಯ ಘನಮೌನ ಯತಿಯ ಅವಕಾಶವದುವು ತಾನು
ಬೆಳಗುತಲಿ ಬಂದು ತೊಳಗುತಲಿ ನಡೆವ ಬೆಳಕಿನಾ ಮಾಲೆಗಳನು,
ಅದ್ಭುತಾದ್ಭುತದ ಉದ್ಭೂತಶಕ್ತಿ ಜೊತೆ ಸ್ವರ್ಣವರ್ಣಜ್ವಾಲೆ
ಜೊತೆಗಲ್ಲಿ ಪ್ರಕೃತಿ ಕಂಪನದಿ, ನಿತ್ಯ ವಿಕಸನದ ನವ್ಯ ಲೀಲೆ.
ಕೆಲವೊಮದು ಘಳಿಗೆ ವಿಶ್ವಾತ್ಮ ರೂಹು ನಮ್ಮೆಲ್ಲರನ್ನು ಕಂಡು

ತನ್ನಾತ್ಮ ತತ್ತ್ವದಾಂತರ್ಯದಂತೆ, ಸ್ವಾಧೀನವಿಟ್ಟುಕೊಂಡು,
ಪೋಷಿಸಿರೆ ಪೂರ್ಣ, ಪೂರ್ಣತ್ವದೆಡೆಗೆ ಪಥಕೊರೆವ ವಿಶ್ವ ತಥ್ಯ
ನಾವೀಗಲೂನು ಅರಿಯಲಿದೆ ಅದನು, ಅದು ನಮ್ಮದೆಂಬ ಸತ್ಯ;
ನಮ್ಮಾತ್ಮವೆಲ್ಲ ಒಮ್ಮತದಿ ಇಂದು, ಸಮ್ಮತಿಸಿ ಅರಿತು ನೆಲೆಯ
ನಮ್ಮುಸಿರಿಗೀಗ ಪರಮಾತ್ಮನಿಂದು ಆರಾಧ್ಯ ಭಾವಕೊಡೆಯ.
ಭವ ಬದುಕ ಕವಚದಾ ಕ್ಷೀಣ ಹಂತದಲು ಸಹಿತ ಹಣುಕಿ ನಿಂತ
ಅಹಂ–ತತ್ತ್ವವದು ಕರಗುತಲಿ ಈಗ, ಮರೆಯಾಗಲೆಂದು ಸತತ;
ಸ್ವಯಂ ಸ್ಥಿತಿ ಭಾರ ಹೊಂದಿ ನಿಂತಿರುವ ಭಾವಕ್ಕೆ ರೂಪವಾಗಿ
ಆಗ್ರಹದಿ ಮತ್ತೆ ಬಯಕೆಗಳನಿಡದೆ ನಿಗ್ರಹಿಸಿಕೊಂಡು ಸಾಗಿ.
ತಂತಾನೆ ತಾನು ಅಸ್ತಿತ್ವ ಪಡೆವ ಅತಿಸೂಕ್ಷ್ಮ ವಿಷಯದಂತೆ
ವೈಶಿಷ್ಟಪೂರ್ಣ ಸೃಷ್ಟಿದೃಷ್ಟಿಯಾ ಕಳಚುತಲಿ ಸಾಗಿದಂತೆ,
ಪ್ರಕೃತಿಯಲಿ ಕರಗಿ ಜೊತೆ ದೈವವಾಗೆ ನಮ್ಮೆಲ್ಲರನ್ನು ಈಗ
ಮುಕ್ತಗೊಳಿಸುತಲಿ ಶಕ್ತವಾಗಿಸಲು, ಏಕಾತ್ಮ ಬಂಧವಾಗಿ.
ಚಿಜ್ಯೋತಿ ಪಣತಿ ಕಾಂತಿಗಳ ಮಾಲೆ ಹೃನ್ಮನದ ಸಾಲು ಹೊಮ್ಮಿ
ಆ ಘಳಿಗೆಯಲ್ಲಿ ಹೃದಯಸ್ಥ ಭಾವ ಸರ್ವಸ್ವ ಹೊಮ್ಮಿ ಚಿಮ್ಮಿ
ನಮ್ಮಾತ್ಮ ಶಕ್ತಿ ಏಕಾಂಗಿಯಾಗಿ ಧ್ಯಾನಸ್ಥ ಮುದ್ರೆ ಒಡನೆ
ಸಂವಹನ ಹೊಂದಿ ತನ್ನದೇ ಮೂಲ ಆಖಾತ–ವೃಂದದೊಡನೆ
ಮುಗಿಲಗಲಕಿಂತ ಮಿಗಿಮಿಗಿಲು ಮೇಲು ವಿಸ್ತಾರ ಸಾರವಿರಿಸಿ
ಚೈತನ್ಯವದುವು ತನ್ನೆಲ್ಲ ದ್ವಾರಗಳನಾಗ ಮುಕ್ತಗೊಳಿಸಿ;
ಬ್ರಹ್ಮಾಂಡಮೌನ ಮೌನದಲಿ ಮತ್ತೆ ಆವರಿಸಿಕೊಂಡ ತಾಣ
ವಿರಾಡ್ವಿಭೂತಿ ನೆಲೆಯಿಂದ ಬಂದ ಸಾವಿರದ ಪ್ರಭೆಯ ಕಿರಣ
ಕೆಲಕಾಲವೀಗ ಮುಂಬಾಗಿ ಮುದದಿ ಸಹಜೀವಿಯಾಗಲೆಂದು
ನಮ್ಮ ಮೃಣ್ಮಯದ ವಶದಿ ತಾನಿರುವ ಪ್ರಭೆಯೊಡನೆ ಒಡನೆ ನಿಂದು
ತನ್ನ ವಿಸ್ತಾರ ಬೆಳಕಿನಾ ಸಾರದಾಗರವನೆಲ್ಲವೀಗ
ನಮ್ಮ ಜೀವನಕೆ ಭದ್ರಕವಚದೊಲು ಸಂಕೇತವಯ್ತು ಬೇಗ.

**– ಶ್ರೀ ಅರವಿಂದರ 'ಸಾವಿತ್ರಿ'; ಪುಟ 48**

**ಮನುಜ, ಈಗಲೂ ಮುಗ್ಧ ಶಿಶುವು**

ಬರಿ ಬಾಹ್ಯ ನಿಲುವು ಜೊತೆ ಶೀಘ್ರದೊಲವು ಇವು ನಮ್ಮ ಮೂಲವಾಗಿ
ಗತದ ಭೂತವದು ಪಾರ್ಶ್ವಭೂಮಿಯೊಲು ಜೊತೆಗಲ್ಲಿ ಸಖ್ಯವಾಗಿ;
ಮನವು ಬಂಧಿಸಿರೆ ಆತ್ಮವನು, ನಾವು ಕರ್ಮಕ್ಕೆ ದಾಸರಾಗಿ
ಚಿತ್ಸೂರ್ಯನನ್ನು ಚಿತ್ತೈಸಿ ತಲುಪಿ ಚಿನ್ಮಯದ ರೂಪಕಾಗಿ
ನಮ್ಮ ಸ್ಥಿರದ ಬದ್ಧದನಿಮೇಷ ದಿಟ್ಟಿಯದು ನೇರ ಸೂಕ್ತ
ಸಾಗಲೆಳಸುತಿರೆ, ಮುಕ್ತಗೊಳಿಸುವೆಡೆ ನಾವಿಂದು ಇಲ್ಲ ಶಕ್ತ.
ಶಕ್ತ ವಿಶ್ವದಾ ಕರಗಳಲಿ ಮನುಜನೀಗಲೂ ಮುಗ್ಧ ಶಿಶುವು
ವಂಶವಾಹಿನಿಯ ಕೊಂಚ ಅಂಶದಲಿ ಪಶುಮನದ ಜೊತೆಗೆ ನಿಲುವು
ಕೆಲವು ಕ್ಷಣಗಳಾ ಜನ್ಮಜನ್ಮಗಳ ಪರ್ಯಾಯ ಮಾಲೆಯಲ್ಲಿ
ನಿತ್ಯ ನೂತನದ ವರ್ತಮಾನದೆಡೆ ಅವನ ತುಸು ಹಕ್ಕಿನಲ್ಲಿ;
ಅವನ ಸ್ಮರಣೆಯದು ಮರುಕಳಿಸಿ ಕಂಡು ಆ ಭವ್ಯ-ಭೂತವನ್ನು
ಭವಿತವ್ಯ ಮರೆಗೆ ಅವನೆದುರು ಆಗ, ಬಲು ಮುಂದೆ ಸಾಗಿತಿನ್ನು;
ಕಲ್ಪನೆಯ ಕಲ್ಪ-ಮಾಲೆಗಳ ಕಾಂತಿ ದಿವ್ಯತ್ವ ಭವ್ಯವಾಗ
ಆಹಾರ್ಯ ರಾಶಿ ಆಚ್ಛಾದ ಪ್ರಖರ ಬೆರಗಿನಲಿ ಹೊಂದಿ ಮೋದ
ಅದರ ಮೂಲದಾ ನದನವು ಬಿಟ್ಟು, ಮಿಂಚುತಿಹ ಸದನದೊಳಗೆ
ಅವನದನು ಮಾತ್ರ ಕಾಣುತಲಿ ಇರಲು ಸಂಭ್ರಾಂತ ಭಾವದೊಳಗೆ.
ತನ್ನ ಕಾರ್ಯಗಳ ಸಫಲ-ವಿಫಲವದು ಅಡೆತಡೆಗೆ ಸಿಲುಕದಂತೆ
ಪಥದ ವಿಚಲನದಿ ಪ್ರತಿಕೂಲ ಘಟನೆ ತಾನಲ್ಲಿ ಘಟಿಸದಂತೆ,
ರಕ್ಷಣೆಗೆ ಬದ್ಧ ನಿಯಮಿತದ ದಂಡ-ಭಯಗಳನು ಹೊಂದಿ ನಿಂತ
ಶಸ್ತ್ರ ಸನ್ನದ್ಧ ಬಲದಲ್ಲಿ ಇವನು ಅನವರತ ಕಾರ್ಯ ನಿರತ
ಜ್ಞಾಣ-ವಿದ್ಯೆಗಳ-ಪ್ರಜ್ಞೆ-ಬೋಧೆಗಳ ತೊರೆತೊರೆದು ಶೂನ್ಯದೊಳಗೆ
ಅವನ ಈ ರಿಕ್ತಭಾವ ಸ್ಥಿತಿಯೀಗ ಅನವರತ ತುಮುಲದೊಳಗೆ,
ಪ್ರತಿ ಮಿಡಿತದಲ್ಲು ಸಮಮಿಡಿತವಾಗಿ, ಒಡನಾಡಿಯಾಗಿ ಅವಗೆ
ಅವನ ವೈದಗ್ಧ್ಯದೊಡನೆ ಸಮ್ಮಿಳಿತ, ಹೋರಾಟದಲ್ಲಿ ತೊಡಗೆ
ಅವನ ಕಾರ್ಯಗಳ ಆ ವಿಪಾತಗಳ ಕಾಣಲೆನೆ ಅವನು ಕಾಯ್ವ
ಅವನ ಭಾವಗಳ ಅಚಲತನ ತೂಗೆ ಅವನೀಗ ನಿತ್ಯ ಕಾಯ್ವ,
ಏನ ಪಡೆಯುವನೊ ಎಂದು ಪಡೆಯುವನೊ ಅವಗೀಗ ತಿಳಿಯದಿಹುದು

ಅಂತಿಮದ ಚಣದಿ ಅವನಿರುವ ಖಚಿತ, ಅವಗೀಗ ತಿಳಿಯಬಹುದು,
ಇಲ್ಲದಿರೆ ಮತ್ತೆ ಹಿಮಯುಗದ–ಗಜದ ತೆರದಲ್ಲಿ ಹುಗಿದು ಮಾಯ
ಮರದಲ್ಲಿ ಸತತ ತಲೆಕೆಳಗು ಜೋತು, ನೆಲ–ನಡೆಗೆ ವಿಫಲ ಕಾಯ
ತಾ ರಾಜನಾಗಿ ನೆಲೆ ನಿಂತ ನೆಲದ ಒಲವನ್ನು ತೊರೆವನೇನೊ
ದಿವದಲ್ಲಿ ಕರಗಿ ಅಂತಿಮದ ಹಂತ ಇವನಂದು ಪಡೆವನೇನೊ
ಅವನ ಜೀವನದ ಜೀವ–ಜೀವಾಳದಾಳಗಳ ತಿಳಿಯದೇನೆ
ಅರ್ಥವನು ಗ್ರಹಿಸೆ ಅವನು ಅಸಮರ್ಥ ಗತಿಗಮನವರಿಯದೇನೆ
ಅವನ ಭವ್ಯತೆಯ ಅವನಕಾಂತಿಯುತ ಉಜ್ವಲದ ಅರ್ಥವರಿಯ
ಅವನ ಉನ್ನತಿಯ ಉನ್ನತೋನ್ನತದ ಗುರಿ ಶಿಖರ ಶ್ರೇಣಿ ತಿಳಿಯ.

**– ಶ್ರೀ ಅರವಿಂದರ 'ಸಾವಿತ್ರಿ'; ಪುಟ 53**

**ವಿಕಾಸಗೊಳ್ಳಲಿಹ ದೇವ**

ಅವಧಾನವಿರದೆ ವ್ಯವಹರಣೆಗೆಂದು ಚರಿಸುತಿಹ ಲೋಕಕಿಂದು
ಭೇಟಿಯಾಗುತಲಿ, ಮಾರ್ಗದರ್ಶಣಕೆ ಜೊತೆಜೊತೆಗೆ ಗಮಿಸಿ ನಿಂದು.
ಗವಸಿನಲಿ ಅವಿತ ಪರಮಾತಿಶಯದ ಪರಮಾನುಭವದ ಶಿಖರ
ಅಸ್ತಿತ್ವ ಪಡೆದ ಅವನ ಪೀಠವದು ಪರಮೋಚ್ಚ ಪರಮ ಪ್ರಖರ.
ತಮದ ಘನಮೊತ್ತದೊತ್ತಡಕೆ ಸಿಲುಕಿ ಭೂ–ತತ್ತ್ವದೆದೆಗೆ ಕುತ್ತು
ತತ್ತರಿಸೆ ಶ್ವಾಸ ಪರಿತಪಿಸುವಲ್ಲಿ ಕತ್ತಲೆಯು ಹೆಚ್ಚಿ ಸುತ್ತು
ಮತ್ತೆ ತಾನಲ್ಲಿ ಪರಮಪುರುಷನಾ ಸಶರೀರ ಮನವು ತಾನು
ಐಕ್ಯೈಕ ಮಾರ್ಗದರ್ಶನದ ಜ್ಯೋತಿ–ಕಾಂತಿಯಲಿ ಮಿನುಗಿತಿನ್ನು,
ಗೂಢ ಕಾರ್ಯಗಳ ಮಾಡಲೆಳಸುತಲಿ ಗುಹ್ಯದಲಿ ಸುಳಿಯುತಿರುವ
ಕತ್ತಲಲಿ ಸುತ್ತಿ ಚೋರ ತಾನಲ್ಲಿ ಹೆಜ್ಜೆಗಳನಿಡುತ ಬರುವ–
ರೀತಿಯಲಿ ತನ್ನ ಮನದೆಡೆಗೆ ಬಂದ ತನಗರಿಯದಂತೆ ತಾನು
ಕಾಣದಂತಾಗಿ ಕರಗುತಲಿ ಅಲ್ಲಿ ಪಥವಿಟ್ಟು ಬಂದರೂನು.
ಅಸ್ಪಷ್ಟವಾದ ಆ ಶ್ರಾವ್ಯದಲ್ಲಿ ವಾಣಿಯದು ಮಾತನಾಡಿ
ಶೂನ್ಯ–ಸೂಕ್ಷ್ಮ–ಸಂ–ವೇದ ಛಂದದಲಿ ಆತ್ಮವದು ಅದನು ನೋಡಿ
ಘನಶಕ್ತಿಯೊಂದು ಮನದಾಳದಾಳ ಹೃದಯದೆಡೆ ಬಂದು ನಿಂದು
ಸೆಳೆದಿತ್ತು ತನ್ನ ಕಡೆಗೆಲ್ಲವನ್ನು ತುಂಬುತ್ತ ತನ್ನನಿಂದು

ಮಂಜುಳದ ಜೊತೆಗೆ ರಮಣೀಯ ರಕ್ಷೆ ವಿಸ್ತಾರ ಸಾರ–ಸಾರ
ತೆರೆ–ತೆರೆದವೀಗ ಮುಚ್ಚಿಕೊಂಡಿದ್ದ ಜೀವನದ ಎಲ್ಲ ದ್ವಾರ
ಪ್ರತಿರೋಧಿಸುತ್ತ ಉಳಿದುಕೊಂಡಿದ್ದ ಆ ಜಗವನೆಲ್ಲವನ್ನು
ಮತ್ತದೋ ದಿವ್ಯ–ಸೌಂದರ್ಯ–ವಿಜಯ ಆವರಿಸಿಕೊಂಡಿತಿನ್ನು,
ವಿಸ್ಮಯವ ತುಂಬಿ ಸತ್ಯದಾ ಕಿರಣ ಆವರಿಸಿ ಪ್ರಕೃತಿಯನ್ನು
ದೇವದೇವನೀ ಅವ್ಯಕ್ತ ಕೃಪೆಯಾ ಒತ್ತಾಯದಲ್ಲಿ ಇನ್ನು
ಸಂತೃಪ್ತಗೊಂಡ ಹೃದಯವದು ಮತ್ತೆ ರಸೋದ್ಗಾರದೊಡನೆ ಭವ್ಯ
ಜೊತೆಗೆ ಬುವಿಯಿಂದು ತಾ ಬೆಳೆದು ಬೆಳಗಿ ಅನಪೇಕ್ಷವಾಗಿ ದಿವ್ಯ.
ಭೂತ–ಭೌತಿಕಕೆ ಮೂಲವಾಘುತಲಿ ಇಂದ್ರಿಯಕೆ ಗ್ರಾಹ್ಯವಿರುವ
ಆಕಾಶ–ಕಾಲದುದ್ದಕೂ ಮತ್ತೆ ವಿಸ್ತರಿಸಿ ವ್ಯಾಪಿಸಿರುವ
ದ್ರವ್ಯಾಂತರಂಗದಲ್ಲೀಗ ಸಹಿತ, ಚೈತನ್ಯವದುವು ಮತ್ತೆ
ಉತ್ತಾಪದಲ್ಲಿ ಬೆಳಗಿತ್ತು ಸರ್ವ ಸರ್ವಾಂತರಂಗ ಸತ್ತೆ,
ತನುವಂತರಂಗದಲ್ಲೀಗ ಮತ್ತೆ ದೇಹವದು ತನಗೆ ತಾನೆ
ವಿಸೃಕ್ಷೆಗಾಗಿ ಸ್ವತಃಸಂಭವೀಯಂತಾಗಿ ಅದುವು ತಾನೆ;
ಮಿನುಮಿನುಗು ತಾರೆಗಳ ವಿಶ್ವಗೀತೆಯಾಗಾನ ಆಲಿಸುತ್ತ
ತಮವದುವು ಈಗ ಅರಳಲೆನೆ ಬೇಗ ಜಾಗರಿಸಿಕೊಂಡಿತಿತ್ತ,
ಸುಪ್ರಭೆಯ ಪಥದಿ ಸುಮನಸದ ಯಾತ್ರೆ ಸರಣಿಯೊಳು ಮೇಳವಾಗಿ
ಬೆಳ್ದಿನದ ಮಾಲೆ ಮಹಾಬೆಳಕಾಗಿ ಹೊಳೆಹೊಳೆದು ಕಾಂತಿಯಾಗಿ,
ಶಾಶ್ವತದ ಸತ್ವ ಬಲವಾಗಿ ಈಗ ನಮ್ಮೊಡನೆ ಸ್ಪಂದಗೊಂಡು
ಅದರ ಶಕ್ತಿಯದು ನಮ್ಮ ಕೃತುವಾಗಿ ನೆಲೆಯಾಗಿ ಹರಸಿತಿಂದು,
ಋತದ ಮೂಲದಲಿ ಚಿನ್ಮಯದ ಜ್ಯೋತಿಪುಂಜವದು ತೇಜವಾಗಿ
ವಿಶ್ವರೂಪವದು ಶಾಶ್ವತದ ನೆಲೆಯ ದರ್ಶನಕೆ ಸಿದ್ಧವಾಗಿ
ಹೊಳೆದು ಬೆಳಗುತಿಹ ಕಿರಣ–ಮಾಲೆಗಳು ನಿತ್ಯತ್ವ ಭಾವವಾಗಿ
ಬುದ್ಧಿಯದು ನಿತ್ಯ ಪ್ರಜ್ವಲಿತ–ಸೂರ್ಯನಂತೆಯೇ ಬಿಂಬವಾಗಿ.
ಅನ್ಯರೆಲ್ಲ ಆಂತರ್ಯವರಿಯಲೆನೆ ತಾವಾಗಿ ಸತತ ವಿಫಲ
ಹಲ–ಕೆಲರು ಮಾತ್ರ ದೃಷ್ಟಾರರಾಗಿ ದರ್ಶಿಸಲು ಸರ್ವವೆಲ್ಲ;
ಚಿನ್ಮಯದ ದೇವ ಸರ್ವತೋಮುಖದಿ ವಿಕಸನದ ವ್ಯಾಪ್ತಿಯೊಳಗೆ
ತರ್ಕದಲಿ ಉಳಿದ ಜಾಣ್ಮೆಯಾ ಗುಂಪು ಬರಿ–ಹರಟೆ–ನಿದ್ರೆಯೊಳಗೆ;

ಬರಲಿರುವ ದಿನದ ಘಳಿಗೆಯದು ಬರಿದೆ ಒಡಲಾಳ ತಿಳಿಯದಿರುವ
ಈ ಬುವಿಯ ಮನುಜ ತಾನರಿಯದಿರುವ ಭವಿತವ್ಯ–ಗೂಢ–ಭಾವ
ಕಾರ್ಯವದು ಸಿದ್ಧಿಯಾಗದೊಲು ಫಲಿತ ಜ್ಞಾನವದು ದೊರೆಯದಂತೆ
ವಿಶ್ವಾಸ ಘನದಿ, ಸ್ಪಂದನಕೆ ಸಿಗದು ಜೊತೆಜೊತೆಗೆ ಕಾಣದಂತೆ.

**– ಶ್ರೀ ಅರವಿಂದರ 'ಸಾವಿತ್ರಿ'; ಪುಟ 55**

ಮಾನವೀಯತೆಯ ಬಹುತೇಕ ಅಂಶವೂ ಈಗ ಅಪ್ರಜ್ಞಾವಸ್ಥೆಯಲ್ಲಿಯೇ ಇದೆ (ನಾನು ಯಾವುದನ್ನು ಇಲ್ಲಿ ಅಪ್ರಜ್ಞಾವಸ್ಥೆ ಎಂದು ಹೇಳುತ್ತಿದ್ದೇನೆಯೋ ಅದು ಚೈತನ್ಯದೊಂದಿಗೆ ಸಂಪರ್ಕವನ್ನು ಹೊಂದಿಲ್ಲ, ಅದರಲ್ಲೂ ಪ್ರಜ್ಞಾಪೂರ್ವಕ–ವಾಗಿಯೇ ಈ ಚೈತನ್ಯದೊಂದಿಗೆ ಸಂಪರ್ಕವನ್ನು ಹೊಂದಿರುವದಿಲ್ಲ), ಈ ಪ್ರಮಾಣವು ಅತ್ಯಧಿಕವಾಗಿಯೇ ಇದೆ.; ಆದರೆ ಇವೆಲ್ಲ ಸಂದರ್ಭಗಳಲ್ಲಿಯೂ ಸಹಿತ ಯಾರು ಸುಸ್ಪಷ್ಟವಾದ ಮತ್ತು ಖಚಿತವಾಗಿರುವ ಏಕೆ ಹಾಗೂ ಹೇಗೆ ಎನ್ನುವ ನಿಯತ ದೃಷ್ಟಿಕೋನವನ್ನು ಹೊಂದಿರುತ್ತಾರೋ ಅವರು ಇದನ್ನು ಪಡೆದುಕೊಳ್ಳಲು ಸಮರ್ಥರಾಗಿರುತ್ತಾರೆ... ಇದೊಂದು ಅದ್ಭುತವಾಗಿದೆ.

ಇದೋ ಇಲ್ಲಿ ನೋಡಿ, ಶ್ರೀ ಅರವಿಂದರು 'ಸಾವಿತ್ರಿ'ಯಲ್ಲಿ ಹೀಗೆ ಅಭಿವ್ಯಕ್ತಿಸಿದ್ದಾರೆ, "ದೇವರು ಭೂಮಿಯ ಮೇಲೆಯೇ ಪ್ರಗತಿಗೊಳ್ಳುತ್ತಾನೆ – ದೇವರೂ ಪ್ರಗತಿಗೊಳ್ಳುತ್ತಾನೆ – ಆದರೆ ಮಾನವ ಮಾತ್ರ..." ಎಂದು ಶ್ರೀಮಾತೆ ನಗುತ್ತಾರೆ. ಜಾಣನಾದ ಮನುಷ್ಯ ಮಾತನಾಡುತ್ತಾನೆ ಜೊತೆಗೆ ವಿಶ್ರಾಂತಿಗೆ ನಡೆಯುತ್ತಾನೆ. ಆ ಕಾರ್ಯ ಸಂಪೂರ್ಣವಾಗಿದೆ ಎಂದು ಇಲ್ಲಿಯವರೆಗೂ ಯಾರೂ ಗುರುತಿಸಿಲ್ಲ (ಸಾವಿತ್ರಿ 1–4). ಇದು ಹೀಗಿದೆ ನೋಡಿ, ಮತ್ತೆ ಇದನ್ನು ಅವರು ತಿಳಿಸುಕೊಂಡಿದ್ದಾರೆ.

**– ಶ್ರೀಮಾತೆ; ಶಿಷ್ಯರೊಡನೆ ಸಂವಾದ; ಮೇ 3, 1969**

**ಸತತ ಚಾಚಿರುವ ಅಭಯ ಹಸ್ತ**

ಆ ಪರಮದೂರ್ಧ್ವ ಸೂತ್ರಮಧ್ಯವದು ತಾನಲ್ಲಿ ರೂಪುಗೊಂಡು
ಊರ್ಧ್ವದಲಿ ನಿತ್ಯ ಅಭಿಷೇಕಗೊಂಡು ಸಂಸ್ಪರ್ಶ ನೀಡಿಕೊಂಡು.
ನೊಗ ಹೊತ್ತ ಜಡದ ಜಗವದುವು ಗಾಣದೋಪಾದಿಯಲ್ಲಿ ಸತತ

ತನ್ನ ಮೈಸುತ್ತ ಸುತ್ತುತಿರಲಲ್ಲಿ ಚೈತನ್ಯ ನಿತ್ಯ –ನಿರತ
ನಮ್ಮ ಶಕ್ತಿಯಿಂದಾಚೆ ಆಚೆಗಿಹ ಸಂಕಲ್ಪ ರೂಹು ಪಡೆಯೆ
ಪರಿತ್ಯಕ್ತಗೊಂಡು ಈ ಜಡದ ಜಗದ ಮೇಲೀಗ ಉಳಿದುಕೊಂಡು
ತಿರುಗಣಿಯ ಸುಳಿಗೆ ಗಿರಗಿರನೆ ಸುತ್ತಿ ನಿತ್ಯದಲು ಭ್ರಮಣಶೀಲ
ಪರಿಮಿತದ ಪರಿಧಿ ನಿರ್ಧರಣೇಗೆಂಧು ನಾವಿಂದು ಸುತ್ತುತಿಲ್ಲ;
ಜಡೆಗಟ್ಟಿ ಜಟಿಲ ಸಂಕೀರ್ಣಗೊಂಡ ಯಾಂತ್ರಿಕದ ಬದುಕಿನಲ್ಲಿ
ಗುರಿಕಾರನಿರದೆ ಗುರಿ ತಪ್ಪಿ, ದೈವವೆಂದವರ ಮಧ್ಯದಲ್ಲಿ
ಸಾವು–ನೋವುಗಳ ಪತನ ಕೋಟಳೆಯ ಸಂಕಷ್ಟ ದಾರಿ ಸುತ್ತ
ಅಲ್ಲೆಮ್ಮ ಬದುಕ ರಕ್ಷೆಗಿದೆ ಸತತ ಚಾಚಿರುವ ಅಭಯ ಹಸ್ತ.
ಅಗಣಿತದ ಕಾಯ ಜೊತೆ ಜನ್ಮಗಳಲಿ ಅದು ನಮ್ಮ ಸನಿಹದಲ್ಲಿ;
ಆ ಪರಮ ಫಲವು ಅನಿವಾರ್ಯವಾಗಿ ದೊರಕಲೆನೆ ಬಯಸುತಲ್ಲಿ
ಚಂಚಲತೆ ಇರದ ಅದರ ಗ್ರಾಹ್ಯದಲಿ ನಮ್ಮ ರಕ್ಷೆಗಿರಿಸಿತಲ್ಲಿ
ಯಾವ ಕೃತುಶಕ್ತಿ ವಿಚಲಿಸದು ಅದನು ಮೃತ್ಯ ಸಹ ಸೋಕದಿಲ್ಲಿ,
ಕಾಲ ನಿಯತಿಯಲಿ ಋತದ ಅಮರತ್ವ ಚಿದ್ಬ್ರಹ್ಮವಾಗಿ ಸತ್ಯ,
ನಮ್ಮಾತ್ಮಗಳಿಗೆ ಆಶ್ವಾಸ ನೀಡಿ ಆ ಪರಮದೇವ ನಿತ್ಯ
ಬೇಗುದಿಗೆ ಸಿಲುಕಿ ಬೆಂದ ಜೀವನವ ಜೊತೆಜೊತೆಗೆ ಮೃತ್ಯವನ್ನು
ಆ ಮೊದಲ ಮನುಜನಾ ಹೃದಯವಿವನು ಪ್ರತಿಭಟಿಸೆ ನಿತ್ಯ ತಾನು.
ಈ ಜಗದ ರಚನೆಗೈದವನು ತಾನೆ ಜಗದೊಡೆಯ ನಿತ್ಯದಲ್ಲಿ;
ಆ ಪಥದ ಮೇಲೆ ಅವನ ಪದಗುರುತು ನಮ್ಮ ಭ್ರಮೆಯೆಲ್ಲ ಅಲ್ಲಿ;
ಇವ ಕಾರ್ಯಗೈವ ನಮ್ಮ ದಾರುಣದ ಕಾಲ–ಗತಿ ಸೂತ್ರಗಳಲಿ
ನಮ್ಮ ಜನ್ಮಗಳ ಶ್ರೇಣಿ–ಶ್ರೇಣಿಯಲಿ ಘಟಿಸುತಿಹ ಘಟನೆಗಳಲಿ,
ಸಂಘರ್ಷದಲ್ಲಿ ಜೊತೆ ಶ್ರಮದಿ ಸಹಿತ ಕಠಿಣಾತಿಕಠಿಣದುಸಿರು
ಇವುಗಳಾಧರಿಸಿ ಇವ ಕಾರ್ಯಗೈವ ಪರಿಪೂರ್ಣಗೊಳಿಸೆ ತೇರು,
ನಮ್ಮ ಪಾಫಗಳ ಮತ್ತೆ ಕಷ್ಟಗಳ ಜೊತೆಯಲ್ಲಿ ಅಶ್ರುಬಿಂದು
ಇವ ಕಾರ್ಯಗೈವ ಭವ–ಬದುಕು ದಿವದಿ ಅವಕಾಶ ಪಡೆಯಲೆಂದು,
ನಮ್ಮ ನಿರ್ಜ್ಞಾನವನ್ನು ನಿರ್ನಾಮಗೊಳಿಸಲಿವ ಸತ್ವ–ತನುವು
ಯಾವ ರೂಪದಲು ಬಂದರೂ ಅದನು ಬಿಡದೆ ಧರಿಸುತಲಿ ನಾವು,
ಯಾವ ವೇಷದಲಿ ಯಾವ ಭಾವದಲು ಸಂಕೀರ್ಣ ದೋಷ ಮೇಳ

ಮತ್ತೆ ಪ್ರಚಲಿತದ ನಮ್ಮ ವಿಧಿಲಿಖಿತ ರೂಪಿಸಿರೆ ಹಾಕಿ ತಾಳ,
ಏನೊಂದನೀಗ ನಾವರಿಯದಿರುವ ಜೊತೆ ಕಾಣದಿರಲು ಸಹಿತ
ಆದರೂ ಅದರ ತಾತ್ಪರ್ಯ ಮತ್ತೆ ಸಂಚಿತದ ಭಾವ ವಿಹಿತ,
ಈ ಎಲ್ಲ ಬಲ್ಲ ತಲ್ಲಣದಿ ಕೂಡ ನಮ್ಮನ್ನು ಬಿಡದೆ ಇಂದು
ಆ ಸರ್ವಶಕ್ತ ಮಾರ್ಗದರ್ಶನಕೆ ಮುಂಚೂಣಿಯಲ್ಲಿ ನಿಂದು.
ಭವ್ಯ ವಿಭಜನದ ದರ್ಮದಂತೀಗ ಭಾಗಗೊಂಡಿರುವ ಜಗದಿ
ನಂತರದಿ ನಿತ್ಯ ಈಗಲ್ಲಿ ನಾವು ಕಾರ್ಯದಲಿ ತೊಡಗಿ ಮುದದಿ
ಆ ಪರಮದೇವನಾನಂದ ಹರ್ಷ ಜೊತೆಗದ್ವೈತವೂ ಸಿಕ್ಕು
ನಿಯತಿಯಲಿ ಒಂದು ಇವು ನಮಗೆ ಇಂದು ಆಜನ್ಮ–ಸಿದ್ಧ–ಹಕ್ಕು
ಅಜ್ಞಾತ ವಿಶ್ವದವಧಿ ದರ್ಶಕದಿ ದಿನವೊಂದು ನಿಗದಿಯಾಗಿ
ಉನ್ನತದ ಸೃಷ್ಟಿಯಾಗಲೆನೆ ಪುಣ್ಯದಾಚರಣೆ ಖಚಿತವಾಗಿ;
ನಮ್ಮಾತ್ಮವದರ ವೈವಿಧ್ಯ ಪದವ ತಾ ನ್ಯಾಯಬದ್ಧಗೊಳಿಸಿ
ಆತ್ಮಗತವಾದ ಸರ್ವಸ್ವ ಪೂರ್ಣ, ಇಲ್ಲದಿರನಂತವಾಸಿ.
ದೀರ್ಘಾತಿದೀರ್ಘ ದೂರದಲಿ ಸ್ಥಿತದ ಅನಂತಾನಂತ ಬಲವು,
ಘನಶಾಂಥವೀಗ ನಿರ್ಮಾಣ ಮೌನ ಜೊತೆಜೊತೆಗೆ ಇರಲು ಒಲವು
ಸಂಮಿಲಗೊಡು ಸಂಚಲನದಲ್ಲಿ ಸ್ಪಂದಿಸುತ ನಿಯತಿ ಕರೆಗೆ
ಕೊನೆಗಿಂತು ಕ್ರಿಯೆಯ ಉತ್ಕ್ರಾಂತಿಯಲೆಯ ಸರಣಿಯದು ಪೂರ್ಣದೆಡೆಗೆ.

**– ಶ್ರೀ ಅರವಿಂದರ 'ಸಾವಿತ್ರಿ'; ಪುಟ 59**

**ಉಭಯವಿರೆ ಆದರೂ ಏಕ**

ಅವನಿಹನು ಈಗ ಸೃಷ್ಟಾರ ಮತ್ತೆ ಅವನೆ ಸೃಷ್ಟಿಸಿಹ ಸೃಷ್ಟಿ,
ಅವನಿಹನು ಕಾಣ್ಕೆ ಅವನೆ ದೃಷ್ಟಾರ ಸಾರೂಪ್ಯ ಮಂತ್ರ–ವೃಷ್ಟಿ;
ಅವನಿಗವನೆ ಕ್ರಿಯಾಕಾರಕನು ಜೊತೆ ಅವನದರ ಕ್ರಿಯಾ ಧರ್ಮ,
ಅವನಿಗವನೆ ಜ್ಞಾತ–ಸುಜ್ಞಾತ ಜೊತೆ ಜ್ಞೇಯವೂ ಅವನೆ ಮರ್ಮ,
ಅವನಿಗವ ಸ್ವಪ್ನಶಿಲ್ಪಿಯಾಗುತಲಿ ಮತ್ತದೋ ಸ್ವಪ್ನವವನು
ಅವಕಾಶದಲ್ಲಿ ಅವಕಾಶವಾಗಿ ಅನವರತ ಇರಲು ತಾನು
ಮಾಯೆಯಾಟದಲಿ ಮಾಯೆ ತಾನಾಗಿ ಶಾಶ್ವತದ ಹಂತದಲ್ಲಿ
ಸ್ವಪ್ನ ಚೇತನದಿ ಜ್ಯೋತಿರಾದಿತ್ಯ ನಿರ್ಮಾಯ ಲೀಲೆಯಲ್ಲಿ
ಉಭಯವಿರೆ ಅಲ್ಲಿ ಆದರೂ ಏಕ, ಹಲ–ಲೀಲೆ ಕರ್ಮಗಳಲಿ

ದ್ವಂದ್ವಭಾವವವದು ತಾನಳಿದು ಘನದ ತತ್ತ್ವದಾ ಕ್ರಿಯೆಗಳಲ್ಲಿ;
ಅರಿವಿನಲಿ ಮತ್ತೆ ಮರವಿನಲಿ ಅವರು ಸಂವಾದ ಜೊತೆಗೆ ಮಿಲನ
ಚಿಜ್ಜ್ಯೋತಿ ಮತ್ತೆ ಘನಮಾಯೆಯವರ ಪರಿವರ್ತ ದಿಟ್ಟಿ ಮಾನ.
ನಮ್ಮ ತೋಷ ಜೊತೆ ಕ್ಲೇಶ ಈಗವರ ಪರಿವೇದ ಮಲ್ಲಯುದ್ಧ,
ನಮ್ಮ ಧ್ಯೇಯಗಳು, ನಮ್ಮ ಬಯಕೆಗಳವರ ಕಥನಕಾತ್ಮ ಸಿದ್ಧ;
ನಮ್ಮ ಜೀವನದಿ ಮತ್ತೆ ಚಿಂತನದಿ ಸಂಯೋಗಗೊಳ್ಳಲೆಂದು
ಪರಮಗೋಪ್ಯದಲಿ ಅವರು ಸಂಲಗ್ನದಲ್ಲೀಗ ಐಕ್ಯಗೊಂಡು.
ಗಗನದೊಡಲಿನಲಿ ಈ ಜಗವು ಈಗ ಅಗಣಿತದ ಭಾಗವಾಗಿ
ಸಾವಿರದ ಛದ್ಮವೇಷದಲಿ ಸ್ಥಿತದಿ ರೂಪಾಂತ–ರೂಪವಾಗಿ;
ತೋರುತಿಹ ಭೇದ ಸಂಪೂರ್ಣವಾಗಿ ತೋರಿದೊಲು ಕಾಣದಂತೆ
ಶೂನ್ಯಾತಿಶೂನ್ಯವಿದುವು ಇಲ್ಲೀಗ ದೃಷ್ಟಿಗೂ ನಿಲುಕದಂತೆ
ಇದು ಸಂತ್ಯ–ದೃಷ್ಟಿ ತಾ ಕಂಡ ಸ್ವಪ್ನ ಸಂಗತಿಯ ಅಂಶ ದೀಪ
ಆದರೂ ಇದುವು ಕಂಡ ಕನಸಿಗೇ ಪರಿಪೂರ್ಣವಿರದ ರೂಪ,
ನಿಸ್ತೇಜ ಗತಿಯ ಹಿನ್ನೆಲೆಯಲಿರುವ ನಿತ್ಯತ್ವದೆದುರು ಇಂದು
ಪ್ರತಿಭಾಸಗೊಂಡ ದೃಶ್ಯವಿದು ಸತತ ವೈಶಿಷ್ಟ್ಯದಲ್ಲಿ ನಿಂದು;
ನಾವೀಗ ಅದರ ಸಮ್ಮುಖವನೀಗ ಸಮ್ಮತಿಸಿಕೊಂಡು ಇಲ್ಲಿ
ಆ ಮಾರ್ಗಗಳಲಿ ತೆರೆದಿರುವ ಸರ್ವ ದ್ವಾರಗಳ ದಾಟುತಲ್ಲಿ;
ನಿಕಟವಾಗಲೆನೆ ಪ್ರಕಟಗೊಳ್ಳುತಿಹ ಒಂದಂಶವನ್ನೆ ಆಗ
ಪೂರ್ಣವಿದು ಪೂರ್ಣ ಪರಿಪೂರ್ಣವೆಂದು ಸ್ವೀಕರಿಸಿಕೊಂಡೆವೀಗ.
ಈ ರೀತಿಯಲ್ಲಿ ತಮ್ಮಾಟವನ್ನು ರೂಪಿಸುತ ಅವರು ಈಗ
ನಮ್ಮ ಜೊತೆಯಲ್ಲಿ ಪಾತ್ರವಾಗಲೆನೆನ ಕ್ರಿಯೆಗಿಳಿಯೆ ಸಾನುರಾಗ;
ಕೃತಿಕಾರನಾಗಿ ಮತ್ತದೋ ನಟನು ತನ್ನಲ್ಲಿ ತನಗೆ ತಾನೆ
ದರ್ಶನಕೆ ಮತ್ತೆ ಸಪರ್ಶನಕೆ ದೊರೆವ ದೃಷ್ಟಾಂತ ದೃಶ್ಯವಿನ್ನು,
ಅವಕಾಶಕವನೆ ಅವಕಶವಿತ್ತ ವಿಶ್ವಾತ್ಮ ಜ್ಯೋತಿಬಿಂದು
ಅವಕಾಶದಲ್ಲಿ ಸಂಚಲನಕಾಗಿ ಸಂಚಾರದಲ್ಲಿ ಬಂದು
ಋತವದುವು ಈಗ ಸಾರೂಪ್ಯಕಾಗಿ ಆತ್ಮವದು ಚಲಿಸತೊಡಗಿ
ಬ್ರಹ್ಮಾಂಢವೆಲ್ಲ ಪ್ರಕೃತಿಯೊಲು ತಾನು ಆ ವಿಶ್ವಮಾತೆಯಾಗಿ.

**– ಸಾವಿತ್ರಿ; ಪುಟ 61**

**ಅವನ ಮಾನವ–ಸ್ವರೂಪ**

ಆ ನಿರ್ವಿಶೇಷ ಅದು ನಿರ್ವಿಕಲ್ಪ ಆಕಾಶದಿಂದ ಅತ್ತ
ಆ ಪೂರ್ಣವೀಗ ಆಕಾರರಹಿತ ನಿರ್ದ್ವಂದ್ವವಾಗಿ ಚಿತ್ತ,
ಆ ತಾಣದೊಳಗೆ ನಿಃಸ್ಸಂಗಿ ಪರಮ ಘನಶೂನ್ಯ ಸ್ಥಿತದ ಹಂತ
ಅವನ ಆ ಶಬ್ದಮುಗ್ಧ ಶಕ್ತಿಯಲಿ ಪುಟಗೊಳುವ ತಾನನಂತ,
ಲಕ್ಷಣದ ಕವಚ ತಾನಿರದೆ ಅವಳು ನಿರ್ಲಿಪ್ತ ವಾಸ ತಾಣ
ರೂಪಧಾರಣೇಯ ವ್ಯಾಪ ಹೊಂದಿರದ ಅಪರೂಪ ಮೌನ ತಾಣ
ಸಂಚಲನವಿರದ ಘನಶಾಂತದಲ್ಲಿ ಅವಳ ಸುಷುಪ್ತಿ–ನಿದ್ರೆ
ಕಾಲ–ಕಾಲದಲು ಕಾಲದಿಂದಲೇ ರಕ್ಷಣೆಯ ಕವಚ ಭದ್ರೆ,
ಆನಂದ ಬ್ರಹ್ಮ ಸಾನಂದವಾಗಿ ತನ್ಮಯದಿ ಏಕವಾದ
ಅವನ ಆ ನಿತ್ಯ ಏಕೈಕ ಶೌರ್ಯದನುಪಾಖ್ಯ ರೂಪವಾದ.
ಆ ನಿರ್ವಿಶೇಷ ಅದು ಪೂರ್ಣವೀಗ ನಿರ್ದ್ವಂದ್ವವಾಗಿ ಇಲ್ಲಿ
ಅವಕಾಶದಲ್ಲಿ ಅವನೀಗ ಬಂದ ನಿರ್ಮಾಯ ಮೌನದಲ್ಲಿ;
ಏಕೈಕವಾದ ಆ ಆತ್ಮದಿಂದ ಅಗಣಿತದ ಮೂರ್ತಿಗಳನು
ಅವನೀಗ ರೂಪುಗೊಳಿಸುತಲಿ ಅವಕೆ ಚೈತನ್ಯ ತುಂಬುತಿಹನು;
ತನ್ನ ಆ ಭೂಮಬ್ರಹ್ಮಾಂಡದಲ್ಲಿ ನಿಸ್ಸಂಗಿ ಇದ್ದ ತೆರದಿ
ಈ ಸರ್ವ ಮೂರ್ತ ರೂಪದಲು ಅವನು ಸ್ಪಂದಿಸುವ ನಿತ್ಯ ಮುದದಿ;
ಆಕಾಶವವನು ಅವಕಾಶವವನು ನಭೋಮಂಡಲದ ವ್ಯಾಪ್ತನವನು
ಮಹಾಕಾಶಕೂ ಪರಮದಾಧಾರ ಪರಿಣಾಮ ಸ್ವತಃ ತಾನು;
ಮತ್ತೆ ಜೊತೆಗಲ್ಲಿ ಕಾಲ ತಾನಾಗಿ ಕಾಲಾತ್ಮ ಅವನೆ ಆಗಿ
ಕಾಲೋಪಹಿತದಿ ಕಾಲಕಲನದಲಿ ಚೇತನ–ವಿಭೂತಿಯಾಗಿ;
ಆ ನಿರ್ವಿಶೇಷ, ಪರಿಪೂರ್ಣವೀಗ, ಬಾಧಣೆಯು ಇರದ ಮುಕ್ತ,
ನಮ್ಮಂತರಾಳದಲ್ಲವನು, ಗೂಢ–ನಮ್ಮಂತರಾತ್ಮ ಶಕ್ತ,
ನಮ್ಮ ನ್ಯೂನತೆಯ ಬಾಹ್ಯಕವಚವನು ಊಹನೆಗೆ ಗಣಿಸಿಕೊಂಡು,
ಈ ರಕ್ತ–ಮಾಂಸ–ರಜ್ಜು–ಸ್ನಾಯುಗಳ ಸಂಲಗ್ನ ದೇಹ ಕಂಡು,
ತನ್ನ ನೆಲೆಗಾಗಿ ಸೂಕ್ತ ತಾಣವದು ನಿರ್ಧರಿಸಿ, ವಾಸಗೊಂಡು
ಅದು ತನ್ನದೆಂದು ತಾನಿಂತು ಆ ಬಿಡಾರದಲಿ ಉಳಿದುಕೊಂಡು,
ಅವನ ಪ್ರತಿಮೆಯದು ಮನುಜ ಮಾನಕದ ಎಲ್ಲೆಯಲಿ ರೂಪುಗೊಂಡು

ಅದು ಅವನ ದಿವ್ಯ–ಪರಿಮಾಣದಲ್ಲಿ, ನಾವಾಗ ಉದಿತಗೊಂಡು;
ಆ ಮೇಲೆ ಮತ್ತೆ ಆ ಒಂದು ದಿವ್ಯ–ಆಕೃತಿಯ ಕೃಪೆಯನಿತ್ತ
ಸೃಷ್ಟಾರನವನು ಪುನರ್–ಎರಕದಲಿ ನಮ್ಮನ್ನು ರೂಪಿಸುತ್ತ
ಜೊತೆಜೊತೆಗೆ ಮರ್ತ್ಯಮಾನವನ ಅಚ್ಚು ರೂಪಣೆಗೆ ಆಗ ತಾನು
ಆ ಪರಮದೇವನಾ ನಕ್ಷೆಯನ್ನೆ ವಿಧಿಸುತಿಹನೀಗ ಅವನು
ಅವನ ಆ ಊರ್ಧ್ವ ಅದಿತಿ ಹಂತದೆಡೆ ಚಿತ್–ಸತ್ತ್ವಗೊಳಿಸುತಿರಲು
ಸಾಂತದಲಿ ಇರುವ ನಮ್ಮ ಮನಸುಗಳ ಆ ತಾಣದೆಡೆಗೆ ತರಲು,
ನಿತ್ಯತ್ವದಲ್ಲಿ ಸ್ಥಿತವಿರುವ ಸಾಕ್ಷಿ–ಚೈತನ್ಯವನ್ನು ಈಗ
ಸ್ಪರ್ಶಿಸುವ ಚಣವು ಸವಿಕಲ್ಪದಲ್ಲಿ ನಿಸ್ಸೀಮ ಸೇತು–ಯೋಗ
ಮೃಣ್ಮಯದ ರೂಪ ಪರಿವರ್ತವಾಗಿ ಚಿನ್ಮಯವೆ ಆಗುವತ್ತ
ಅದು ದಿವ್ಯ ದಿವಿಗೆ ಪರಿಶೋಧದಲ್ಲಿ ಪಾವತಿಸಲಿರುವ ಮೊತ್ತ;
ಪರಸ್ಪರರಲ್ಲಿ ಕೊಡು–ಕೊಳುವ ಋಣವು, ಮನುಜನನು ಬದ್ಧಗೊಳಿಸಿ
ಆ ಪರಾತ್ಪರದ ಜೊತೆಗೆ ಸತತದಲಿ ಸಂಬಂಧ ಭದ್ರಗೊಳಿಸಿ;
ಅದರ ಗುಣಧರ್ಮದಂತರಾಳದೊಲು ಕಾಯಕದಿ ನಾವು ನಿರತ
ನಮ್ಮ ಗುಣಧರ್ಮವನ್ನದುವು ನಿತ್ಯ ರಕ್ಷಿಸುವ ತೆರದಿ ಸತತ;
ನಾವೀಗ ದೇವಸಂತತಿಯ ಶ್ರೇಣಿ–ಶ್ರೇಣಿಯಲಿ ಸೇರಿ ಮತ್ತೆ
ಅವನಿರುವ ತೆರದಿ ಅವ ಬಯಸಿದಂತೆ ಕಡ್ಡಾಯವಾಗಿ ಸತ್ತೆ;
ಪ್ರಾಣದೆಳೆಯೊಳಗೆ ದೇಹ ಧರಿಸಿರುವ ನಾವೀಗ ಅವನ ಅಂಶ,
ಕಡ್ಡಾಯದಲ್ಲಿ ದಿವ್ಯತ್ವದೆಡೆಗೆ ಬೆಳೆಬೆಳೆಯುತಿರುವ ವಂಶ.
ನಮ್ಮ ಜೀವನವು ಮಾಯೆ–ಮೋಹದಲಿ ವೈರುದ್ಧ ತೆರೆಗಳಲ್ಲಿ
ಅಬ್ಬರದ ಉಕ್ಕು–ಉಬ್ಬರದ ಬೊಬ್ಬೆ ರಭಸಾತಿ ರಭಸದಲ್ಲಿ,
ಘನತಮದ ಪರದೆ ಅಲೆಯಲೆಯ ತೆರದಿ ಆವರಿಸಲೆಂದು ಸುತ್ತ
ಮಧ್ಯೆ ಮಿಂಚುಗಳು ಕ್ಷಣದ ಪ್ರಭೆ ತೋರಿ ವಿಭ್ರಮಕೆ ಸಿಲುಕಿಸುತ್ತ,
ಆದರೂ ಜೊತೆಗೆ ರಕ್ಷಣೆಯ ಭದ್ರ ಕವಚದೊಲು ದೇವನಿರುವ
ಬೆಳಕಿನೆಡೆ ಚಲಿಸೆ ಚುಕ್ಕಾಣಿಯಿರುವ ನಿತ್ಯ–ನಿರ್ವಚನ–ಭಾವ.


**– ಶ್ರೀ ಅರವಿಂದರ 'ಸಾವಿತ್ರಿ'; ಪುಟ 67**

**ಅವಳಾಟವೀಗ ವಾಸ್ತವದ ಸತ್ಯ**

ಅಲ್ಲಿಹುದು ಸತ್ಯ ಅದನರಿಯಲೆಂದು; ಕರ್ಮದಲಿ ತೊಡಗಲೆಳಸಿ;
ಅವಳಾಟವೀಗ ವಾಸ್ತವದ ಸತ್ಯ; ಮಾಯಕವ ಅವನು ಸಲಿಸಿ;
ಮಾತೆ ಯೋಜಿಸಿದ ಲೋಕ–ಛಂದದಲಿ ಪರಿಪಕ್ವ ಸ್ಥಿತಿಯು ಸತತ,

ಆ ಭೂಮ ಜೊತೆಗೆ ಯಾದೃಚ್ಛೆ ಲೀಲೆಯಲ್ಲವಳ ಹೃದಯ–ಮಿಡಿತ,
ಜೀವನದ ಪ್ರಥಮ ಉಷೆಯಿದನು ಅವಳು ಸತತದಲಿ ಕಾಂತಿಗೊಳಿಸಿ
ಅದು ಚಿರದ ತಾಣ, ಅವಳಾಟದಿಂದ ಅದ ತುಂಬಿ ತುಂಬಿ ನಿಲಿಸಿ,
ಚೇತನಾತ್ಮಕದ ಆ ಭೂಮ–ಭವ್ಯದಲ್ಲವಳು ಚಲನ ಬಯಸಿ
ಆ ಪುರುಷನನ್ನು ಜಾಗ್ರತಿಗೆ ತಂದು ಜಗ–ಯುಗವ ಮುಂದುವರೆಸಿ,
ಬುವಿಯೊಡಲಿನಲ್ಲಿ ಘನಸಮಾಧಿಯಾ ಆ ಸ್ಥೂಲ–ಮೂಲಗಳಿಗೆ
ಋತದ–ಜ್ಯೋತಿ ತಾ ಹಿತದ ಸ್ಪರ್ಶದಲಿ ವಿಕಸನಕೆ ಶುಭದ–ಘಳಿಗೆ,
ಕಾಲದಜಗರವು ದೀರ್ಘ–ನಿದ್ರೆಯಲಿ ಬಲಹೀನವಾಗಿ ನಿಂದ
ಅಚಿತಿಯಾಳದಲಿ ವಾಕ್–ಸ್ತಂಭಗೊಂಡ ಆತ್ಮಕ್ಕೆ ನೀಡಿ ಸ್ಪಂದ,
ಒಲವಿನಲಿ ಮತ್ತೆ ಜಾಗ್ರತಿಗೆ ತಂದು ಮರುಕಳಿಸಿ ಶಕ್ತಿ ಸೃಷ್ಟಿ
ಅಗಣಿತದ ಬಲದ ಆ ಚಕ್ಷು–ಜೋಡಿ ಕಾಲದೆದೆಯಿಂದ ದೃಷ್ಟಿ
ಈ–ಲೋಕ–ಗೀತ–ಮಾಲೆಗಳ ಸರಣಿ ಸಹಭಾವ ಕಾಂತಿ–ದೀಪ
ಆ ದಿವ್ಯ–ಕರವು ತೆರೆ ಸರಿಸಿಕೊಳಲು ವ್ಯಾಕೃತದಿ ಸ್ಫುರದ್–ರೂಪ.
ಇದರ ಸಲುವಾಗಿ ತನ್ನ ಪರಿಶುದ್ಧ ಆ ಧವಲ–ಕಾಂತಿಯುಕ್ತ
ಅನಂತತೆಯಲ್ಲಿ ವ್ಯಾಪ್ತವಾಗಿದ್ದ ನಿರ್ಮಾಯ ಭಾವ–ಮುಕ್ತ,
ಭೂತ–ಭೌತಿಕದ ಲೋಕ–ಲೋಕಗಳ ಆ ಭಾರ–ಸ್ವಸ್ವರೂಪ
ಅತಿಚಿತಿಯ ಮೇಲೆ ಆಧಾರಗೊಳಿಸಿ ತಾನೀಗ ಸ್ಫುರದ್–ರೂಪ,
ಅವಕಾಶದಲ್ಲಿ ನಿಷ್ಕಳದ ಪುಷ್ಪ ವಿಕಸನಕೆ ರೂಹುಗೊಳಲು
ಆ ಬ್ರಹ್ಮಭಾವದಾ ಮಹತ್–ಚಿದ್ಬೀಜ ಸ್ಪಂದಿಸಲು ವಿಶ್ವದೊಡಲು
ಮನದ ಮನ ಲಯದಿ ತನ್ಮಯದ ಕಳೆಯು ಬೆಳಗುತಿದೆ ಅಗ್ನಿ–ಪುಷ್ಪ
ಚಿತ್–ಶಕ್ತಿ ಗರ್ಭದೊಳಗಿಂದ ಉದಿಸಿ ಚಿನ್ಮಯದ ಆತ್ಮದೀಪ.

**– ಶ್ರೀ ಅರವಿಂದರ 'ಸಾವಿತ್ರಿ'; ಪುಟ 73**



**ಅವತರಣಗೊಂಡು ಬರಲಿರುವನವನು ನಿಯತಿಯಲಿ ಒಂದು ದಿನದಿ...**

ಅವತರಣಗೊಂಡು ಬರಲಿರುವನವನು ನಿಯತಿಯಲಿ ಒಂದು ದಿನದಿ
ಈ ಭೂಮಿಗಿಂದು ಜೊತೆ ಜೀವಕೆಂದು ದಿವ್ಯತೆಯ ತರಲು ಮುದದಿ,
ಶಾಶ್ವತಕೆ ಇರುವ ದ್ವಾರಗಳ ಹಿಂದೆ ಅಡಗಿರುವ ಗೂಢಗಳನು
ಪ್ರಕಟಿಸುತ ಸರ್ವ ಸರ್ವಲೋಕ್ಕೀಗ ಲಭ್ಯಗೊಳಿಸುತಿಹನು
ಆರ್ತನಾದದಲಿ ಹಾತೊರೆಯುತಿರುವ ಜಗಕೆಲ್ಲ ಲಭ್ಯಗೊಳಿಸಿ
ಅವನ ಕೃಪೆಯಿಂದ ರಕ್ಷೆ ಪಡೆಯಲೆನೆ ಮೊರೆಯಿಡುವ ಭೂ–ನಿವಾಸಿ,
ಸತ್ಯವನು ನಿತ್ಯಗೊಳಿಸುತಲಿ ತರುವ ಸಂಯೋಗಗೊಳ್ಳಲೆಂದು
ಆತ್ಮ–ಶಕ್ತಿಯದು ಯುಕ್ತತೆಯ ಮುಕ್ತ ಅನುಭಾವ ಪಡೆಯಲೆಂದು,
ಆ ಭೂಮ–ತೋಷ ಈ ಆತ್ಮಕೀಗ ಪಾವಿತ್ರ್ಯಗೊಳಲಿ ಎಂದು

ಸಾಮರ್ಥ್ಯವಿದುವು ಈ ವ್ಯೋಮ–ಬಾಹು–ಪ್ರೇಮದಲಿ ಅಪ್ಪಿ ನಿಂದು
ಬಿಂದು–ಬಿಂದುವಿನಲಿಂಬುಗೊರ್ಳಳುಲಿ ಅವತರಣಗೊಂಡ ದೃಷ್ಟಿ
ಚಿದ್‌ಘನದ ಪೂರ್ಣದಾರ್ಣವಗಳೆಲ್ಲ ಅದರಂತರಂಗ ಸೃಷ್ಟಿ,
ನಿಗದಿತದ–ಸಮಯದಾ ಕಾಯದಲ್ಲಿ ನೆಲೆಗೊಳ್ಳಲೆಂದು ತುಡಿತ
ಅನಂತಾನಂತವದು ಸಾಂತಗೊಂಡು ಯೋಜಿತದ ನಿಯತಿ–ಮಿಡಿತ
ಈ ಪರಮ–ಗುಹ್ಯವನು ಪ್ರಕಟಗೊಳಿಸಿ ಜೀವನವ ಕಾಣಲೆನಲು
ತೇಜಬಿಂದುಗಳಲಿಂದು ಬಂದಿರುವ ನಮ್ಮಾತ್ಮ ಸಾಲು–ಸಾಲು

**– ಸಾವಿತ್ರಿ; ಪುಟ 200**

## ‘ಸಾವಿತ್ರಿ’ – ಅಂತರಾರ್ಥ

**– ಪುಟ್ಟು ಕುಲಕರ್ಣಿ**

ಶ್ರೀ ಅರವಿಂದರ ಅಭಿಪ್ರಾಯದಲ್ಲಿಯೇ “ಸಾವಿತ್ರಿ”ಯನ್ನು ಗಮನಿಸುವದಾದರೆ, “ಸಾವಿತ್ರಿ” ಎನ್ನುವದನ್ನು ಅಧಿರೋಹಣದ ಪಥಗಳು “(Means of Ascension) ಎನ್ನುವ ಭಾವದಲ್ಲಿ ಬಳಸಿದ್ದೇನೆ. ಪ್ರತಿ ಬಾರಿಯೂ ನಿರ್ದಿಷ್ಟಪಡಿಸಿದ ಪ್ರಜ್ಞಾ ಸ್ತರದಲ್ಲಿಯೇ ಪ್ರಾರಂಭಿಸಿದ್ದೇನೆ. ಪ್ರತಿ ಹಂತದಲ್ಲಿಯೂ ಈ ಪ್ರಜ್ಞಾ ಸ್ಥಿತಿಯ ತುರೀಯಾವಸ್ಥೆಯಲ್ಲಿ ಇದ್ದಾಗ, ಮತ್ತೆ ಮತ್ತೆ ಸಾವಿತ್ರಿಯನ್ನು ಪುನರ್–ರೂಪಗೊಳಿಸುತ್ತ ಬಂದಿದ್ದೇನೆ. ಸಾವಿತ್ರಿ ಎನ್ನುವದು ಕೇವಲ ಕಾವ್ಯ ಮಾತ್ರ ಅಲ್ಲ. ಏಕೆಂದರೆ ಇದು ಪ್ರಾರಂಭಗೊಂಡು ಒಂದು ಹಂತದಲ್ಲಿ ಮುಕ್ತಾಯಗೊಳ್ಳುವದಲ್ಲ. ಇದೊಂದು ಅನುಭವ – ಅನುಭಾವಾತ್ಮಕವಾದ ಹಂತದಲ್ಲಿ ಸೃಷ್ಟಿಗೊಂಡಿರುವ ಕಾವ್ಯ. ಇಂತಹ ಹಂತದಲ್ಲಿ ಓರ್ವ ವ್ಯಕ್ತಿಯ ಯೋಗಿಕ ಪ್ರಜ್ಞೆಯಿಂದ (ಅವನ ಯೋಗಾನುಭಾವದ ಶಕ್ತಿಯಿಂದ) ದೃಷ್ಟಿಸಲ್ಪಟ್ಟು, ಉದ್ಗಾರ ಮುಖೇನ ಹೊರಹೊಮ್ಮಿರುತ್ತದೆ ಮತ್ತು ಸೃಜನಾತ್ಮಕವೂ ಆಗಿರುತ್ತದೆ (1936).”

ಈ ಹಿನ್ನೆಲೆಯಲ್ಲಿ, ಸಾವಿತ್ರಿಯನ್ನು ಇನ್ನುಳಿದ ಕೃತಿಗಳಿಗಿಂತ ಸಂಪೂರ್ಣ ಭಿನ್ನ ನೆಲೆಯಲ್ಲಿಯೇ ಕಾಣಬೇಕಾಗಿದೆ. ಪ್ರಥಮ ದಳ(Book–1)ದ ಆಧಾರದಲ್ಲಿಯೇ ಉಳಿದ 11 ದಳಗಳೂ ನಿರ್ಮಾಣಗೊಂಡಿವೆ. 2 ರಿಂದ 12 ನೇ ದಳಗಳವರೆಗಿನ ಪ್ರತಿಯೊಂದೂ ಸಾಲೂ ಸಹಿತ ಪ್ರಥಮ ದಳದ ಆಧಾರದಲ್ಲಿಯೇ ಪರಿಪೂರ್ಣ ಸಿದ್ಧಿ ಅಥವಾ ಪರಿಪಕ್ವ ಪರಿಪೂರ್ಣತೆ (Perfect Perfection)ಯೆಡೆ

ಕರೆದೊಯ್ಯುವಂತೆ ಇರಬೇಕೆಂದು ಬಯಸಿ, ಹಲವಾರು ಬಾರಿ ತಿದ್ದಿ, ಪುನರ್ ರೂಪಗೊಳಿಸಿದ್ದನ್ನು ಶ್ರೀ ಅರವಿಂದರೇ 1934 ರಲ್ಲಿ ತಿಳಿಸಿದ್ದಾರೆ.

ಶ್ರೀ ಅರವಿಂದಾಶ್ರಮಕ್ಕೆ ಶ್ರೀಮಾತೆ ಬರುವದಕ್ಕಿಂತ ಮೊದಲೇ (ಕೆಲ ವರ್ಷಗಳ ಮೊದಲೆ) ಈ ಸಾವಿತ್ರಿ ರಚಿಸಲ್ಪಟ್ಟಿತ್ತು. ಆಗ ಅದು ಕೇವಲ ಭಾಗ 1 ಮತ್ತು ಭಾಗ 2 ಎಂದು ವಿಂಗಡಿಸಲ್ಪಟ್ಟಿತ್ತು. ಇದೀಗ ಲಭ್ಯವಾಗುತ್ತಿರುವ ಪುಸ್ತಕಗಳಲ್ಲಿ ಅದು ಒಟ್ಟು 12 ದಳಗಳಲ್ಲಿ ಪರಿಪೂರ್ಣಗೊಂಡಿದೆ. ಅದರಲ್ಲಿ ಸೃಷ್ಟಿಯ ದಳ, ಆತ್ಮಾಭಿಲಾಷೆಯ ದಳ, ಪ್ರೇಮದ ದಳ, ದೈವದ ದಳ ಹಾಗೂ ಸಾವಿನ ದಳಗಳಲ್ಲಿ ವಿಂಗಡಿಸಲ್ಪಟ್ಟಿತ್ತು.

ಒಟ್ಟಿನಲ್ಲಿ ಸಾವಿತ್ರಿ ಹೇಳುತ್ತಿರುವದು "ವಿಶ್ವಮಾತೆಯ ಅವತಾರದ ಆಂತರ್ಯವನ್ನು". ಈ ರೀತಿಯ ಅವತಾರವು ಪ್ರಾಯಃ ಆದಿಮದ ಅವಧಿಯಲ್ಲಿ, ಅಂದರೆ, ಇಡಿ ವಿಶ್ವ ತನ್ನನ್ನು ತಾನು ಪ್ರಕಟಗೊಳಿಸಿಕೊಳ್ಳಲು ಅಂಕುರಗೊಂಡ ಅವಧಿಯಲ್ಲಿ ಪ್ರಾರಂಭಗೊಂಡಿದೆ. ಅದಕ್ಕೆ "ಅಮೃತತ್ವದೆಡೆಗೆ ಪಥಗಳನು ಕಡೆದು" ಸಾಗಿರುವ ಹಂತವಾಗಿದೆ. ಸಾವಿತ್ರಿಯ ಮೂಲ ಬರವಣಿಗೆ ಬದುಕಿನ (ಭೂ–ಸ್ಥರದ) ಹಂತದಿಂದಲೇ ಬುದ್ಧಿ ಪ್ರಾಧಾನ್ಯತೆಯಲ್ಲಿಯೇ ಪ್ರಾರಂಭಗೊಂಡಿದ್ದರೂ, ಅದು ಅಂತರ್ಮನದೊಂದಿಗೆ ಮಿಡಿದು, ಚೈತನ್ಯದಾತ್ಮದೊಡನೆ ಸ್ಪಂದಿಸಿ, ಕಾವ್ಯದ ಪರಿಪೂರ್ಣತೆಯ ಸೌಂದರ್ಯ ಪ್ರಜ್ಞೆ ಹಾಗೂ ಜಾಣ್ಮೆಯೊಡನೆ ಮೇಳೈಸಿ, ಆ ಮಹೋನ್ನತದ ಪ್ರಾಣದೊಂದಿಗೆ, ತದನಂತರದಲ್ಲಿ ಅದು ಅಧಿಮಾನಸ (Higher Mind) ಸ್ತರದಲ್ಲಿ, ಪ್ರಜ್ಞಾಪೂರ್ವ ಸ್ಥಿತಿಯಲ್ಲಿ ಮತ್ತು ಪ್ರಕಾಶಮಾನಗೊಂಡು –ತತ್ತ್ವವಾಗಿ– ರೂಪುಗೊಂಡಿದೆ. ಇಲ್ಲಿ 'ಸಾವಿತ್ರಿ' ಮಂತ್ರ ಸ್ವರೂಪದ ಆಯಾಮಗಳಲ್ಲಿ ಕೆಲವು ವಿಷಯಗಳನ್ನು ಇಲ್ಲಿ ಗಮನಿಸಲಾಗಿದೆ. ಸಾವಿತ್ರಿ ಒಂದು 'ವೈಶ್ವಿಕ ಕಾವ್ಯ'ವೆಂದು ಆದರಿಸಲ್ಪಡುತ್ತಿರುವದರಿಂದ, ಅದಕ್ಕಿರುವ 'ವೈಶ್ವಿಕ ಆಯಾಮ'ಗಳನ್ನೂ ಅಧ್ಯಯನ ಮಾಡಬೇಕಿದೆ.

## ಹೃದಯ ಸ್ಪಂದನದ ಮೂಲ – ಸೂಕ್ಷ್ಮಾಂಡ ಸೃಷ್ಟಿ ಲೀಲ

'ಸಾವಿತ್ರಿ' ಒಂದು ಯೋಗದ ಮೂಲಕವಾಗಿ ದೃಷ್ಟಗೊಂಡ ಅತ್ಯಪರೂಪದ ಕಾಣ್ಕೆ. ಅದರಲ್ಲೂ ಪ್ರಥಮ ದಳ(ಬುಕ್ 1)ವಂತೂ, ಯೋಗದ ತುರೀಯಾವಸ್ಥೆಯಲ್ಲಿ ತಾನೇ ತಾನಾಗಿ ಅಭಿವ್ಯಕ್ತಗೊಂಡಿದೆ. ಇದು ಅನುಭಾವ ಕಾವ್ಯದ ಪದ್ಧತಿಯೂ ಹೌದು. ಅನುಭಾವದ ಅದಕ್ಕೂ ಮಿಗಿಲಾಗಿ ಅನುಭೂತಿಯ

ಹಂತದಲ್ಲಿ, ಯೋಗಿಯಾದವನು ತಾನು "ಕಂಡ" (ದರ್ಶಿಸಿದ) ಸಂಗತಿಗಳನ್ನು, ಆಗ ಪ್ರಚಲಿತದಲ್ಲಿದ್ದ ಭಾಷಾ ವ್ಯವಸ್ಥೆಯಲ್ಲಿಯೇ ರೂಪಿಸುವದು ನಿಸರ್ಗ ಸಹಜ. ಆದರೆ ಅಲ್ಲಿ ರೂಪಿಸಲ್ಪಟ್ಟಿರುವ 'ಸಂಕೇತ'ಗಳು ಮಾತ್ರ ಹಲವು ಆಯಾಮಗಳನ್ನು ಒಳಗೊಂಡಿರುತ್ತವೆ.

ಮಂತ್ರವೆನ್ನುವದು ಪ್ರಕೃತಿಯ ವಾಣಿ. ಅದು ಮಾನವನ ಉಪಯೋಗಕ್ಕೆ ಬರುವದೇ ಅದರ ಪ್ರಥಮ ಅನುವಾದ. ಭಗವದ್–ಗೀತೆಯು ಮಂತ್ರವೇ. ಆದರೂ ಆಯಾ ಕಾಲದ ಅವಶ್ಯಕತೆಗಾಗಿ ಭಾಷ್ಯದ ರೂಪದಲ್ಲಿ ತನ್ನ ಆಯಾಮಗಳನ್ನು ವಿಷದ ಪಡಿಸುತ್ತಾ ಬಂದಿದೆ. ಹೀಗಾಗಿ ಆದಿಶಂಕರರಿಂದ ಪ್ರಾರಂಭಗೊಂಡ "ಭಾಷ್ಯಗಳು" (ಅನುವಾದಗಳು) ಈಗಲೂ ಮುಂದುವರೆದಿವೆ. ಈ ಹಿನ್ನೆಲೆಯಲ್ಲಿ ಶ್ರೀ ಅರವಿಂದರ 'ಸಾವಿತ್ರಿ'ಯನ್ನೂ ಗಮನಿಸಬೇಕಿದೆ. ಏಕೆಂದರೆ "ಸಾವಿತ್ರಿ ಉಪನಿಷತ್" ಎನ್ನುವ ಉಪನಿಷತ್ ಇದೆ.

ಈ ಅಧ್ಯಯನದ 'ಮಿತಿ'ಯ ಒಳಗೆ, ಪ್ರಥಮ ದಳ(ಬುಕ್ 1)ದಲ್ಲಿ ಇರುವ ಕೆಲವು ಪಾರಿಭಾಷಿಕ ಶಬ್ದಗಳನ್ನು ಇಲ್ಲಿ ವಿವೇಚಿಸಲಾಗುತ್ತಿದೆ.

ಮಾನವನ ದೇಹದಲ್ಲಿ ಪ್ರಪ್ರಥಮವಾಗಿ ರೂಪಣೆಗೊಳ್ಳುವ ಅಂಗವೆಂದರೆ ಹೃದಯ. ಇದು ಸಸ್ತನಿಗಳ ದೇಹದ ವಿಕಸನಕ್ಕೆ ನಾಂದಿ ಹಾಡುತ್ತದೆ. ಹೀಗಾಗಿ ಇದರ ಪ್ರಪ್ರಥಮ ಮಿಡಿತವೇ ದೇಹ ರಚನೆಯ ಮೂಲ ಕ್ರಿಯೆಯಾಗಿದೆ. ಹೃದಯದ ಮೂಲಕವೇ ರಕ್ತ ಪೂರಣೆಯಾಗುತ್ತಿರುವ ವಿಷಯ ಇಂದು ಎಲ್ಲರಿಗೂ ತಿಳಿದ ಸಂಗತಿ. ಆದರೆ ಇದೇ ಹೃದಯವನ್ನು "ಭಾವನೆಗಳ ತೊಟ್ಟಿಲು" ಎಂದು ಪರಾ–ಭೌತಿಕ (ಆಧ್ಯಾತ್ಮ) ಶಾಸ್ತ್ರವು ಊಹಿಸುತ್ತದೆ. ಮತ್ತೊಂದು ಸೋಜಿಗದ ಸಂಗತಿ ಎಂದರೆ, ಹೃದಯದ 2/3 ಭಾಗವು ಈಗಲೂ ರಕ್ತ ಪೂರಣೆಯ ಕ್ರಿಯೆಯಲ್ಲಿ ಭಾಗವಹಿಸುತ್ತಿಲ್ಲ. ಇದೇಕೆ ಹೀಗೆ ಎನ್ನುವದೂ ಇನ್ನೂ ಸಂಶೋಧನೆಯನ್ನು ಬಯಸುತ್ತಿದೆ. ಆದರೆ ಈ 2/3 ಭಾಗವು ತನ್ನಲ್ಲಿಗೆ ಬಂದ ರಕ್ತಕ್ಕೆ ಅವಶ್ಯವಿದ್ದ ಶಾಖವನ್ನು ಕೊಟ್ಟು, ರಕ್ತವನ್ನು ಪರಿಶುದ್ಧಗೊಳಿಸಿ ಮುಂದಕ್ಕೆ ಕಳಿಸುತ್ತದೆ. ಈ ಹೃದ್ಗುಹೆಯಲ್ಲಿ ಉತ್ಪನ್ನವಾಗುವ ಉಷ್ಣವು (ಅಗ್ನಿ) ಇಂತಹ ಪರಿಷ್ಕರಣಕ್ಕೆ ಸಹಕರಿಸುತ್ತದೆ. ಅಂದರೆ ಇದೇ ಸಂರಚನೆಯನ್ನು ನಾವು ವಿಶ್ವರಚನೆಯ ಪ್ರಕ್ರಿಯೆಗೆ ಹೋಲಿಸಿದಲ್ಲಿ – ಅದೂ ಲಭ್ಯವಿರುವ ದತ್ತಾಂಶಗಳ ಹಿನ್ನೆಲೆಯಲ್ಲಿ – ಈ ದೇಹವೇ ಒಂದು ವಿಶ್ವವಾಗಿ, ಅಲ್ಲಿ ಹೃದಯವೇ ನಾಭಿ ಕೇಂದ್ರವಾಗಿ, ಶಕ್ತಿ–ಬಲ–ಬೆಳಕನ್ನು ಕೊಡುತ್ತಿರುವ ಸೂರ್ಯನಂತೆಯೇ ಕಾರ್ಯ ನಿರ್ವಹಿಸುತ್ತಿದೆ.

## ಹೃದಯ ಮಿಡಿತದ ಮೂಲ

ವೈದ್ಯಕೀಯ ಶಾಸ್ತ್ರದಲ್ಲಿ ಮಾನವನ ದೇಹವನ್ನು ಒಂದು ಸುಸಜ್ಜಿತ ಯಂತ್ರವೆಂದೇ ಪರಿಗಣಿಸಿ ಅಭ್ಯಸಿಸಲಾಗುತ್ತಿದೆ. ಸದ್ಯ ಸಾಧ್ಯವಾಗುತ್ತಿರುವ ಎಲ್ಲ ಸಾಧನೆಗಳ ಮತ್ತು ಚಟುವಟಿಕೆಗಳಿಗಿಂತ ಇನ್ನೂ ಇನ್ನೂ ಅಪಾರ ಸಾಧ್ಯತೆಗಳನ್ನು ನಡೆಸಲು ಶಕ್ಯವಿರುವ ಅಪರೂಪದ ಯಂತ್ರದಂತೆಯೇ (ರೋಬೋಟ್) ಈ ದೇಹವನ್ನು ಗುರುತಿಸಲಾಗುತ್ತಿದೆ. ಭೂಮಿಯ ಮೇಲಿನ ಯಾವುದೇ ಯಂತ್ರವೂ ಕಾರ್ಯ ನಿರ್ವಹಿಸುತ್ತಿರುವಾಗ ಅದು ಭೂಮಿಯ ಗುರುತ್ವಾಕರ್ಷಣೆಯ ನಿಯಮದಂತೆಯೇ – ನ್ಯೂಟನ್ನನ ನಿಯಮದಂತೆಯೇ – ಕಾರ್ಯ ನಿರ್ವಹಿಸುತ್ತದೆ. ಕ್ರಿಯೆಗೆ ತಕ್ಕ ಪ್ರತಿಕ್ರಿಯಯೇ ಈ ನಿಯಮವಾಗಿದೆ. ಇದನ್ನೇ ಮತ್ತೊಂದು ರೂಪದಲ್ಲಿ ಹೇಳುವದಾದಲ್ಲಿ, ಬಾಹ್ಯದ ಶಕ್ತಿಗಳ ಮೂಲಕ ಉದ್ದೀಪನೆಗೊಳಿಸಿ ನಿರ್ಮಿಸಲ್ಪಟ್ಟ ಯಂತ್ರವೊಂದು ಯಾವುದೇ ಕಾರ್ಯವನ್ನೂ ನಿರ್ವಹಿಸಬಲ್ಲುದು. ಹೀಗಾಗಿ, ಇಲ್ಲಿ ದತ್ತಗೊಳಿಸಿರುವ ಬಾಹ್ಯಶಕ್ತಿ/ಬಲ ಮತ್ತು ಸಹಕಾರದೊಡನೆ ಆ ಯಂತ್ರದಿಂದ ನಿಗದಿಗೊಳಿಸಲ್ಪಟ್ಟ ಫಲಿತಾಂಶವನ್ನು–ಕ್ರಿಯೆಯನ್ನು ಪಡೆಯಬಹುದಾಗಿದೆ.

ಇದಕ್ಕೆ ವಿಪರ್ಯಾಯವಾಗಿ, ಬಾಹ್ಯ ಶಕ್ತಿಗಳ ಯಾವುದೆ ಉದ್ದೀಪನೆ ಇಲ್ಲದೇ, ನಿಸರ್ಗ ಸಹಜವಾಗಿ (stimulous de novo) ಈ ಜೈವಿಕ ಯಂತ್ರವಾಗಿರುವ ದೇಹವು ಕಾರ್ಯ ನಿರ್ವಹಿಸುತ್ತದೆ. ಹೀಗಾಗಿ ಭೂಮಿಯ ಮೇಲಿರುವ – ಅದರಲ್ಲೂ ಪ್ರಾಣಿ ಪ್ರಪಂಚದ ಸದಸ್ಯರೆಲ್ಲರೂ – ಎಲ್ಲರೂ ನಿಸರ್ಗ ಸಹಜವಾದ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. ಇದಕ್ಕೆ ದೊರೆಯುವ ಮೂಲ ಶಕ್ತಿಯು ಹೃದಯದ ಮಿಡಿತದ ಮೂಲಕವೇ ದೊರೆಯುತ್ತಿದೆ. ಈ ಹೃದಯದ ಮಿಡಿತವು ದೇಹದಲ್ಲಿಯೇ ಅಂತರ್ಗತವಾಗಿದ್ದರೂ ಸಹಿತ, ನೈಸರ್ಗಿಕವಾಗಿ ತಂತಾನೆ ಪ್ರಾರಂಭಗೊಂಡಿರುತ್ತದೆ. ಆಶ್ಚರ್ಯದ ಮಾತೆಂದರೆ ಸಸ್ತನಿಗಳಲ್ಲಿ, ಪ್ರಪ್ರಥಮವಾಗಿ ಜೈವಿಕ ಕ್ರಿಯೆ ಪ್ರಾರಂಭವಾಗುವದೇ ಈ ಹೃದಯದ ಮಿಡಿತವು ಉದಿಸುವದರ ಮೂಲಕ. ಇದು ವಿಶ್ವ ಸತ್ಯ. ಹೃದಯದಲ್ಲಿನ ಕೋಶಗಳ (ಪೇಸ್–ಮೇಕರ್–ಸೆಲ್ಸ) ಮೂಲಕವೇ ಈ ಕ್ರಿಯೆ ಪ್ರಾರಂಭಗೊಂಡಿರುತ್ತದೆ. ಇದು ಪುರುಷನ ವೀರ್ಯಾಣು ಮತ್ತು ಸ್ತ್ರೀಯ ಡಿಂಬಾಣುಗಳು ನಿಷೇಚನೆಗೊಂಡ ಇಪ್ಪತ್ನಾಲ್ಕು ತಾಸಿನಲ್ಲಿಯೇ ಈ ಹೃದಯದ ಸಂರಚನೆಗೆ ಅತ್ಯಾವಶ್ಯವಿರುವ ಅಂಶಗಳು ನಿರ್ಮಿತಿಗೊಂಡು, ಮಿಡಿತವನ್ನು ಪ್ರಾರಂಭಿಸುತ್ತವೆ. ಇದು ಅತ್ಯಂತ ಕ್ಷೀಣ ಧ್ವನಿಯಲ್ಲಿ ಇದ್ದರೂ, ಇಂದು ಮಾನವನು ಸಂಶೋಧಿಸಿದ ಯಂತ್ರಗಳ ಸಹಾಯದಿಂದ ಆ

ಮಿಡಿತದ ಧ್ವನಿಯನ್ನು ಆಲಿಸಬಹುದಾಗಿದೆ. ಹೀಗಾಗಿ ಮಾನವನಲ್ಲಿ (ಸಸ್ತನಿಗಳಲ್ಲಿ) ನಿಷೇಚನೆಗೊಂಡ ಯುಗ್ಮಕದಲ್ಲಿ ಮಿಡಿತಕ್ಕೆ ಪ್ರಪ್ರಥಮ ಮುಹೂರ್ತ ನಿಗದಿಯಾಗಿರುತ್ತದೆ. ಇದನ್ನೇ ಶ್ರೀ ಅರವಿಂದರು ತಮ್ಮ ಸಾವಿತ್ರಿಯಲ್ಲಿ ವಿವರವಾಗಿ ಚಿತ್ರಿಸಿದ್ದಾರೆ. ಶ್ರೀ ಮಂದರ್ಕೆ ಮಾಧವ ಪೈ ಅವರ ಅನುವಾದವು ಸಹಿತ ಅದನ್ನು ಸಮರ್ಥವಾಗಿಯೇ ಕನ್ನಡಕ್ಕೆ ಅನುಸ್ಪಂದಿಸಿದೆ (ಅತಿದೂರಮಪರಿಚಿತಮುಮಾಗಿರ್ದ ಗುಪ್ತ–ಅಪೂರ್ವ ವಸ್ತಗಳುಮುಂ/ಆಗಿರ್ದುವಾತ್ಮದ ಸ್ಪರ್ಶ– ಬೋಧದಲಿ ಹೃದಯ ಸಂಪರ್ಕ ನಿಕಟಂ,)

**– ಸಾವಿತ್ರಿ; ಪರ್ವ 2 ಪುಟ 96**

ಮೃತ್ಯುವಿನ ಚಕ್ರ ಗತಿ ತಡೆಯಲೆಂದು ಉದಿಸಿ ಈ ಬೃಹತ್–ತತ್ವ
ಅಲ್ಲವಿತುಕೊಂಡ ದ್ವಾರಗಳ ಮೇಲೆ, ಅದೃಶ್ಯದ ಶಬ್ದ–ಸತ್ವ
ಆ ದಿವ್ಯ–ಪ್ರಭೆಯ ಸ್ಪರ್ಶ ತಾನಾಗೆ, ಪ್ರಖ್ಯಾತ ಅವಳ ಬಲವು
ಸುಪ್ತಿಯಿಂದೆದ್ದು ಜಾಗೃತಿಗೆ ಸಂದು, ಅವಳೆದೆಯ ಗುಹೆಯಲಿಂದು
ಘೋರಾತಿಘೋರ ಆ ದಂಡು–ಚಲನೆ, ಈಕ್ಷಣೆಗೆ ಯಾರು ಇರದೆ
ಉಗ್ರಾತಿ–ಉಗ್ರವದರ ಪಥ ಬಂಧಿಸುವ ಚಿತ್ತ ಬದಲದಂತೆ
ವಿಶ್ವದಾ ತಂತ್ರಗಳನಂದು ಅವಳು ಮುಖಾಮುಖಿಯಲ್ಲಿ ಕಂಡು
ಚಲಿಪ ಚಕ್ರಗಳ ಪಥದಲಿಂದೆದೆಯು ದೃಢಚಿತ್ತವಾಗಿ ನಿಂದು ॥82॥

**– ಸಾವಿತ್ರಿ; ದಳ 1 ರೇಣು 2 ಪುಟ 20**

ಎನ್ನುವ ಸಾಲುಗಳು ಈ ಎಲ್ಲ ವಿಷಯಗಳನ್ನು ವಿವರ ವಿವರವಾಗಿ ಒದಗಿಸುತ್ತಿದೆ.

* **ಸುರಕ್ಷಾ ವಲಯ (ಗೋಲ್ಡೀ ಝೋನ್):**

ಇನ್ನು ಇದು ಭೂವಲಯಕ್ಕೆ – ಸೌರವ್ಯೂಹದಲ್ಲಿರುವ ಸುರಕ್ಷಾ ವಲಯಕ್ಕೆ (ಗೋಲ್ಡೀ ಝೋನ್) ಆಗಮಿಸುವ ಪರಿಯನ್ನು ಮಂತ್ರ ಸದೃಶವಾಗಿಯೇ 'ಸೂರ್ಯನೆದೆಯಿಂದ ಶೋಧನೆಗೆ ಬಂದ ಬೇಹುಗಾರನಂತೆ' ಎಂದೆ ಪ್ರತಿಮಾ ವಿಧಾನದಲ್ಲಿ ತಿಳಿಸಿದ್ದಾರೆ. ಅದು ಬಂದಿದ್ದಾದರೂ ಎಲ್ಲಿಂದ ಎಂದು ನೋಡಿದರೆ, 'ಸಾವಿರದ (ಎನ್ಡಲೆಸ್) ಎಡೆಯ ಬೆಳಕಿಂದ ಬಂದ ಸುದ್ದಿ' ಇದು. ವಿಶ್ವ ಸೃಷ್ಟಿಗದು ಕಂಪಿಸುತ್ತದೆ; ಸ್ಪಂದಗೊಳ್ಳುತ್ತದೆ. ಈ ರೀತಿಯಲ್ಲಿ ಅವತರಣಗೊಂಡು (ಅಭಿಗಮಿಸಿ) ಸಿದ್ಧಿಯನ್ನು ಪಡೆದುಕೊಳ್ಳುತ್ತದೆ [1–1–ಪುಟ 3]

ಇನ್ನು ಭಾಷಾ ವಿಷಯದಲ್ಲಿ ನೋಡಿದರೆ, 'ಗಗನದೆದೆಯಲ್ಲಿ ಉದಿತ ದಿವ್ಯಲಿಪಿ ಅದ್ಭುತದ ಪ್ರತಿಭೆಯಂದು' ಎನ್ನುವ ಸಾಲು ತನ್ನ ತಾನರಿಯಲೆಂದೇ ರೂಹುಗೊಂಡಿತ್ತು. ತನ್ನಿರುವ ಕಂಡುಕೊಂಡು ಎನ್ನುವ ಸಾಲು [1–1–ಪುಟ 4] 'ಹೃತ್ಕಮಲ ಅರಳಿ ದರ್ಶನವ ತೋರಿತಾ ಕ್ಷಣದಿ ದಿವ್ಯ ಬೆಳಗು' ಆಗಿದೆ.

ಸಗುಣ ಬ್ರಹ್ಮನ ಸ್ವರೂಪದಲ್ಲಿ ಅನುಷ್ಠಾನ ಪರಂಪರೆಯ ವಿಧಾನದಲ್ಲಿ ನಿಮ್ಮ ಅಭಿಪ್ರಾಯ ಸರಿ. ಆದರೆ ಅದೇ ಸಮಯಕ್ಕೆ ಇಲ್ಲಿ ನಿರೂಪಿತವಾಗಿರುವ ನಿರ್ಗುಣ ಬ್ರಹ್ಮದ ಮಂತ್ರ ಸ್ವರೂಪದ ವಿಷಯಗಳನ್ನು ಅನುಸಂಧಾನಿಸುವ ಒಂದು ಪರಂಪರೆಯೂ ಇದೆ. ಸಾವಿತ್ರಿಯನ್ನು 'ಮಂತ್ರಕಾವ್ಯ'ವೆಂದು ನಾನು ಅಧ್ಯಯನ ಮಾಡುತ್ತಿದ್ದೇನೆ. ಗೋಕರ್ಣದ ಮಹರ್ಷಿ ದೈವರಾತರು ಹೇಗೆ 'ದೃಷ್ಟಾರ ಹಂತದಲ್ಲಿ' ನವೀನ ವೇದವನ್ನು ನೀಡಿದ್ದಾರೆಯೋ, ಅದೇ ರೀತಿಯಲ್ಲಿ ಶ್ರೀ ಅರವಿಂದರೂ (ಇಂಗ್ಲೀಷ ಭಾಷೆಯಲ್ಲಿ) ವೇದವನ್ನೇ ನೀಡಿದ್ದಾರೆ. ಆರೋಹಣಾ ಕ್ರಮದ ಸಂಗತಿಗಳು ನೂತನವಾಗಿವೆ. ಅವುಗಳ ಬಗೆಗೆ ನಾವಿನ್ನೂ ಬಲು ದೀರ್ಘವಾಗಿರುವ ಪಯಣ ಮಾಡಬೇಕಾಗಿದೆ.

ಸಾವಿತ್ರಿ ಬ್ಲಾಗ್ ಇನ್ನೂ ಪೂರ್ಣವಾಗಿಲ್ಲ. ಇದರ ಸಲುವಾಗಿಯೇ ಒಂದು 'ಸಂವಾದ'ದ ಯೋಚನೆಯಲ್ಲಿದ್ದೇವೆ. ಅಲ್ಲಿ ಇದರ ಅಂತಿಮ ಸ್ವರೂಪ ನಿರ್ಧರಿಸಿ, ನಿರ್ಣಯಿಸಬಹುದು. ನಾನು ನನ್ನ 'ಅಭಿಪ್ರಾಯವೇ ಸರಿ' ಎಂದು ಎಂದಿಗೂ ಹೇಳಿಲ್ಲ; ಹೇಳುವದೂ ಇಲ್ಲ. ಒಂದು ವೇಳೆ 'ಮಾಹೇಶ್ವರ ಯೋಗ' ಸೂಕ್ತವಲ್ಲವಾದರೆ, ನಿಮ್ಮ ಅಭಿಪ್ರಾಯದಲ್ಲಿ ಏನಿರಬೇಕು ಎಂದು ತಿಳಿಸಿದಲ್ಲಿ ಓದುಗರಿಗೆ ಅನುಕೂಲ.

ನಾನು ಮೊದಲೇ ಬರೆದಿರುವ ಹಾಗೆ, ನನ್ನ ಅಧ್ಯಯನದ ವಿಧಾನ 'ಆವಿಷ್ಕಾರ ಸ್ವರೂಪ'ದ್ದು; ಇದ್ದುದನ್ನು ಇದ್ದಂತೆಯೇ ತನ್ಮಯತೆಯಲ್ಲಿ ಸ್ವೀಕರಿಸುವ ಜೊತೆಜೊತೆಗೆ ಅದರ ವಿಕಸನದ ಕುರಿತೂ ಅಧ್ಯಯನ ಮಾಡುವದು ನನ್ನ ಪ್ರಯತ್ನ. ತನ್ಮಯತೆಯ ಶರಣಾಗತಿಯು ವ್ಯಕ್ತಿತ್ವ ವಿಕಾಸಕ್ಕೆ ನವೀನ ಆಯಾಮ ಕೊಡುತ್ತದೆಯೋ ಅಥವಾ ಅವನನ್ನು 'ಮುಕ್ತತ್ವದ ಹಂತಕ್ಕೆ' ಒಯ್ಯುತ್ತದೆಯೋ ಎನ್ನುವದು ಜಿಜ್ಞಾಸೆಯಾಗಿದೆ.

# ‘ಮಂತ್ರ’; ಒಂದು ಸೈದ್ಧಾಂತಿಕ ಜಿಜ್ಞಾಸೆ

**– ಪುಟ್ಟು ಕುಲಕರ್ಣಿ**

An eye awake in voiceless heights of trance

**Savitri; 1-3 Page 39**

ಶೂನ್ಯ–ಸೂಕ್ಷ್ಮ–ಸಂವಿತ್ ಹಂತದಾ ಊರ್ಧ್ವ ತಾಣದಲ್ಲಿ
ತನ್ಮಗ್ನದೈಕ್ಯ ಸ್ಥಿತಿಯಲ್ಲಿ ಚಕ್ಷು ಜಾಗ್ರತದಿ ಉದಿತವಲ್ಲಿ

**ಸಾವಿತ್ರಿ; ದಳ 1 ರೇಣು 3 ಪುಟ 39**

ಮಂತ್ರದ ಕುರಿತು ಶ್ರೀ ಅರವಿಂದರು ರೂಪಿಸಿದ ವಿವರಗಳನ್ನು ಸಮಗ್ರೀಕರಿಸಿ ಶ್ರೀ ಎಂ.ಪಿ. ಪಂಡಿತರು ಅದಕ್ಕೊಂದು ಸೂತ್ರರೂಪದ ಸಂಕ್ಷಿಪ್ತ ವಿವರಗಳನ್ನು ತಮ್ಮ ‘ವೇದದ ಪ್ರತಿಮಾ ತತ್ತ್ವ’(ವೇದಿಕ್ ಸಿಂಬಾಲಿಜಮ್)ದಲ್ಲಿ ಕೊಟ್ಟಿದ್ದಾರೆ.

ಅದರ ಹಿನ್ನೆಲೆಯಲ್ಲಿ, ‘ಮಂತ್ರ’ದ ಸಿದ್ಧಾಂತವೆಂದರೆ, ಇದು ಅತ್ಯಂತ ರಹಸ್ಯಮಯವಾಗಿಯೇ ಅಂತರಾಳದಾಂತರ್ಯದಲ್ಲಿಯೇ ಇರುವ ನಮ್ಮದೇ ಚೈತನ್ಯದಿಂದ ಹೊರಹೊಮ್ಮಿದ್ದು, ಅದು ಮನೋಚೇತನಕ್ಕಿಂತಲೂ ಆಳವಾದ ಚೇತನ ಮೂಲದಿಂದಲೇ ಅಂಕುರಗೊಂಡಿರುತ್ತದೆ. ಮತ್ತೆ ಇದು ಹೃದಯದಲ್ಲಿ ಸಾರೂಪ್ಯಗೊಂಡಿರುತ್ತದೆ. ಹಾಗೆಂದು ಇದು ಬುದ್ಧಿಯ ಮೂಲಕವಾಗಿ ಸಂರಚನೆಗೊಂಡಿರುವದಿಲ್ಲ. ಮನೋಪಾತಳಿಯಲ್ಲಿಯೇ ಇದ್ದರೂ, ಅದು ಮತ್ತೆ ಜಾಗ್ರತಿಗೊಂಡ ಮನೋಚೇತನದ ಮೂಲಕವೇ ರೂಪುಗೊಂಡಿರುತ್ತದೆ; ಕೇಂದ್ರೀಕೃತವಾಗಿರುತ್ತದೆ. ತದನಂತರದಲ್ಲಿ ಅದು ಅಷ್ಟೇ ಮೌನದಲ್ಲಿಯೇ ಅಥವಾ ಪ್ರಶಾಂತವಾಗಿಯೋ ಅಥವಾ ಶಾಬ್ದಿಕ ಸ್ವರೂಪದಲ್ಲಿಯೋ ಹೊರಹೊಮ್ಮಲ್ಪಡುತ್ತದೆ. ಇಲ್ಲಿ ಘನಶಾಂತ ಮೌನದ ಸ್ತರವು (ಜಗತ್ತು) ಶಬ್ದದಲ್ಲಿ ಹೊರಹೊಮ್ಮುವ ಹಂತಕ್ಕಿಂತಲೂ ತುಂಬ ಸಮರ್ಥಪೂರ್ಣವಾಗಿಯೇ ಶಕ್ತಿಯುತವಾಗಿರುತ್ತದೆ. ಅದರಲ್ಲೂ ಇದು ಸೃಷ್ಟಿಯ ಕ್ರಿಯೆಗಳಿಗಾಗಿ ಅತ್ಯಂತ ಮಹತ್ವದ ಅಂಶವೂ ಆಗಿರುತ್ತದೆ.

ಹಾಗೆಂದು ಕೇವಲ ‘ಮಂತ್ರವೇ’ ನಮ್ಮಲ್ಲಿ ನವೀನ ಪ್ರತ್ಯಕ್–ವೃತ್ತಗಳ (ವಸ್ತುನಿಷ್ಠ) ಹಂತಗಳನ್ನು ಸೃಷ್ಟಿಸುವದಿಲ್ಲ. ನಮ್ಮ ಭೌತಿಕ ಅಸ್ತಿತ್ವವನ್ನು ಪರಿವರ್ತಗೊಳಿಸುವದಿಲ್ಲ. ನಾವು ಪ್ರಕ್ರಿಯೆಗೆ ಒಳಪಡಿಸದೇ ಇದ್ದಲ್ಲಿ, ನಮ್ಮ ಜ್ಞಾನ

ಮತ್ತು ಜ್ಞಾನವೃತ್ತಿಗಳನ್ನು ಸಹಿತ ಆವಿಷ್ಕಾರಗೊಳಿಸಲು ಸಾಧ್ಯವಿಲ್ಲ. ಅದೇ ರೀತಿಯಲ್ಲಿ ಅನ್ಯರ ಮನೋಭೂಮಿಕೆಗಳಲ್ಲೂ ಪರಿಣಾಮಗಳನ್ನು ರೂಪಿಸಲು ಸಾಧ್ಯವಾಗುವದಿಲ್ಲ. ಆದರೆ ಅವುಗಳನ್ನು ಬಳಸಿಕೊಳ್ಳುವವನು ಕೇವಲ ಸ್ಪಂದನಗಳನ್ನು ಮಾತ್ರವೇ, ಮನೋಸ್ತರದಲ್ಲಿ ಹಾಗೂ ಪ್ರಾಣಿಕ–ವ್ಯವಸ್ಥೆಯಲ್ಲಿ –ಅವುಗಳ ಪರಿಣಾಮದ ಫಲಿತಾಂಶದಂತೆ ರೂಪುಗೊಳಿಸಬಹುದು. ಅದೂ ಕ್ರಿಯೆಗಳಲ್ಲಿ (ಕರ್ಮಗಳಲ್ಲಿ) ಮತ್ತೂ ಭೌತಿಕ ಸ್ತರದಲ್ಲಿ ಈ ಜಡದ (ಮಟೀರಿಯಲ್) ಅಥವಾ ಲೌಕಿಕದ ರೂಪಗಳನ್ನು ಮಾತ್ರವೇ ಉತ್ಪತ್ತಿ ಮಾಡಲು ಸಾಧ್ಯವಾಗುತ್ತದೆ.

ಇನ್ನು ಅನುಭಾವ ಅಥವಾ ಅತೀಂದ್ರಿಯದ ಹಂತದಲ್ಲಿ – ಅದರಲ್ಲು ಭಾರತೀಯ ಯೋಗ ಶಾಸ್ತ್ರದಲ್ಲಿ ಮಾತ್ರ ಈಗಲೂ ಆಂಶಿಕವಾಗಿ ಉಳಿದುಕೊಂಡು ಬಂದಿರುವ – ಈ ಅನುಭೂತಿಯ ಹಂತದಲ್ಲಿ, ಈ 'ಶಬ್ದ'ವು (ಧ್ವನಿಯು) ಒಂದು 'ಶಕ್ತಿ'ಯಾಗಿದೆ. ಅಂದರೆ ಧ್ವನಿಯು ಸೃಷ್ಟಿಸಬಲ್ಲುದು. ಸೃಷ್ಟಿಗೊಂಡಿರುವದೆಲ್ಲವೂ ಅಭಿವ್ಯಕ್ತಿಯೇ ಆಗಿರುತ್ತವೆ. ಅಸ್ತಿತ್ವದಲ್ಲಿ ಇರುವ ಎಲ್ಲವೂ ಈ "ಅನಂತಾನಂತದ ರಹಸ್ಯ ಕೋಶ"ದಲ್ಲಿ ಗುಹ್ಯವಾಗಿದ್ದುದೇ ಆಗಿದೆ. ಅದನ್ನೇ 'ಗುಹಾಹಿತಮ್' ಎಂದು ಹೇಳುತ್ತಾರೆ. ಇದನ್ನು ಕ್ರಿಯಾಪ್ರವೃತ್ತ ಚೇತನದಿಂದ ಮಾತ್ರ ಈಗ ತೋರುತ್ತಿರುವ (ಕಾಣುತ್ತಿರುವ) ರೂಪಗಳಲ್ಲಿ ತರಲು ಸಾಧ್ಯವಾಗುತ್ತದೆ.

ಮತ್ತೆ ಕೆಲವು ವೈದಿಕ ಚಿಂತನಗಳ ಪ್ರಕಾರವಾಗಿ, ಇವೆಲ್ಲ ಜಗತ್ತು (ಲೋಕಗಳು) 'ನಾದಶಕ್ತಿ'ಯಿಂದಲೇ ಅಂದರೆ 'ಧ್ವನಿ'ಯ ದೇವತೆಯಿಂದಲೇ ಸೃಷ್ಟಿಸಲ್ಪಟ್ಟಿವೆ. ಅದೂ "ಈಥರ್" (ಸಂಸ್ಕೃತದಲ್ಲಿ ಇದಕ್ಕೆ ತಾರಾ ಎಂದು ಹೆಸರಿದೆ) ವಲಯದ ಸ್ಪಂದನದಿಂದಲೇ ಈ ರೂಪಾಂತರಣವು ಪ್ರಾರಂಭಗೊಂಡಿದೆ. ವೇದದಲ್ಲಿಯೂ ಸಹಿತ ಇದೇ ರೀತಿಯಲ್ಲಿಯೇ ಅಭಿವ್ಯಕ್ತಗೊಂಡ ಪವಿತ್ರ ಮಂತ್ರಗಳ ಕಾವ್ಯಾತ್ಮಕವಾದ ಮಾನಕಗಳಿವೆ. ಅವುಗಳನ್ನು ಅನುಷ್ಟುಪ್–ತ್ರಿಷ್ಟುಪ್–ಜಗತೀ–ಗಾಯತ್ರೀ ಎಂದು ಸಂಕೇತಾರ್ಥದಲ್ಲಿ ಅಧ್ಯಯನ ಮಾಡಲಾಗುತ್ತಿದೆ. ಈ ನಾದಮಯತೆಯಿಂದಲೇ (ಧ್ವನಿಪೂರ್ಣತೆಯಿಂದಲೇ) ಈ ವೈಶ್ವಿಕ ಚಲನೆಯು ನಿರಂತರವಾಗಿರುವದನ್ನು ಹಾಗೂ ವಸ್ತು–ವಿಷಯಗಳು ಅಚ್ಚೊತ್ತಲ್ಪಡುತ್ತಿರುವದನ್ನು ಸಂಕೇತಿಸಲಾಗಿದೆ.

ಈ ರೀತಿಯ "ಅಭಿವ್ಯಕ್ತಿಯ ವಿಶೇಷತೆಯಿಂದಲೇ" ನಾವು ಸೃಷ್ಟಿಸಬಹುದಾಗಿದೆ. ಅದರಂತೆಯೇ ಮಾನವರು ತಮ್ಮ ಸಲುವಾಗಿಯೇ "ದೇವರನ್ನೂ ಸೃಷ್ಟಿಸಿಕೊಂಡು" – ಅದೂ "ಮಂತ್ರದ" ಮೂಲಕವೇ ಸೃಷ್ಟಿಸಿಕೊಂಡಿದ್ದಾರೆ. ಅದರ ಮೂಲಕವೇ

ತಮ್ಮದೇ "ವಾಕ್" (ಧ್ವನಿ/ನಾದ/ಶಬ್ದ) ಮೂಲಕವೇ ಚೈತನ್ಯವನ್ನೂ ಹಾಗೂ ಅದಕ್ಕೊಂದು ಸ್ವರೂಪವನ್ನು ಸೃಷ್ಟಿಸಿಕೊಂಡಿದ್ದಾರೆ. ಈ ರೀತಿಯಲ್ಲಿ ಸೃಷ್ಟಿಸಿಕೊಂಡಿರುವ "ಧ್ವನಿ"(ನಾದ)ವನ್ನು ಸಹಿತ ತಮ್ಮದೇ ಆದ ಅಂಗವೆಂದು (ಅಂಶವೆಂದು) ಅರಿತು, ಅದು ಕೇವಲ ಅಂತರಂಗಿಕವಾಗಿ ಮಾತ್ರ ಪರಿಣಾಮಕಾರಿಯಾಗಿರುವದಷ್ಟೇ ಅಲ್ಲ, ಲೌಕಿಕ ಬದುಕಿನಲ್ಲಿಯೂ ಅದನ್ನು "ಶಬ್ದ"ದ ರೂಪದಲ್ಲಿ ಅಳವಡಿಸಿಕೊಂಡರು. ಈ ಮೂಲಕ ಅಭಿವ್ಯಕ್ತಗೊಂಡಿರುವ ಒಂದು ಅಭಿವಚನದಂತೆಯೇ ಸ್ಥಾಪಿಸಿಕೊಳ್ಳಲಾಗಿದೆ. ಇದರಿಂದಾಗಿ, ಈ ಅಭಿವ್ಯಕ್ತಿಯ ಶಕ್ತಿ(ಸತ್ವ)ವಾಗಿ ಈ "ಧ್ವನಿ"ಯನ್ನು (ನಾದವನ್ನು) 'ವಚಸ್' ಎಂದು ಕರೆಯಲಾಗಿದೆ. ಇದು ಪ್ರತಿಜ್ಞಾನದ ಶಕ್ತಿಯಾಗಿ – ಸ್ತೋಮದಂತೆ – ಅನುಸರಿಸಿದ್ದೇವೆ.

ಒಟ್ಟಿನಲ್ಲಿ ಯಾವುದೇ ರೀತಿಯಿಂದಲೂ ಸಹಿತ ಅದನ್ನು "ಮನ್ಮಾ" ಅಥವಾ 'ಮಂತ್ರ'ವೆಂದೂ, ಮನೋಪಾತಳಿಯಲ್ಲಿ ಅಭಿವ್ಯಕ್ತಗೊಂಡ ಚಿಂತನವೆಂದೂ ಮತ್ತೂ ಮುಖ್ಯವಾಗಿ 'ಬ್ರಹ್ಮನ್' ಎಂದು ಹೃದಯದಲ್ಲಿ ಅಥವಾ ಆತ್ಮಿಕವಾಗಿ ಆರಾಧಿಸುತ್ತೇವೆ.

ಹೀಗಾಗಿ "ಸಾವಿತ್ರಿ"ಯನ್ನು ಅಧ್ಯಯನ ಮಾಡುವಲ್ಲಿ ಪ್ರಾರಂಭದ ಹಂತದಲ್ಲಿ "ಶಬ್ದವನ್ನು" ಸಗುಣ ಬ್ರಹ್ಮನಿಗೆ ಅನ್ವಯಿಸಿಕೊಂಡು ತದನಂತರದಲ್ಲಿ – ಅಂದರೆ ಅತಿಮಾನವ ಹಂತದಲ್ಲಿ ಪರಮ–ಆತ್ಮ ಅಥವಾ ನಿರ್ಗುಣ ಬ್ರಹ್ಮ ಇಲ್ಲವೇ ಶ್ರೀ ಅರವಿಂದರು ಹೇಳುತ್ತಿರುವ "ಋತ–ಚೇತನ"ದ ಹಂತದಲ್ಲಿ ಅನ್ವಯಿಸಕೊಳ್ಳಬೇಕಾಗಿದೆ. (ಇನ್ನೂ ಇದೆ)

"ಸಾವಿತ್ರಿ"ಯ ಪ್ರಥಮ ದಳದ ಸಾಲುಗಳು ಸಂಕೇತಿಸುತ್ತಿರುವದು, ನಮಗೆ ಇಲ್ಲಿಯವರೆಗೂ ಅರಿವಿಗೆ ಲಭ್ಯವಾಗುತ್ತಿರುವ 'ಅವಕಾಶ(ಸ್ಪೇಸ್)'ದಲ್ಲಿ ಜೀವವಿರುವ ಏಕೈಕ ಗ್ರಹವೆಂದರೆ ಈ ನಮ್ಮ ಭೂಮಿ. ಈ ಭೂ ವಲಯವನ್ನು ಪ್ರವೇಶಿಸುವ ಮುನ್ನ "ಚೇತನವು" ನಿರಾಕಾರ ರೂಪದಲ್ಲಿ, ನಿಶ್ಶೂನ್ಯದಲ್ಲಿ ನಿರ್ಮಾಯ ಮೌನದಲ್ಲಿಯೇ ಇರುತ್ತದೆ. ಆದರೆ ನಮ್ಮ ಭೂಮಿಗೆ ಇರುವ "ಸುರಕ್ಷಾ ಕವಚ"ವನ್ನು ಪ್ರವೇಶಿಸಿದಾಗ, ಆ ನಿರಾಕಾರತ್ವವು ತಾನೇ ತಾನಾಗಿ ಕಳಚಿ – ರೂಪಾಂತರಕ್ಕೆ ಆಸ್ಪದವಾಗುತ್ತದೆ. ಭೂಮಿಯ ಆಚೆ ಇರುವ/ಇರಬಹುದಾದ 'ಪಂಚಭೂತಗಳ' ಬಗೆಗೆ ನಮಗೆ ಇನ್ನೂ ಜ್ಞಾನ ಲಭ್ಯವಾಗಿಲ್ಲ. ಹೀಗಾಗಿ ನಾವು

ಅದನ್ನು ಶೂನ್ಯವೆಂದು (ಆದರೆ ಪೂರ್ಣವೆಂದು) ಪರಿಭಾವಿಸಿಕೊಂಡೇ ಅಧ್ಯಯನವನ್ನೋ ಆರಾಧನೆಯನ್ನೋ ನಡೆಸುತ್ತೇವೆ.

ಭೂ ವಲಯದಾಚೆ – ಸೂರ್ಯನಿದ್ದರೂ ಸಹಿತ – ಕತ್ತಲೆ ಇರುವದು ವಿಶ್ವದ ರಹಸ್ಯ. ಈ ಕಪ್ಪು(ತಮವೇ) ಮಾನವನ ಪ್ರಜ್ಞಾಸ್ಥಿತಿಯ ಹಂತವೂ ಹೌದು. ಆತ್ಮಗತವಾಗಿರುವ ಅಂದರೆ ಹೃದ್ಗುಹೆಯಲ್ಲಿ ಸೂಕ್ಷ್ಮಾತಿಸೂಕ್ಷ್ಮ ಸ್ವರೂಪದಲ್ಲಿರುವ ಜ್ಯೋತಿಸ್ವರೂಪದ ಚೈತನ್ಯದ ಸುತ್ತಲೂ ಈ "ಜಡದ" ಅಂಧಕಾರ ಕವಿದಿರುವದು ಹಾಗೂ ಅದರಿಂದ ಹೊರಬಂದು (ಪ್ರಕಟಗೊಂಡು) ತನ್ನ ಸ್ವಸ್ವರೂಪವನ್ನೇ ದರ್ಶಿಸಿಕೊಳ್ಳುವದು ಒಂದು ಸಾಧನೆಯಾಗಿದೆ. ಆ ಸಾಧನಾ ಪಥವನ್ನು 'ಸಾವಿತ್ರಿ' ತೋರಿಸುತ್ತಿದೆ.

ಇಲ್ಲಿ ಮಾನವ ಸ್ವರೂಪ, ಚೈತನ್ಯ ಸ್ವರೂಪ ಹಾಗೂ ವೈಶ್ವಿಕ ಆಯಾಮದ ಹಂತಗಳನ್ನು, ಯೋಗದ ಪರಿಭಾಷೆಯಲ್ಲಿ ಅಭಿವ್ಯಕ್ತಗೊಳಿಸಿ 'ಸಾವಿತ್ರಿ' ಮಂತ್ರಕಾವ್ಯವಾಗಿದೆ.

ಸದ್ಯದ 'ಮಾನವನ ವಿಕಾಸ'ದ ಹಂತವನ್ನು 'ಸಾವಿತ್ರಿ'ಯ ಹಿನ್ನಲೆಯಲ್ಲಿ ಅರಿತುಕೊಳ್ಳುವದಕ್ಕೆ, ಶ್ರೀ ಅರವಿಂದರು ಉಲ್ಲೇಖಿಸಿರುವ "ಅಪರೂಪದ ಶಬ್ದಗಳ ಸರ್ವ ಆಯಾಮಗಳನ್ನೂ" ಅರ್ಥೈಸಿಕೊಳ್ಳಲು ಸಹಾಯಕವಾಗುವಂತೆ ಶ್ರೀ ಎಂ.ಪಿ. ಪಂಡಿತರು "ವೇದದ ಸಂಕೇತ–ತತ್ತ್ವ" (ವೇದಿಕ್ ಸಿಂಬಾಲಿಜಮ್) ಎನ್ನುವ ಗ್ರಂಥವೊಂದನ್ನು ರಚಿಸಿದ್ದಾರೆ. ಅದರಲ್ಲಿ ಸದ್ಯದ ಸ್ಥಿತಿಯಲ್ಲಿ 'ಮಾನವ' ಸಾಧಿಸಿರುವ ಸಾಧನೆ ಮತ್ತು ಅವನ ಪ್ರಗತಿಯ ಹಂತದ ಬಗೆಗೆ ನಿಖರವಾದ ಮಾನಕಗಳನ್ನು ನೀಡಿದ್ದಾರೆ. ಜೊತೆಜೊತೆಗೆ ಇನ್ನೂ ಸಾಧಿಸಬೇಕಾಗಿರುವ – ಅಂದರೆ ಬರಲಿರುವ ನಿಕಟ ಭವಿಷ್ಯದಲ್ಲಿ ಖಂಡಿತವಾಗಿಯೂ ಘಟಿಸಲಿರುವ ಸಂಗತಿಯನ್ನು "ಮಾನವ" ಹೇಗೆ ಅನುಭವಿಸಬಲ್ಲ ಎನ್ನುವದನ್ನೂ ತಿಳಿಸಿದ್ದಾರೆ.

**ಮಾನವ:** ವೇದದ ತತ್ತ್ವಶಾಸ್ತ್ರದ ಪ್ರಕಾರ "ಮಾನವ" ಎನ್ನವುದು "ಏಳು ಅಂಶಗಳಿಂದ(ಸಪ್ತಾಂಶಗಳಿಂದ) ಸಂಯೋಜಿತಗೊಂಡಿರುವ ವಿಶಿಷ್ಟ ತತ್ತ್ವವಾಗಿದೆ. ಇವನಲ್ಲಿಯೇ 'ಆತ್ಮ'ವೂ ಸ್ವಯಂ ಇದ್ದು,

**ಅನ್ನ:** ಜಡದ ಘನವಾಗಿದೆ

**ಪ್ರಾಣ:** ವ್ಯಾಪ್ತ ಶಕ್ತಿಯಾಗಿದೆ

**ಮಾನಸ್:** ಬುದ್ಧಿ ಮನ

**ವಿಜ್ಞಾನ:** ಚೇತನ ಮನ

**ಆನಂದ:** ಪರಮ ಪರಿಶುದ್ಧ ವಾದ 'ತೋಷ'ವಾಗಿದೆ

**ಚಿತ್:** ಪರಿಶುದ್ಧ ಅಥವಾ ಅತ್ಯಾವಶ್ಯವಾಗಿರುವ ಜಾಗ್ರತಿ

**ಸತ್:** ಪರಮಾತಿ ಪರಮ ಪರಿಶುದ್ಧ ಅಥವಾ ಅತ್ಯವಾಶ್ಯವಾದ "ಅಸ್ತಿತ್ವ" ಅಥವಾ "ಚೈತನ್ಯ"

ನಮ್ಮ ವಿಕಸನದ ಸದ್ಯದ ಸ್ಥಿತಿಯಲ್ಲಿ ಸಾಮಾನ್ಯವಾಗಿ ಮಾನವ ಕುಲವು ಅನ್ನ–ಪ್ರಾಣ–ಮನಸ್ಸುಗಳನ್ನು ತನ್ನ ಸ್ವಭಾವಕ್ಕನುಗುಣವಾಗಿಯೇ ಅಭಿವೃದ್ಧಿ–ಪಡಿಸಿಕೊಂಡಿದೆ. ಅದರಲ್ಲೂ ಸಮಗ್ರ ಅಭಿವೃದ್ಧಿ(ವಿಕಾಸ)ಯ ಬಗೆಗೆ ಕೆಲವರು ಮಾತ್ರ, ಈ ಶಕ್ತಿಯನ್ನು "ವಿಜ್ಞಾನ"ದ ಹಂತದಲ್ಲಿ ಅನ್ವಯಿಸಿಕೊಳ್ಳಲು – ಅದೂ ಸ್ವೇದಮೆ ಎನ್ನುವಂತೆ – ಅಳವಡಿಸಿಕೊಳ್ಳಲು ಸಮರ್ಥರಾಗಿರುತ್ತಾರೆ. ಆದರೆ ಈ 'ವಿಜ್ಞಾನ'ದ ಅಸ್ಮಿತೆಯಲ್ಲಿಯೇ ಅಲ್ಲ. 'ವಿಜ್ಞಾನವನ್ನು' ಕೇವಲ ಮನಸ್ಸಿನಲ್ಲಿ ಮಾತ್ರ ಹಾಗೂ ಸಕಾರಣತ್ವದ (ತರ್ಕಬದ್ಧತೆಯ) ಜ್ಞಾನದರ್ಶನದ ಸಲುವಾಗಿ ಮಾತ್ರ ಉಪಯೋಗಿಸಿಕೊಳ್ಳುತ್ತಿದ್ದಾರೆ.

**ಬುದ್ಧಿ:** ಅಸಾಧಾರಣ ಸಾಮರ್ಥ್ಯ ಹೊಂದಿದ ಕೆಲವು ವ್ಯಕ್ತಿಗಳು ಮಾತ್ರ ಈ 'ಮನಸ್ಸು' ಮತ್ತು 'ಬುದ್ಧಿ'ಯ ಮೂಲಕವಾಗಿ ಅವುಗಳನ್ನು ಸೂಕ್ತಗೊಳಿಸಿಕೊಳ್ಳಲು 'ವಿಜ್ಞಾನ'ವನ್ನು ಆಧರಿಸಿಕೊಳ್ಳುತ್ತಾರೆ. ಹಾಗೂ ಈ ಹಂತದ ಬುದ್ಧಿ–ಮನ(ಪ್ರಜ್ಞೆ?)ದ ಹಂತದಲ್ಲಿಯೇ ಕ್ರಿಯಾಪ್ರವೃತ್ತಿಗೆ ತೊಡಗುತ್ತಾರೆ. ಹೀಗಾಗಿ ಆ ಸಂದರ್ಭದ ಘಟನೆಗಳೂ ಅದರ ಸೂಕ್ತವಾದ ವಲಯದಲ್ಲಿಯೇ ಪ್ರಕಟಗೊಳ್ಳುತ್ತವೆ.

ಆದರೆ ಇದರದೇ ಅಸ್ಮಿತೆಯ ಸ್ವರೂಪವಾಗಿರುವ "ವಿಜ್ಞಾನಮಯ–ಚೇತನ (ಭಾವನಾತ್ಮಕ ಚೇತನ)ದಲ್ಲಿ ಮನೋಪಾತಳಿಯ ಹಾಗೂ ವೈಜ್ಞಾನಿಕ ಪಾತಳಿಯ ಸಂಲಗ್ನತೆಯಲ್ಲಿ ಕ್ರಿಯೆ(ಕರ್ಮ)ಗಳಲ್ಲಿ ಘಟಿಸುವ ಘಟನಾವಳಿಗಳನ್ನು ಪ್ರತಿಭಾನಮ್(ಜೀನಿಯಸ್)" ಎಂದು ರೂಪಿತಗೊಳ್ಳುತ್ತವೆ. ಈ ಹಂತದಲ್ಲಿ ಈ ಪ್ರತಿಭಾನವು – ಕಾಂತಿಮಯ ಪ್ರತಿಕ್ರಿಯೆ ಅಥವಾ ಪ್ರತಿಬಿಂಬವಾಗಿ – ಮನಸ್ಸಿನ ವಿಜ್ಞಾನಮಯ ಹಂತದ ಪ್ರತಿಫಲನವಾಗಿರುತ್ತದೆ.

ಯೋಗಿಯಾದವನು ಈ 'ವಿಜ್ಞಾನದ' ಹಂತವನ್ನೂ ದಾಟಿ, ಮತ್ತೂ ಮತ್ತೂ ಊರ್ಧ್ವದತ್ತ ಸಾಗುತ್ತಾನೆ. ಅವನು ಋಷಿ ಅಥವಾ ದೃಷ್ಟಾರನಾಗುತ್ತಾನೆ.

ಯಾಜ್ಞವಲ್ಕ್ಯ ಈ ಹಂತದ "ದರ್ಶನ"ವನ್ನು ಕಂಡವನು. ಮಹಾದರ್ಶನವನ್ನು ಕಾಣುವ ಮೂಲಕ ಅಲ್ಲಿರುವ 'ಆನಂದ'ವನ್ನು ಅನುಭಾವಿಸುತ್ತಾನೆ.

ಇನ್ನುಳಿದಂತೆ ಈ "ಆನಂದದ" ಆಚೆ ಹೋಗಲು ಲೌಕಿಕದ (ಭವದ) ಬದುಕಿನ ಸ್ತರದಲ್ಲಿ ಸಾಧ್ಯವಾಗುವದಿಲ್ಲ. 'ಚಿತ್' ಮತ್ತು 'ಸತ್' ಹಂತದಲ್ಲಿ ಮಾತ್ರವೇ 'ಸುಷುಪ್ತಿ'ಯ ಸಾಧ್ಯತೆ ಇರುತ್ತದೆ. ಈ ಪಂಚಕೋಶಗಳೇ (ಅನ್ನ–ಪ್ರಾಣ–ಮನ–ವಿಜ್ಞಾನ–ಆನಂದ) ಸತ್ಯಯುಗದಲ್ಲಿ (ಕೃತಯುಗದಲ್ಲಿ) ಪೂರ್ಣವಾಗಿಯೇ ವಿಕಸನಗೊಂಡಿದ್ದರೂ ಕೊನೆಯ ಎರಡು ಕೋಶಗಳು (ಚಿತ್ ಮತ್ತು ಸತ್) ಅವರಿಗೂ ಸಹಿತ ಪರಿಪೂರ್ಣವಾಗಿ ದರ್ಶನಕ್ಕೆ ಲಭ್ಯವಾಗಿರಲಿಲ್ಲ.

'ವಿಜ್ಞಾನದ' ಹಂತದಿಂದ "ಅನ್ನಮ್" ಹಂತದವರೆಗೆ ಇರುವದನ್ನು 'ಅಪರಾರ್ಧ'ವೆನ್ನುತ್ತಾರೆ. ಅದು ಅಸ್ತಿತ್ವದಲ್ಲಿರುವ ಸ್ಥಿತಿಯ ಕೆಳಗಿನ ಭಾಗವಾಗಿದೆ. ಇಲ್ಲಿ 'ವಿದ್ಯೆ'ಯು 'ಅವಿದ್ಯೆ'ಯಿಂದ ನಿಯಂತ್ರಿಸಲ್ಪಡುತ್ತದೆ.

"ಆನಂದ" ಹಂತದಿಂದ 'ಸತ್' ಹಂತದವರೆಗಿನ ವಲಯವು "ಪರಾರ್ಧ"ವೆನಿಸಿಕೊಳ್ಳುತ್ತದೆ. ಅಥವಾ ಊರ್ಧ್ವಭಾಗವಾಗಿದೆ. ಇಲ್ಲಿ 'ಅವಿದ್ಯೆಯು' ವಿದ್ಯೆಯಿಂದ ನಿಯಂತ್ರಿಸಲ್ಪಡುತ್ತದೆ. ಹೀಗಾಗಿ ಇಲ್ಲಿ ಅಹಂಕಾರ, ಯಾತನೆ ಮತ್ತು ಸೀಮಿತತನಗಳು ಇರುವದಿಲ್ಲ.

ಸದ್ಯದ ಪರಿಸ್ಥಿತಿಯಲ್ಲಿ (ಕೊರೋನಾ ಕಾರಣದಿಂದ ರೂಪಿಸಲ್ಪಟ್ಟಿರುವ (21+19=40) 'ಬದುಕಿನ' ವ್ಯವಸ್ಥೆಗೆ ಏನಾದರೂ ಒಂದು ನಿಗದಿತವಾದ ಕಾರಣವಿರಲೇಬೇಕಲ್ಲವೇ? ಈ 40 ದಿನಗಳ ವಿಷಯವಾಗಿ ಇಡೀ ಭೂಮಂಡಳದ ದೇಶಗಳೂ ಒಮ್ಮತದ ಅಭಿಪ್ರಾಯವನ್ನೇ ಹೊಂದಿ, ಅನುಷ್ಠಾನಿಸಿಕೊಂಡು, ಆರಾಧಿಸಿಕೊಂಡು ತಮ್ಮ ಜೀವನವನ್ನು ರೂಪಿಸಿಕೊಳ್ಳುತ್ತಿದ್ದಾರೆ.

ಶ್ರೀ ಅರವಿಂದರ 'ಸಾವಿತ್ರಿ' ಮಹಾಕಾವ್ಯದಲ್ಲಿ ಈ ಅವಧಿಯ ಕರಿತು ಇರುವ ಈ ಅಪ್ರತಿಮ ಪ್ರತಿಮಾ ಅಭಿವ್ಯಕ್ತಿಯು ವಿಶ್ವದ ವಿಕಸನದ ಹಂತದಲ್ಲಿ ಬರಬಹುದಾದ, ಘಟಿಸಬಹುದಾದ ಉತ್ಪಾತಗಳನ್ನಾಗಲಿ ಅಥವಾ ಸಾಕ್ಷಾತ್ಕಾರದ ಸಾಧನೆಗೆ ನಿಯತಿಯ ಪ್ರಕಾರವೇ ನಿಗದಿಗೊಂಡ ಅವಧಿ ಎಂದರೆ 40 ಭೂಮಾನದ ದಿನಗಳು ಎನ್ನುವದನ್ನು ಸಂಕೇತಿಸಿದ್ದಾರೆ. ಇದು ವೈಶ್ವಿಕ ಕಾಲಗಣನಾ ಕ್ರಮಾಂಕದಲ್ಲಿ ಎಷ್ಟು (ಅವಧಿ) ಎನ್ನುವದು ಇನ್ನೂ ಸಂಶೋಧನೆಗೊಳ್ಳಬೇಕಿದೆ.

ಸಾವಿತ್ರಿಯ ಪ್ರಥಮ ಸಾಲಿನಲ್ಲಿ ಹೇಳಿರುವ "Hour" ಇದೇ ಆಗಿರಬಹುದೇ? ಪುಟ 7 ರಲ್ಲಿ ಇರುವ ಸಾಲುಗಳು ಹೀಗಿವೆ:

ಅವಳೆದೆಯ ಭಾವತೀವ್ರತೆಯ ಪ್ರೇಮ– ಭವಿತವ್ಯ ಅವಳ ಕೊಡುಗೆ
ಆಗಿತ್ತು ವ್ಯರ್ಥ, ಪರಿಗಣನೆ ಈಗ ಪ್ರಖ್ಯಾತ ತ್ಯಾಗದೊಸಗೆ
ದುಂದುಗಾರಿಕೆಯ ತೆರದಲ್ಲಿ ಬೆಸುಗೆ ಅವಳ ಆ ದಿವ್ಯ ಸಮೃದ್ಧಿ
ತನ್ನಲ್ಲಿ ತಾನು ಅನುಭವಿಸಿ ಅವಳು 'ಬಾಣಂತಿಕೋಣೆಯವಧಿ'
ಆ ಪರಮಗಂದು ನೆಲೆಗೊಳಿಸಿ ಅವಳ, ಅಸ್ತಿತ್ವ ಭವ್ಯವಾಗಿ
ಮೃಣ್ಮಯದ ಮೇಲೆ ಚಿನ್ಮಯದ ಮೂಲ ವಿಕಸನವು ನಿತ್ಯವಾಗಿ
ಬುವಿಮನದ ಗುಣವ ಬದಲಿಸುವ ಕ್ರಿಯೆಯು ಬಲು ಕಠಿಣ ಯತ್ನವಾಗಿ
ಶಾಶ್ವತದ ಸ್ಪರ್ಶ ಪಡೆಯೆ ನಶ್ವರವು, ಪಲ್ಲಟದಿ ಭಾವವಾಗಿ
ಆಕ್ರಮಿಸಲೆಂದು ಹಾತೊರೆದು ಬಂದ ಅಗ್ನಿ–ಆಕಾಶ ದ್ರವ್ಯ
ಪರಮ ಪಾವನದ ವಳಾವಳಿಯನ್ನು ಸಹಜದಲಿ ಧರಿಸಿಭವ್ಯ
ಸಚ್ಚಿದಾನಂದ ತಲ್ಲೀನದಲ್ಲಿ ಗುನುಗುಡುತ ನಿತ್ಯವಾಗಿ
ಅದು ತಂದ ಬೆಳಕು ನಂದಿಸಿತು ದ್ವೇಷ, ಬಹುತೇಕ ಪೂರ್ಣವಾಗಿ
ಹಾಗಾದರೆ ಏನದು 40 ದಿನದ ಅವಧಿ?

1) ಗರ್ಭ ಅಂಕರಗೊಂಡ 40 ದಿನಕ್ಕೆ ಭ್ರೂಣಕ್ಕೆ ಕಣ್ಣಿನ ರಚನೆಯಾಗುತ್ತದೆ

2) ಮಗುವಿನ ಜನನವಾದಂದಿನಿಂದ 40 ದಿನಗಳವರೆಗೆ ತಾಯಿ (ಬಾಣಂತಿ) ಹಾಗೂ ಶಿಶುವನ್ನು ಒಂದು ನಿಗದಿತವಾದ ಕೋಣೆಯಲ್ಲಿಯೇ ಇರಿಸಲಾಗುತ್ತಿತ್ತು. ಹಾಗೂ ಎಳ್ಳೆಣ್ಣೆ ಅಥವಾ ತುಪ್ಪದ ದೀಪವೊಂದನ್ನು ಸದಾ ಅಲ್ಲಿ ಬೆಳಗುವಂತೆ ಇಡಲಾಗುತ್ತಿತ್ತು.

3) ಜೈನ ಪರಂಪರೆಯಲ್ಲಿ ಪರ್ಯುಶಾನ ಎನ್ನುವ 40 ದಿನದ ಉಪವಾಸದ ಸಾಧನಾ ಕ್ರಮವಿದೆ.

4) ಬುದ್ಧನಿಗೆ (ಎರಡನೆ ಬಾರಿಯ ಪ್ರಯತ್ನದಲ್ಲಿ) 40 ದಿನಗಳ ಕಠಿಣ ತಪಸ್ಸಿನ ನಂತರದಲ್ಲಿ "ಸಾಕ್ಷಾತ್ಕರ".

5) ಇಸ್ಲಾಂ ಧರ್ಮದಲ್ಲೂ ಸಹಿತ 40 ದಿನಗಳ ಉಪವಾಸದ ಪದ್ಧತಿ ಇದೆ.

6) ಯೇಸುಕ್ರಿಸ್ತನನ್ನು ಶಿಲುಬೆಗೇರಿಸಿದ 40 ದಿನಗಳ ನಂತರ 'ಪುನರ್ಜನ್ಮ'ದ ಘಟನೆ.

7) ಕುಂಡಲೀನಿ ಜಾಗೃತಿಗೆ 40 ದಿನಗಳ ಸಾಧನಾ ಪದ್ಧತಿ ಇದೆ.

8) ಹಾರ್ನಬಿಲ್ (ಕಿರೀಟದ ಪಕ್ಷಿ; ಕರಾವಳಿಯಲ್ಲಿ, ದಾಂಡೇಲಿ ಅರಣ್ಯ ಪ್ರದೇಶದಲ್ಲಿ ನಿಗದಿತ ಸಮಯಕ್ಕೆ ವಲಸೆ ಬರುತ್ತವೆ. ಇಲ್ಲಿ ಸಿಗುವ ಸಮೃದ್ಧ ಹಲಸಿನ ಹಣ್ಣು ಅವುಗಳಿಗೆ ತುಂಬ ಪ್ರಿಯವಾದದ್ದು.) ಪಕ್ಷಿ 40 ವರ್ಷಕ್ಕೊಮ್ಮೆ 40 ದಿನಗಳ ಕಾಲ ಏಕಾಂತದಲ್ಲಿಯೇ ಇದ್ದು ತನ್ನ ಸ್ವರೂಪವನ್ನು ಸಂಪೂರ್ಣ ನವೀಕರಿಸಿಕೊಳ್ಳುತ್ತದೆ. ತದನಂತರದಲ್ಲಿ ಮತ್ತೆ ಅದರ ಆಯಸ್ಸು 40 ವರ್ಷ. (ಡಾಕ್ಯುಮೆಂಟರೀ ಇದೆ).

9) ಹನುಮಾನ ಚಾಲೀಸಾ ಇರುವದು 40 ಶ್ಲೋಕಗಳಲ್ಲಿ.

10) ಸಸ್ಯಗಳೂ ಸಹಿತ 40 ದಿನಗಳ ಕಾಲ ಸ್ಮರಣ ಶಕ್ತಿಯನ್ನು ಹೊಂದಿರುತ್ತವೆ ಎನ್ನುವದು ತೀರ ಇತ್ತೀಚಿಗೆ ಸಿದ್ಧಗೊಂಡ ಸಂಗತಿ.

11) ಆಧುನಿಕ ಮನಶ್ಶಾಸ್ತ್ರವೂ ಸಹಿತ 40 ದಿನಗಳ ಅವಧಿಯಲ್ಲಿ ಮನೋಭಾವಗಳನ್ನು ರೂಪಿಸುವ ಪದ್ಧತಿಯನ್ನು ಅನುಸರಿಸುತ್ತಾರೆ.

12) ಆಯರ್ವೇದದಲ್ಲಿಯೂ ಸಹಿತ 40 ದಿನಗಳ ಚಿಕಿತ್ಸೆ 'ಮಂಡಲ'ವಿರುತ್ತದೆ.

ಹೀಗೆ 40 ದಿನಗಳ ವಿಷಯವು ತುಂಬ ಅಧ್ಯಯನವನ್ನು ಬಯಸುತ್ತದೆ. ಈ ವಿಷಯವಾಗಿ ಬಲ್ಲವರು/ಆಸಕ್ತರು ಚರ್ಚೆ ಮುಂದುವರೆಸಬಹುದು.

ಇಲ್ಲಿಯವರೆಗೂ (ದಶಾವತಾರದ ವಿಷಯದ ಪ್ರಕಾರ) ಅವತರಣಗೊಂಡು ಬಂದಿರುವ "ಶಕ್ತಿ ಸ್ವರೂಪವು" ಪುರುಷಾಕಾರವಾಗಿಯೇ ನಿರೂಪಿತವಾಗಿದೆ. ಆದರೆ ಇದೇ 'ಅಧಿರೋಹಣ'ದ ಅವಧಿಯಲ್ಲಿ ಮತ್ತೆ "ಪ್ರಕೃತಿಯೇ" ಆಗಿಬಿಡುವದರಿಂದ ಸಹಜವಾಗಿ 'ಸ್ತ್ರೀ' ಸ್ವರೂಪದಲ್ಲಿಯೇ(ಸಾವಿತ್ರೀ) ಇರುವ ವಿಷಯವು ಅಧ್ಯಯನಗೊಳ್ಳಬೇಕಾಗಿದೆ.

ನಾಲ್ಕು ಶಕ್ತಿಗಳ (ಸ್ವರೂಪಗಳ) ಮೂಲಕವೇ ಸೃಷ್ಟಿಯ ವಿಕಸನಾ ವ್ಯವಸ್ಥೆಯೂ ಇರುವದರಿಂದ, ಅದನ್ನು ಪರಿಭಾವಿಸಲು/ಅನುಸಂಧಾನಿಸಲು/ ಅನುಭಾವಿಸಲು/ಸಾಕ್ಷಾತ್ಕರಿಸಿಕೊಳ್ಳಲು ಆಯಾ ಸಾಧಕನ ಸಾಧನಾ ಸಾಮರ್ಥ್ಯಕ್ಕೆ ಸೂಕ್ತವಾದ ಮಾರ್ಗಗಳಿವೆ. ಆದರೆ ಸೃಷ್ಟಿ ಮತ್ತು ಪ್ರಳಯದ ಚಕ್ರ ಇರುವವರೆಗೆ 'ಮಹಾಕಾಳೀ' ಸ್ವರೂಪ ಇದ್ದೇ ಇರುತ್ತದೆ. ವಿಕಾಸದ ಹಂತದಲ್ಲಿ ಅದು ಪಡೆದಿರಬಹುದಾ ನವೀನ ಆಯಾಂ ಯಾವುದು ಇರಬಹುದು? ಶ್ರೀ ಅರವಿಂದರು

ಅದನ್ನು ಸಂಕೇತಿಸುತ್ತಿದ್ದಾರೆಯೇ? ಎನ್ನುವದು ನನ್ನ ಅಧ್ಯಯನ ಕ್ರಮ. ಈ ವ್ಯಾಹೃತಗಳು ಸೂತ್ರಗಳು. ಅವುಗಳ ಮೂಲಕ ನಾವು ಜೀವನಾನುಭವದ ಮೂಲಕ ಅವುಗಳನ್ನು ಅನ್ವಯಿಸುವ ಕ್ರಮಗಳನ್ನು ಅಧ್ಯಯನ ಮಾಡಬೇಕಾಗಿದೆ. ಶ್ರೀ ಅಮೂರರು ಬರೆದಿರುವ ಹಾಗೆ ನಾವು Reductionist ಹಂತದಲ್ಲಿಯೇ ನಮ್ಮ ಚಿಂತನಗಳನ್ನು ಸೀಮಿತಗೊಳಿಸಲಾಗಿದೆ. ಆದರೆ ಅಂತರ್ಝರಿಯಂತೆ ಇರುವ ಈ ಅಧ್ಯಯನ ಕ್ರಮವು ಸುಪ್ತವಾಗಿ ನಡೆದೇ ಇದೆ. ಇದೀಗ ಅದರೊಡನೆ ಸಂಪರ್ಕ ಸಾಧಿಸಿಕೊಳ್ಳುವ ಪ್ರಯತ್ನಗಳು ನಡೆಯಬೇಕಾಗಿದೆ.

ಈ ವಿಷಯಕ್ಕೆ ಪೂರಕವಾಗಿ ಒಂದು ನಿದರ್ಶನ. ಸಮುದ್ರ ಪುರುಷ; ಆಕಾಶ ಪುರುಷ; ಮೇಘ ಪುರುಷ; ವಾಯು ಪುರುಷ; ಮಳೆ ಪುರುಷ; ಆದರೆ ಈ ಚಕ್ರ ಭೂಮಿಯನ್ನು ತಲುಪುತ್ತಲೇ "ಸ್ತ್ರೀ ವಾಚಕವಾಗುತ್ತದೆ" ಹೊಳೇಗಂಗವ್ವ, ನದಿಗಲೆಲ್ಲವೂ ಸ್ತ್ರೀ ವಾಚಕ. ಸಾವಿತ್ರಿಯೂ ಇದನ್ನೇ ಸಂಕೇತಿಸುತ್ತಿದೆಯೇ? ಹಾಗಿದ್ದಲ್ಲಿ ಅದರ/ ಅವುಗಳ ಸ್ವರೂಪವೇನು ಎನ್ನುವದನ್ನಾದರೂ ಪ್ರಯತ್ನಿಸಬಹುದಲ್ಲವೇ?

ಬೀಜಮಂತ್ರಗಳಾಗಲೀ ಅಥವಾ ವ್ಯಾಹೃತಿಗಳಾಗಲೀ ಈ ಮೂಲ(ಆದಿಮ) ವಿಷಯದ ಸೂತ್ರವಾಗಿ ಸಂಕೇತಾಕ್ಷರವಾಗಿರುತ್ತದೆ. ಸುರೇಶ್ವರಾಚಾರ್ಯರ "ನೈಷ್ಕರ್ಮ ಸಿದ್ಧಿ"ಯನ್ನು ಗಮನಿಸಬಹುದು. ಇದು ಅಸಾಧಾರಣವೂ ಊಹಾತೀತವೂ ಆಗಿರುವ "ಶಬ್ದಶಕ್ತಿ"ಯನ್ನು ವಿವರಿಸುತ್ತಿದೆ. ಅದೇ ರೀತಿಯಲ್ಲಿ ಜಾನ್ ವುಡ್–ರೋಫ್ ಅವರೂ "ಗಾರ್ಲೆಂಡ್ ಆಫ್ ಲೆಟರ್ಸ"ನಲ್ಲಿ ಈ ವಿಷಯಗಳ ಹಲವು ಆಯಾಮಗಳನ್ನು ನೀಡಿದ್ದಾರೆ.

ಇನ್ನು ವ್ಯಾಹೃತಿಯ ವಿಷಯದಲ್ಲಿ ಹ್ರೀಂ, ಶ್ರೀಂ ಮೊದಲಾದ ವ್ಯಾಹೃತಿಗಳ ಬಗೆಗೆ ಕೆಲವು ಮಾಹಿತಿಗಳು;

ಶ್ರೀಮಾತೆಯ ಸರ್ವ–ಸ್ವರೂಪಗಳನ್ನೂ ಅರಿತುಕೊಳ್ಳಲು ಆಯಾ ಆಯಾ ಹಂತದಲ್ಲಿ ಅಧ್ಯಯನ/ಸಾಧನ ಕ್ರಮಾಂಕಗಳಿವೆ. ಕೆಲವು ಬೀಜಾಕ್ಷರಗಳಿಗೆ (ವ್ಯಾಹೃತಿಗಳಿಗೆ) ಸಂಬಂಧಿಸಿದಂತೆ ಕೆಲವೊಂದು ಮಂತ್ರಗಳೂ ಇವೆ. ಶ್ರೀಮಾತೆಯನ್ನು ಕುರಿತ ಮಂತ್ರವೇ ಶ್ರೀವಿದ್ಯಾ ಎಂದಿದೆ.

**ಶ್ರೀವಿದ್ಯಾ:** ಇದು 15 ಅಕ್ಷರಗಳನ್ನು ಹೊಂದಿದೆ. 'ಪಂಚದಶಾಕ್ಷರೀ' ಎನ್ನುತ್ತಾರೆ. 16 ಅಕ್ಷರಗಳ ಷೋಡಶಾಕ್ಷರೀಯು ಉಂಟು; 28 ಅಕ್ಷರಗಳ ಮಹಾಷೋಡಶೀಯು ಉಂಟು; 9 ಅಕ್ಷರಗಳ ನವಾಕ್ಷರೀಯ ವಿಧಾನವೂ ಇದೆ.

ಈ ನವಾಕ್ಷರಿಯು ಉತ್ತರ ಪ್ರದೇಶ, ಓಡಿಸ್ಸಾ, ಮಧ್ಯಪ್ರದೇಶ, ಬಂಗಾಳ, ಆಸ್ಸಾಮದಲ್ಲಿ ಪ್ರಚಲಿತವಿದೆ. ಇಲ್ಲಿ ಅಂದರೆ ದಕ್ಷಿಣ ಭಾರತದಲ್ಲಿ "ಪಂಚ ದಶಾಕ್ಷರಿ" ಮಾತ್ರ ಜನಪ್ರಿಯವಾಗಿದೆ. "ಶ್ರೀಂ" ಎನ್ನುವ ಅಕ್ಷರವನ್ನು ಸೇರಿಸಿದರೆ "ಷೋಡಶಾಕ್ಷರಿ". ಇನ್ನೊಂದು 13 ಅಕ್ಷರಗಳ "ಮಹಾಷೋಡಶೀ" ಅಥವಾ "ಪರಾಷೋಡಶೀ" (ಶ್ರೀಂ, ಸೌಃ, ಕ್ಲೀಂ, ಐಂ, ಹ್ರೀಂ, ಶ್ರೀಂ, ಹ್ರೀಂ, ಓಮ್ + ಪಂಚದಶಾಕ್ಷರೀ + ಹ್ರೀಂ, ಶ್ರೀಂ, ಐಂ, ಕ್ಲೀಂ, ಸೌಃ) ಇವೆಲ್ಲವೂ "ಈಮ್" ಎನ್ನುವ ಅಕ್ಷರದಲ್ಲಿ ಕೇಂದ್ರೀಕೃತವಾಗಿವೆ. ಇದನ್ನೇ "ಮೂಲಮಂತ್ರಾತ್ಮಿಕಾ" ಎಂದು ಒಂದೇ ಸೂತ್ರವಾಕ್ಯದಲ್ಲಿ ಕರೆಯಲಾಗಿದೆ.

ಇದು ತುಂಬ ವಿಸ್ತೃತವಾದ ವಿಷಯ. ಇಲ್ಲಿ "ಸಾವಿತ್ರಿ"ಯಲ್ಲಿ ಶಕ್ತಿಯ ನಾಲ್ಕೂ ಸ್ವರೂಪಗಳ ಬಗೆಗೆ ಪ್ರಶ್ನೆ ಬಂದಿದ್ದರಿಂದ, ಕೇವಲ ಸಂಕೇತ ಸ್ವರೂಪದಲ್ಲಿ ಮಾತ್ರ ಈ ವಿಷಯ ಹಂಚಿಕೊಳ್ಳುತ್ತಿದ್ದೇನೆ. ವಿವರಗಳು ಇಲ್ಲಿ ಪ್ರಸ್ತುತವಾಗಲಿಕ್ಕಿಲ್ಲ.

ಇನ್ನು ಐಂ, ಕ್ಲೀಂ, ಸೌಃ ಎನ್ನುವ ಮೂರು ಅಕ್ಷರಗಳ "ಬಾಲಾತ್ರಿಪುರ ಸುಂದರೀ" ಎನ್ನುವ ಮಂತ್ರವಿದೆ. ಇದನ್ನು "ಶ್ರೀವಿದ್ಯಾ" ಎಂದೇ ಕರೆಯಲಾಗುತ್ತಿದೆ. ವಿವರಗಳಿಗೆ ಸುರೇಶ್ವರಾಚಾರ್ಯರ "ನೈಷ್ಕರ್ಮ ಸಿದ್ಧಿ"ಯನ್ನು ಗಮನಿಸಬಹುದು. ಇದು ಅಸಾಧಾರಣವೂ ಊಹಾತೀತವೂ ಆಗಿರುವ "ಶಬ್ದಶಕ್ತಿ"ಯನ್ನು ವಿವರಿಸುತ್ತಿದೆ. ಅದೇ ರೀತಿಯಲ್ಲಿ ಜಾನ್ ವುಡ್–ರೋಫ್ ಅವರೂ "ಗಾರ್ಲೆಂಡ್ ಆಫ್ ಲೆಟರ್ಸ್"ನಲ್ಲಿ ಈ ವಿಷಯಗಳ ಹಲವು ಆಯಾಮಗಳನ್ನು ನೀಡಿದ್ದಾರೆ.

ಸಾವಿತ್ರಿ ಬುಕ್ 1 ಇದೀಗ ಸಂಪನ್ನಗೊಳ್ಳುತ್ತಿದೆ. ಹೀಗಾಗಿ ಈ ಬುಕ್ 1 ಆದ ನಂತರದಲ್ಲಿ, ಅವಶ್ಯವಿದ್ದಲ್ಲಿ, ಈ ವಿವರಗಳನ್ನು ಚರ್ಚಿಸಬಹುದು. ಸಾವಿತ್ರಿಯ "24" ನೇ ಹಂತದಲ್ಲಿ ಈ ಎಲ್ಲ "ರಹಸ್ಯಗಳ" ನಿಕ್ಷೇಪವೇ ಇದೆ.

ಶ್ರೀ ಅರವಿಂದರು ಇದನ್ನು "ಪ್ರಣವದರ್ಥ" ಎನ್ನುವ ಹಿನ್ನಲೆಯಲ್ಲಿ ವಿವರಿಸುತ್ತಾರೆ. ಬೀಜಮಂತ್ರಗಳೇ ಇರಲಿ, ವ್ಯಾಹೃತಿಗಳೇ ಇರಲಿ, ಅವತರಣಗೊಂಡು ರೂಪಣೆಗೊಳ್ಳುವ "ಬದುಕಿನ ಆಯಾಮಗಳನ್ನು" ಹೇಳುತ್ತಿವೆ. ಆದರೆ ಶ್ರೀ ಅರವಿಂದರು ಇದೀಗ 'ಆರೋಹಣ' ಕ್ರಮದಲ್ಲಿರುವ ವಿಷಯಗಳ ಮೂಲಮಂತ್ರಗಳನ್ನು ಒದಗಿಸಿದ್ದಾರೆ.

# ‘ಸಾವಿತ್ರಿ’; ಅನುಸಂಧಾನ

## ಬುದ್ಧಿ–ಮನದ ಗುಣವ ಬದಲಿಸುವ ಕ್ರಿಯೆಯು

**ಶ್ರೀಮಾತೆ: (ಅನು: ಕೆ.ಎಸ್. ಅಮೂರ)**

ಇದು ಸರ್ವಸಾಧಾರಣವಾಗಿ ಕಂಡುಬರುವ ಪೃಥ್ವಿಯ ಸ್ಥಿತಿಯನ್ನು ಕುರಿತು ನಿಖರವಾದ ವರ್ಣನೆಯಾಗಿದೆ. ಕೇವಲ, ಸ್ವಲ್ಪ ಸ್ವಲ್ಪವಾಗಿ ಈ ಸತ್ಯವನ್ನು ಸ್ವೀಕರಿಸುವ ಜನರ ಸಂಖ್ಯೆ ಹೆಚ್ಚಾಗುತ್ತ ಹೋಗುತ್ತದೆ. ಆ ಕಾರಣದಿಂದಾಗಿ, ತಾಳ್ಮೆಯಿಂದ ಪುನರಾವರ್ತಿಸುವ ಪ್ರಯತ್ನದಿಂದ ಒಂದು ದಿನ ಅದು ಪರಿಣಾಮ ತಂದುಕೊಡುತ್ತದೆಂಬುದನ್ನು ಭಗವಂತ ಅರಿತಿದ್ದಾನೆ. ವಾಸ್ತವದಲ್ಲಿ ಪುನರಾವರ್ತಿಸಬೇಕಾದ ಹಲವಾರು ಪ್ರಯತ್ನಗಳ ಮೂಲಕ ಮತ್ತು ತೋರಿಕೆಯ ವಿಫಲತೆಗಳ ಮೂಲಕ ಆ ಕಾರ್ಯವನ್ನು ಕೈಕೊಳ್ಳಬೇಕಾಗುತ್ತದೆ. ಈ ಪ್ರಯತ್ನದ ಸಾಂಕೇತಿಕ ಪ್ರತಿನಿಧಿಸುವಿಕೆಯನ್ನು ‘ಸಾವಿತ್ರಿ’ಯಲ್ಲಿ ಕೊಡಲಾಗಿದೆ. ಅದು ಸಂಕೇತ ರೂಪದಲ್ಲಿ ಇರಿಸಿದ ಕಾರ್ಯವನ್ನು, ಸಂಭವಿಸಿದ ಏನೋ ಒಂದರ ಕತೆಯನ್ನು ಹೇಳುವಂತಹದಲ್ಲ. ಅದು, ಭಗವಂತ ಭೌತಿಕ ಸೃಷ್ಟಿಯನ್ನು ದೈವಿಕವಾಗಿಸಲು ಕೈಕೊಳ್ಳಬೇಕಾದ ಪ್ರಯತ್ನದ ಕುರಿತು ಸಂಕ್ಷೇಪವಾಗಿ ಹೇಳಿದ ಮತ್ತು ಪ್ರತೀಕ ರೂಪದಲ್ಲಿರಿಸಿದ ಚಿತ್ರಣವಾಗಿದೆ. ತೋರಿಕೆಯೆಲ್ಲ ವಿಫಲತೆಗಳೆಂದು ಕಂಡುಬರುವ ಕ್ರಿಯೆಗಳು ಸಿದ್ಧಿಯತ್ತ ಇರಿಸುವ ನಿಶ್ಚಿತ ರೂಪದ ಹೆಜ್ಜೆಗಳಾಗಿರುತ್ತವೆ. ‘ಸಾವಿತ್ರಿ’ಯಲ್ಲಿ ಅಭಿವ್ಯಕ್ತಪಡಿಸಲಾದ ಮತ್ತು ಪ್ರತಿನಿಧಿಸಲಾದ ವಿಷಯಗಳಲ್ಲಿ ಇದು ಒಂದು ವಿಷಯವಾಗಿದೆ. ಪೃಥ್ವಿಯ ಮೇಲೆ ಮಾನವ ಜೀವನದ ಇತಿಹಾಸ ಅದಾಗಿದೆ, ತ್ವರಿತಗೊಳಿಸಲು ಪ್ರತಿಸಲ ಸಹಾಯ ಕಳಿಸಿದೆ. ಆ ರೀತಿಯಲ್ಲಿ ಅದನ್ನು ಸ್ವೀಕರಿಸಲಾಗಿದೆ. ಆದರೆ ಪ್ರತಿಸಲ ಪ್ರಯತ್ನ ಹಾಗೂ ಸಹಾಯ ಹೆಚ್ಚು ಭವ್ಯವಾಗುತ್ತ, ಉಚ್ಚತರವಾಗುತ್ತ, ಹೆಚ್ಚು ನಿಜವಾದವುಗಳಾಗುತ್ತ ಹೋಗಿವೆ; ಮತ್ತು ಪ್ರತಿಸಲ ಸ್ವಲ್ಪ ಕಾರ್ಯವನ್ನು, ಸ್ವಲ್ಪ ಪರಿಣಾಮವನ್ನು ಸಿದ್ಧಿಸಿಕೊಳ್ಳಲಾಗಿದೆ, ಹೆಜ್ಜೆಯ ನಂತರ ಹೆಜ್ಜೆ ಇರಿಸುತ್ತ ಜಗತ್ತು ದೈವೀ ಸಿದ್ಧಿಯತ್ತ ಅಭಿವೃದ್ಧಿ ಹೊಂದುತ್ತದೆ. ಇಡೀ ಕತೆಯನ್ನು ಸಾಂಕೇತಿಕ ರೂಪದಲ್ಲಿ, ಸಾಂಕೇತಿಕ ಕತೆಯಲ್ಲಿ ತೋರಿಸಲಾಗಿದೆ. ಮತ್ತು ಅದನ್ನೇ ಶ್ರೀ ಅರವಿಂದರು ‘ಸಾವಿತ್ರಿ’ಯಲ್ಲಿ ಕೊಟ್ಟಿದ್ದಾರೆ.

**ಡಾ॥ ಬಿ.ಆರ್. ಭೀಡ್**

ಆದರೆ ಭೂಮಿಯ ಗುಣವನ್ನು, ಸ್ವಭಾವವನ್ನು ಬದಲಿಸುವುದು ಸುಲಭವಲ್ಲ, ಬಹಳ ಕಠಿಣ. ಶಾಶ್ವತತೆಯ ಸ್ಪರ್ಶವನ್ನು ಅದು ದ್ವೇಷಿಸುತ್ತದೆ, ಸಹಿಸುವುದಿಲ್ಲ. ಪರಿಶುದ್ಧ ದೈವೀ ಅಸಹಿಷ್ಣುತೆಗೆ – ದೈವೀ ಅಸಹಿಷ್ಣುತೆಯು ತಿಲಮಾತ್ರದ ಅಸತ್ಯ, ಅವಿದ್ಯೆ, ಅಜ್ಞಾನ, ದೋಷಗಳನ್ನು ಕೂಡ ಸಹಿಸುವುದಿಲ್ಲ – ಭೂಮಿ ಹೆದರುತ್ತದೆ. ಆಕಾಶ, ಅಗ್ನಿ ಎರಡೂ ತನ್ನ ಮೇಲೆ ಮುರಿದುಕೊಂಡು ಬಿದ್ದಂತೆ, ಆಕ್ರಮಣ ಮಾಡಿದಂತೆ ಅದು ಭಾವಿಸುತ್ತದೆ. ಭೂಮಿಗೆ ಸುಖ ದುಃಖ ಎರಡೂ ಬೇಕು, ದುಃಖದ ಸ್ಪರ್ಶವಿರದ ಸಂತಸ ಅದಕ್ಕೆ ಬೇಡ, ಅದು ಗೋಣಗುತ್ತದೆ. ಅಂಥ ದೈವೀ ಅಸಹಿಷ್ಣುತೆಯು ತರುವ ಬೆಳಕನ್ನು ದ್ವೇಷದಿಂದಲೇ ತಿರಸ್ಕರಿಸುತ್ತದೆ. ಅದರ ದಿವ್ಯ ಸತ್ಯದ ನಗ್ನ ಶಕ್ತಿಗೆ ಭೂಮಿ ಹೆದರಿ ನಡುಗುತ್ತದೆ. ದೈವೀ ವಾಣಿಯ ಮಾಧುರ್ಯ ಹಾಗೂ ಶಕ್ತಿಯ ಇದಿರಲ್ಲಿ ಕಂಪಿಸತೊಡಗುತ್ತದೆ. ಆಕಾಶ ಮತ್ತು ಅಗ್ನಿಗಳ ಆಕ್ರಮಣ *assault of ether and of fire* ಅಂದರೆ ಆಕಾಶದ ವೈಶಾಲ್ಯ, ಅಗ್ನಿಯ ದಹನ ಗುಣ ಇವುಗಳ ಆಕ್ರಮಣ ಎಂದೇ ಅರ್ಥ. ತನ್ನ ಮೂಲಗುಣಗಳಾದ ನಿಷ್ಕ್ರಿಯತೆ, ಜಡತ್ವ, ಅಜ್ಞಾನ ಇವುಗಳ ಮೇಲಿನ ದಾಳಿ ಎಂದೇ ಭೂಮಿಗೆ ಭಾಸವಾಗುತ್ತದೆ. ಅದು ಸಹಜ ಕೂಡ. ಸಾವಿತ್ರಿಯ ಜನನವೇ ಒಂದು ರೀತಿಯ ಆಕ್ರಮಣ; ಅದರ ಸಂಕುಚಿತತೆ, ಅಜ್ಞಾನಗಳ ಮೇಲಿನ ದಾಳಿಯೇ. ಅಂತೆಯೇ ಅದು ಆಕೆಯನ್ನು ಸಂತಸದಿಂದ ಸ್ವಾಗತಿಸಿಲ್ಲ, ಆಕೆಗೂ ಸಹ **'ತನ್ನ ಉತ್ಕಟ ಪ್ರೇಮ ಹಾಗೂ ಯಾತನೆಯ ಪುಷ್ಪ ಗುಚ್ಛವನ್ನು'** ನೀಡಿಯೇ ಸ್ವಾಗತಿಸಿದೆ.

ಭೂಮಿಯು ದೈವೀ ದಾಳಿಗೆ ಹೆದರುತ್ತದೆ ಎಂದ ಮಾತ್ರಕ್ಕೆ ಹೆದರಿ ಸುಮ್ಮನಿರುತ್ತದೆ ಎಂದು ತಿಳಿಯಲಾಗದು. ಎತ್ತರಗಳ ಮೇಲೆ, ಔನ್ನತ್ಯಗಳ ಮೇಲೆ ತನ್ನ ಕತ್ತಲೆಯ ಕರಾಳ ನಿಯಮಗಳನ್ನು, ಆಡಳಿತವನ್ನು ಹೇರಲು ಯತ್ನಿಸುತ್ತದೆ. ದಿವ್ಯತೆಯ ಸಂದೇಶ ವಾಹಕರಾದ ದೇವದೂತರ ಮೇಲೆ ತನ್ನ ಕೆಸರು ರಾಡಿ ಎರಚಿ ವಿರೂಪಗೊಳಿಸಲು ಪ್ರಯತ್ನ ಪಡುತ್ತದೆ. ಭ್ರಷ್ಟ ಪ್ರಕೃತಿಯ ಮುಳ್ಳುಗಳನ್ನು ಅದು ರಕ್ಷಾ ಕವಚವನ್ನಾಗಿ ಮಾಡಿಕೊಳ್ಳುತ್ತದೆ. ತನ್ನನ್ನು ಉದ್ಧರಿಸಬಂದ ಕೃಪಾಹಸ್ತಗಳ ವಿರುದ್ಧ ಅವುಗಳನ್ನೇ ಅಸ್ತ್ರವಾಗಿ ಉಪಯೋಗಿಸುತ್ತದೆ. ಜಗವನುದ್ಧರಿಸಬಂದ ದೇವಪುತ್ರರನ್ನು ಸಾವು ನೋವುಗಳ ಮೂಲಕ ಅಸಾಧ್ಯ ಕಾಡುತ್ತದೆ.

**ಜನಿಸದಿಹ ವಸ್ತು–ವಿಷಯಕ್ಕೆ ಅಗಣಿತದ ಚಿಂತನದ ಪಥವು ಉಕ್ಕಿ**

ಸಾವಿತ್ರಿಯ ಸಂಕಲ್ಪವು ಬುದ್ಧಿ, ವಿಚಾರ, ವಿಮರ್ಶೆಗಳಿಂದ ನಿರ್ಮಿತವಾದುದಲ್ಲ. ಸ್ವಯಂಬೋಧೆಯಿಂದ ಬಂದುದು. ಅಂತೆಯೇ ಅಲ್ಲಿ ಹೊಯ್ದಾಟವಿಲ್ಲ. ತಾನೇನು ಮಾಡಬಲ್ಲೆ ಎಂಬುದೂ ಗೊತ್ತು, ಏನು ಮಾಡಬೇಕು ಎಂಬುದೂ ಗೊತ್ತು. ಆಕೆಯ ನಿರ್ಧಾರ ಗಟ್ಟಿಯಾಗಿತ್ತು.

ಸಂಕಲ್ಪದಲ್ಲಿ ಬಲವಿತ್ತು, ಆವೇಶವಿತ್ತು, ಉತ್ಸಾಹ ಇತ್ತು. ಸಮಾಧಾನವೂ ಇತ್ತು. ಸತ್ಯವಾನನ ಸಾವಿನ ದಿನ ಕೂಡ ಈ ಮಾತು ಸತ್ಯ. ಆಕೆಯ ಆತ್ಮದಲ್ಲಿ ಮೊದಲಿನ ಉತ್ಸಾಹವೇ ಇದೆ. (*ದೈವೀ ಅವತರಣವು ಯಾವಾಗಲೂ ಉತ್ಸಾಹ ಕಳೆದುಕೊಳ್ಳುವುದಿಲ್ಲ. ಮೊದಲ ಸಲ ಪ್ರಕಟವಾದಾಗಿನ ಉತ್ಸಾಹ, ಆವೇಶ ಅಷ್ಟೇ ತೀವ್ರತೆಯನ್ನು ಕಾಯ್ದುಕೊಂಡಿರುತ್ತದೆ. 3.27*) ಆಕೆಯ ಮನಸ್ಸು ಪರಿಶುದ್ಧ ನಿಷ್ಠೆ, ಶ್ರದ್ಧೆ, ನಂಬಿಕೆಗಳ ಶ್ವೇತ ಸಾಗರ. ಆತ್ಮವಿಶ್ವಾಸ, ನಂಬಿಕೆ ಇವು ಕೊನೆಯ ಗಳಿಗೆಯಲ್ಲೂ ಮೊದಲಿನಷ್ಟೇ ಪ್ರಬಲವಾಗಿರುತ್ತದೆ. ಅದೇ ಓಘ, ಅದೇ ಆವೇಶ, ಅದೇ ಪರವಶತೆ, ಅದೇ ಧಾರಣ, ಅದೇ ಓಟ. ಅದರಲ್ಲಿ ಒಂದೇ ಒಂದು ಮಲಿನ ದೋಷಯುಕ್ತ ಅಲೆ ಕೂಡ ಸಿಕ್ಕದು. ಸ್ವಯಂಭೂ, ಸ್ವಯಂಚಾಲಿತ ಚೈತನ್ಯ ಶಕ್ತಿಯ ಅವತರಣ ಸಾವಿತ್ರಿ.

ಪರಿಶುದ್ಧ ಪರಿಪೂರ್ಣ ಆನಂದಗಳ ಆರಾಧಕಳಾದ ನೃತ್ಯ ಕಲಾವಿದೆಯು, ಪರಮ ಸತ್ಯ ಸಾಕ್ಷಾತ್ಕಾರದಿಂದ ಸಂಪ್ರೇರಿತಳಾಗಿ, ಸಂಚಾಲಿತಳಾಗಿ, ಅಲೌಕಿಕ ಆಧ್ಯಾತ್ಮಿಕ ಸೃಜನಶೀಲ ನೃತ್ಯ ಪ್ರದರ್ಶನ ಮಾಡುತ್ತ, ದೇವತೆಗಳ ಅಂತರ್ಬೋಧೆಯ ಗುಹೆಯನ್ನು ಸಹಜವಾಗಿ ಪ್ರವೇಶಿಸುತ್ತಾಳೆ. ಸಾವಿತ್ರಿ ಕೂಡ ಹಾಗೆಯೇ. ಆಕೆಯು ಸಂಪೂರ್ಣವಾಗಿ ಅಂತಸ್ಫೂರ್ತಿಯ ಆಧಾರದ ಮೇಲೆಯೇ ಕೆಲಸ ಮಾಡುವವಳು. ಆಕೆಯ ಹೃದಯ ಅಥವಾ ಭಾವನೆಗಳು ಮೌನ ಶಾಂತ ಆನಂದಗಳ ಆರೈಕೆಯಲ್ಲಿಯೇ ಬೆಳೆದು ಸಮೃದ್ಧ ಸೃಜನಶೀಲ ಸ್ಪಂದನೆಗಳನ್ನು ಅಭಿವ್ಯಕ್ತಗೊಳಿಸುತ್ತಿದ್ದವು. ಆಕೆಯ ಶರೀರವು ಉಷಃಕಾಲದ ಸ್ವರ್ಣಿಮ ಕಿರಣದಂತೆ, ಬೆಳಕನ್ನು ಎಷ್ಟೇ ಮುಚ್ಚಿಡಲು ಪ್ರಯತ್ನಿಸಿದರೂ ಅದು ಕಿಟಕಿಯ ಮೂಲಕ ಒಳ ತೂರಿ ಬರುವಂತೆ, ದೈವತ್ವವನ್ನು ಪ್ರಕಟಪಡಿಸುತ್ತಲೇ ಇದ್ದಿತು. ಆಕೆಯ ಇಡೀ ವ್ಯಕ್ತಿತ್ವವು ವಿಶ್ವಾತೀತ ಅವ್ಯಕ್ತ ಸಂಗತಿಗಳ ದೇಗುಲಕ್ಕೆ ಬಂಗಾರದ ಬಾಗಿಲಿನ ಹಾಗಿತ್ತು. ಸಾವಿತ್ರಿಯು ಸವಿತೃ – ಸೂರ್ಯ ದೇವನ ಮಗಳು.

ಸೂರ್ಯನು ದೈವೀ ಜ್ಞಾನದ ಪ್ರತೀಕ. ಹೀಗೆ ಸಾವಿತ್ರಿಯು ದೈವೀ ಜ್ಞಾನ ಸಂಜಾತೆಯಾದರೂ ಆಕೆಯ ಲಾಸ್ಯದಲ್ಲಿ ದೇಶ ಕಾಲಗಳ ಲಯವಿದ್ದಿತು. ಆಕೆಯ ನೋಟ, ಆಕೆಯ ದೃಷ್ಟಿ, ಆಕೆಯ ನಗು ಸ್ವರ್ಗೀಯ ಸಂವೇದನೆಯನ್ನು ಜಾಗೃತಗೊಳಿಸುತ್ತಿತ್ತು. ಜಡದಲ್ಲಿ ಕೂಡ ದಿವ್ಯ ಆನಂದದ ಪ್ರವಾಹವನ್ನು ಹರಿಸುತ್ತಿತ್ತು. ಶ್ರೇಷ್ಠವಾದ ಸೌಂದರ್ಯವನ್ನು ಅರ್ಥವಂತಿಕೆಯನ್ನು ಜೀವನದಲ್ಲಿ ತುಂಬಿಸುವಂತಿತ್ತು.

ವಿಶಾಲವಾದ, ವಿಸ್ತೃತವಾದ ಆತ್ಮ ದಾನ – ಆತ್ಮ ಸಮರ್ಪಣೆ – ಸಾವಿತ್ರಿಯ ಸಹಜ ಧರ್ಮವಾಗಿತ್ತು. ಆಕೆಯ ಸಂಪರ್ಕದಲ್ಲಿ ಬಂದವರಿಗೆಲ್ಲ ಅಪರಂಪಾರ ಸಾಗರ, ಅಪರಿಮಿತ ಆಕಾಶ ಸಮ ಔದಾರ್ಯದ ಅನುಭವ ಆಗುವುದು. ಆ ಸುಮಹತ್ತರ ಅನುಭೂತಿಯಲ್ಲಿ ಕಳೆದು ಹೋಗುವುರು. ತಮ್ಮ ಜೀವನದಲ್ಲಿಯೂ ಒಂದು ಮಹತ್ತರವಾದ ಅರ್ಥ ಇದೆ, ಸಾರ್ಥಕತೆ ಇದೆ ಎಂದು ಅನಿಸುವುದು. ಆಕೆಯ ಮಮತಾಮಯ ಕಾಳಜಿಯು ಸಮಶೀತೋಷ್ಣ ಸೂರ್ಯನ ಅನುಭವದಂತೆ ಅಪ್ಯಾಯಮಾನವಾಗಿತ್ತು. ಆಕೆಯ ಉನ್ನತ ಪ್ರೇಮದ ಆವೇಶವು ನೀಲ ನಭ ಸಮ ಶಾಂತ, ಸಾಮ್ಯ, ಸೌಮ್ಯ, ಸಮ ಅವಸ್ಥೆಯಲ್ಲಿ ಇತ್ತು.

ಒಂದು ಸಣ್ಣ ಹಕ್ಕಿಯು ಬೇಟೆಗಾರನಿಂದ ತಪ್ಪಿಸಿಕೊಂಡು, ಬಿರುಗಾಳಿಯ ಮಧ್ಯೆ ದಣಿದ ರೆಕ್ಕೆಗಳಿಂದ ಹೋರಲಾರದ ಹಾರುತ್ತಾ, ಹೇಗೋ ಅಸಾಧ್ಯ ಪ್ರಯಾಸ ಪಟ್ಟು ತನ್ನ **'ನಿಜ ಸ್ಮೃತಿಯ ವಕ್ಷ'** ಸ್ಥಲವನ್ನು ಆಶ್ರಯಿಸಿ ನಿಶ್ಚಿಂತೆಯಿಂದ ವಿರಮಿಸುವಂತೆ, – ಸಾವಿತ್ರಿಯ ಬಳಿಗೆ ಬಂದ ಜನ ಸುರಕ್ಷಿತವಾದ ಮಹೋನ್ನತ ತಾಣವನ್ನು ಸೇರಿದಂತಹ ಭಾವವನ್ನು ಅನುಭವ ಮಾಡುತ್ತಿದ್ದರು – ಸ್ವರ್ಗವನ್ನೇ ಸೇರಿದ ಪರಿಶುದ್ಧ ಆನಂದವನ್ನು ಕಾಣುವುರು. ಇಡೀ ಪ್ರಕೃತಿಯ ವಾತಾವರಣವೇ ಭವ್ಯವಾಗಿದೆ, ಆಪ್ಯಾಯಮಾನವಾಗಿದೆ ಎಂದೆನಿಸುವುದು. ಆಕೆಯ ಬೆಚ್ಚಗಿನ ಪ್ರೇಮದ ಮುಕ್ತ ಅಧಿಪತ್ಯದಲ್ಲಿ ಅಕಳಂಕ ಆನಂದದ ಅನುಭವ ಆಗುವುದು. ನಿಜ ಸ್ಮೃತಿಯ ತಾಣ ಅಂದರೆ ಏನು? ಒಂದು ಸಣ್ಣ ಹಕ್ಕಿಗಾದರೋ, ಅದು ತನ್ನ ಗೂಡು, ತನ್ನ ತಾಯಿಯ ಮಡಿಲು ಆದೀತು; ಆದರೆ ಮಾನವನಿಗೆ ಹಾಗಾಗದು. ಅವನ ನಿಜ ಸ್ಮೃತಿಯ ತಾಣ ಅಂದರೆ ಪರಮಾತ್ಮನ ಅನುಭವವಾಗುವ ತಾಣ. ಮಾನವನಲ್ಲಿ ವಿಚಾರ ಶಕ್ತಿ ಮೂಡಿದಾಗಿನಿಂದ ಸತ್ಯ, ಜ್ಞಾನ, ಬೆಳಕು, ಸ್ವಾತಂತ್ರ್ಯ, ಪರಮಾತ್ಮನ ತುಡಿತ ಅವಿರತವಾಗಿ ಇದೆ. ಅದು ಎಲ್ಲಿಯೂ, ಯಾವ ಧರ್ಮ,

ಮತ, ಪಂಥ, ಜಾತಿ, ಸಿದ್ಧಾಂತ ಎಲ್ಲಿಯೂ ದೊರೆಯದು ಎಂಬ ಸತ್ಯವೂ ಗೊತ್ತಾಗಿದೆ. **'ಸಾವಿತ್ರಿ'**ಯಲ್ಲಿ ಮಾತ್ರ ಅದು ಸಿಗುವುದು ಎಂಬ ಅರಿವೂ ಆಗಿದೆ. ಅದೇ ನಿಜ ಸ್ಮೃತಿಯ ತಾಣ ಎಂಬ ನಂಬಿಕೆ ಗಟ್ಟಿಯಾಗಿದೆ. ಸಾಗರ ಸಮ ಆಳವಾದ ಅನುಕಂಪ, ದೇವ ಮಂದಿರದಲ್ಲಿ ಕಾಣುವಂಥ ಅಪೂರ್ವ ಪ್ರಶಾಂತಿ – ಆಕೆಯ ಅಂತಃಸಹಾಯವು ಎಲ್ಲರಿಗಾಗಿ ಸ್ವರ್ಗದ, ಉನ್ನತ ಲೋಕಗಳ ದ್ವಾರವನ್ನು ತೆರೆದಿರಿಸುತ್ತಿತ್ತು. ಆಕೆಯ ಅಂತರಂಗದಲ್ಲಿನ ಪ್ರೇಮವು ಇಡೀ ಜಗತ್ತಿಗಿಂತ ವಿಶಾಲವಾಗಿತ್ತು. ಆಕೆಯ ಪ್ರೇಮಳ ಹೃದಯದಲ್ಲಿ ಇಡೀ ಜಗತ್ತೇ ಆಶ್ರಯ ಪಡೆಯಬಹುದಾಗಿತ್ತು.

**ಡಾ॥ ಬಿ.ಆರ್. ಭೀಡ್**

ಮೃತ್ಯು ಕೂಡ ಪರಮಾತ್ಮನ ಸಂಕಲ್ಪವೇ, ಪ್ರಚ್ಛನ್ನ ರೂಪವೇ. ಅದು ಕೂಡ ಕಾಲಾತೀತವಾದ ಶಕ್ತಿಯೇ. ಪರಮಾತ್ಮನ ಶಕ್ತಿ ಎರಡೂ ರೂಪದಲ್ಲಿ ಕೆಲಸ ಮಾಡುತ್ತದೆ – ಕೆಲ ಸಲ ಪರಸ್ಪರ ಪೂರಕವಾಗಿ, ಕೆಲ ಸಲ ಪರಸ್ಪರ ವಿರುದ್ಧವೆನ್ನುವಂತೆ – ಆದರೆ ಮಾನವನ ಮನಸ್ಸು ಎರಡು ಪರಸ್ಪರ ವಿರುದ್ಧ ಧ್ರುವಗಳನ್ನು ಒಂದೇ ಎಂಬ ಏಕೋ ಭಾವದಿಂದ ನೋಡಲು ಸಾಧ್ಯವಿಲ್ಲವಾಗಿ, ಹಾಗೆ ಒಪ್ಪಿಕೊಳ್ಳುವುದಿಲ್ಲ. ಪರಮಾತ್ಮನ ಕಾಲ ರಹಿತವಾದ ಈ ಮೃತ್ಯು ಎಂಬ ಮುಸುಕು ಹೊದ್ದು ನಿಜಸ್ವರೂಪ ಕಾಣದಂತೆ ಮರೆ ಮಾಡಿಕೊಂಡಿರುವ ಸಂಕಲ್ಪವನ್ನು ಮಣಿಸಬಲ್ಲ, ಬದಲಾಯಿಸಬಲ್ಲ ಅದ್ಭುತ ಮಾಂತ್ರಿಕ ಲಿವರ್ ಅಥವಾ ಸನ್ನೆಗೋಲು ಹಠಾತ್ತನೆ ಸಾವಿತ್ರಿಗೆ ದೊರಕಿದಂತಾಯಿತು. ಒಂದು ಪ್ರಾರ್ಥನೆ, ಒಂದು ಮಹತ್ಕಾರ್ಯ ಮತ್ತು ಒಂದು ಶ್ರೇಷ್ಠ ಭಾವವು ಮಾನವನ ಶಕ್ತಿಯನ್ನು ವಿಶ್ವಾತೀತ ಶಕ್ತಿಯ ಜೊತೆ ಸೇರಿಸಿ ಬೆಸೆಯಬಲ್ಲದು. ಲೀವರ್ ಅಂದರೆ ಭಾರವಾದ ಗುರುತರವಾದ ಕೆಲಸವೊಂದನ್ನು ಸುಲಭವಾಗಿ ಮಾಡಬಲ್ಲ ಸಣ್ಣ ಸಾಧನ. ಉಪಕರಣ ನೋಡಲೇನೋ ತುಂಬ ಚಿಕ್ಕದು, ಆದರೆ ಮಹತ್ತರವಾದ ಕೆಲಸವನ್ನು ಸಾಧಿಸಿ ಕೊಡುವ ಸರಳ ಸಾಧನ, ಉಪಕರಣ ಅಥವಾ ವಿಧಾನ.

(*"ಭೂಮಿಯ ಹೊರಗೆ ಒಂದು ಸಣ್ಣ ಸಣ್ಣ ಜಾಗೆ ಕೊಟ್ಟರೆ ಸಾಕು ನಾನು ಇಡೀ ಭೂಮಿಯನ್ನು, ಪೃಥ್ವಿಯನ್ನು ಒಂದು ಸಣ್ಣ ಸನ್ನೆಗೋಲಿನ ಸಹಾಯದಿಂದ ಎತ್ತಿ ಬಿಡಬಲ್ಲೆ"* ಎಂದು ಆರ್ಕಿಮಿಡೀಸ್ ಹೇಳಿದ್ದನೆಂದು ಹೇಳಲಾಗುವ ವಾಕ್ಯವನ್ನು ಇಲ್ಲಿ ನೆನಪಿಸಿಕೊಳ್ಳಬಹುದು.)

ಯಾವಾಗ ಮಾನವನ ಶಕ್ತಿ ಹಾಗೂ ವಿಶ್ವಾತೀತ ಪರಾತ್ಪರ ಸಂಕಲ್ಪ ಒಂದಾಗುವುವೋ ಆಗ ಪವಾಡ ಅಥವಾ ಚಮತ್ಕಾರ ಅನ್ನುವುದು ಸಾಮಾನ್ಯ ನಿಯಮವೆಂಬಂತೆ ತೋರುವುದು. ವಿಶೇಷ ಅಥವಾ ಅಚ್ಚರಿ ಅನ್ನುವುದು ಹೋಗಿ ಬಿಡುವುದು. ಒಂದು ಮಹತ್ಕಾರ್ಯ ಸಾಕು ಜಗದ ಗತಿಯನ್ನೇ ಬದಲಾಯಿಸಿ ಬಿಡುವುದು. ಸಮರ್ಥವಾದ ಏಕೈಕ ವಿಚಾರವು, ಮನಃ ಸಂಕಲ್ಪವು ಸರ್ವಶಕ್ತವಾಗಿ ನಿಲ್ಲುವುದು. ಒಂದು ವಿಚಾರವು ಸರ್ವಶಕ್ತವಾಗಿ ನಿಲ್ಲುವುದು ಸಾಧ್ಯವೇ?

ಇದೆಲ್ಲ ಸರಿ, ಇದು ಯಾವಾಗ? ಮಾನವನ ಸಂಕಲ್ಪದ ಜೊತೆಗೆ ಪರಮಾತ್ಮನ ಸಂಕಲ್ಪ ಬೆರೆತಾಗ! ಆದರೆ ಈಗಿನ ಪರಿಸ್ಥಿತಿ ಹೇಗಿದೆ? ಪ್ರಕೃತಿ ಒಂದು ಮಹಾ ಯಂತ್ರ, ಜೀವ ನಿರ್ಜೀವ ಏನೇ ಇರಲಿ ಎಲ್ಲವೂ ವಿಶ್ವವೆಂಬ ಯಂತ್ರದ ಬಿಡಿ ಭಾಗಗಳಂತೆ. ಯಾವ ಭಾಗವೂ ತನ್ನಷ್ಟಕ್ಕೆ ತಾನು ಪೂರ್ಣವಲ್ಲ, ಮಹತ್ವದ್ದಲ್ಲ, ಆದರೆ ಯಾವುದೂ ನಗಣ್ಯವಲ್ಲ, ಮುಖ್ಯವೋ ಅಮುಖ್ಯವೋ ಅವಶ್ಯವಾಗಿ ಬೇಕೇಬೇಕು. ಎಲ್ಲವೂ ಸೇರಿ ಜಡ ಭೌತಿಕದ ನಿಯಮಗಳಿಗೆ ಸದಾ ಅಧೀನವಾಗಿಯೇ ಕಾರ್ಯ ನಿರ್ವಹಿಸುತ್ತವೆ. ಜಡದಲ್ಲಿ ನಿಯಮಗಳು ಅನಾದಿ, ಅನಾದಿ ಕಾಲದಿಂದ ಅವುಗಳ ಅತಿ ಕಠೋರವಾದ ಶಾಸನ ಜಾರಿಯಲ್ಲಿ ಇದೆ. ಪ್ರಕೃತಿಯ ಬದಲಾಗದ ರೂಢಿಗಳು, ಅಭ್ಯಾಸ ಇವೇ ನಿಯಮಗಳ ಅಣಕುಗಳಾಗಿ ಕುಳಿತಿವೆ. ಪ್ರಕೃತಿಯ ಸಾಮ್ರಾಜ್ಯ ಈಗ ಒಂದು ಪ್ರಶ್ನೆ ಇಲ್ಲದ ಕಿವುಡು ಶಾಸನವಾಗಿ ಬಿಟ್ಟಿದೆ. ಅದು ಮಾನವನ ಸ್ವತಂತ್ರ ಇಚ್ಛೆ, ಸಂಕಲ್ಪಕ್ಕೆ ಮಾರಕವಾಗಿ ಕುಳಿತಿದೆ.

ಮಾನವನೂ ಒಂದು ಯಂತ್ರವೇ, ಅನೇಕ ಯಂತ್ರಗಳ ನಡುವೆ, ವಿಶ್ವವೆಂಬ ಬೃಹತ್ ಯಂತ್ರದ ಭಾಗವಾಗಿ ಸ್ವತಃ ತಾನೂ ಒಂದು ಯಂತ್ರವೇ ಆಗಿ ಇದ್ದಾನೆ. ಅವನ ಮಿದುಳು ಒಂದು ಪಿಸ್ಟನ್ ಪಂಪಿನಂತೆ ಕೆಲಸ ಮಾಡುತ್ತದೆ, ಅನೇಕ ವಿಚಾರಗಳನ್ನು ಅವಿರತವಾಗಿ ಚಿಮ್ಮಿಸುತ್ತಲೇ ಇರುತ್ತದೆ. ಹೃದಯವು ತನ್ನ ನಿರಂತರ ಮಿಡಿತಗಳ ಮೂಲಕ ವಿವಿಧ ಭಾವನೆಗಳನ್ನು, ಪ್ರೇಮ, ಪ್ರೀತಿ, ದಯೆ ಮುಂತಾದ ಸಂವೇದನೆವಗಳನ್ನು ಅಭಿವ್ಯಕ್ತಗೊಳಿಸುತ್ತದೆ. ಪ್ರಜ್ಞಾರಹಿತವಾದ ಶಕ್ತಿಯೊಂದು ಇವೆಲ್ಲವುಗಳಿಗೆ ಆತ್ಮ ಅಥವಾ ಸ್ವಂತಿಕೆಯನ್ನು ಕಲ್ಪಿಸಿ ಕೊಡುತ್ತದೆ. "ಪ್ರಜ್ಞಾರಹಿತವಾದ ಶಕ್ತಿ" ಎಂದೇಕೆ ಹೇಳುತ್ತಿದ್ದಾರೆ? ಮುಖ್ಯವಾಗಿ ಇಲ್ಲಿ ಗಮನಿಸಬೇಕಾದ ಸಂಗತಿ ಏನೆಂದರೆ, soul ಎಂಬ ಶಬ್ದವನ್ನು ನಾವು ತಿಳಿದುಕೊಳ್ಳುವ ಆತ್ಮ ಎಂಬ ಅರ್ಥದಲ್ಲಿ ಬಳಸಿಲ್ಲ. ಅದನ್ನು ಅಹಂ ವ್ಯಕ್ತಿತ್ವ ಎಂಬ

ಅರ್ಥದಲ್ಲಿ ಬಳಸಿದ್ದಾರೆ. ಮಾನವನ ಸೃಷ್ಟಿಯ ಜೊತೆ ಜೊತೆಗೆ ಅವನ ವೈಯಕ್ತಿಕತೆಯೂ ಬೆಳೆಯದಿದ್ದರೆ ವಿಕಾಸ ತತ್ವಕ್ಕೆ ಅವಕಾಶವೇ ಇರುವುದಿಲ್ಲ. ಅಂತಲೇ ಮಾನವನು ಕೂಡ ಪ್ರಾಣಿಗಿಂತ ಬಹು ಭಿನ್ನವಾಗಿರದೇ ಹೋದರೂ ಅವನಲ್ಲಿ ಸ್ವಂತಿಕೆ ಅಥವಾ ವೈಯಕ್ತಿಕತೆ ಇದೆ. ಪ್ರಾಣಿಗಳಲ್ಲಿ ವೈಯಕ್ತಿಕ ಪ್ರಜ್ಞೆ ಇರುವುದಿಲ್ಲ, ಅವುಗಳಲ್ಲಿ ಇರುವುದು ಸಮೂಹ ಪ್ರಜ್ಞೆ group mentality. ಮಾನವನ ನಿರ್ಮಾಣವಾದ ಮೇಲೆ ವೈಯಕ್ತಿಕ ಪ್ರಜ್ಞೆ ಮೂಡಿದೆ. ಇದನ್ನು ನಾವು ಅಹಂ ego-person ಎಂದು ಕರೆಯುತ್ತೇವೆ. ಇದು ಏಕತೆಗೆ ವಿರೋಧವೆಂಬಂತೆ ತೋರಿದರೂ ಇದು ವಿಶ್ವ ವಿಕಾಸದ ಯೋಜನೆಯಲ್ಲಿ ಬಹು ಮುಖ್ಯ ಪಾತ್ರ ವಹಿಸುತ್ತದೆ. ಆದರೆ ಅಹಂ ಎಂಬುದು ಅಜ್ಞಾನದ ಅಥವಾ ಅವಿದ್ಯೆಯ ಸೃಷ್ಟಿ. ಇದರ ಮೂಲ ಇರುವುದು ಅಚೇತನದ ಸ್ತರದಲ್ಲಿ. ಆದ್ದರಿಂದ ವೈಯಕ್ತಿಕತೆ, ಸ್ವಂತಿಕೆ, ಅಹಂ, ಅಥವಾ ವೈಯಕ್ತಿಕ ಆತ್ಮವನ್ನು ಅಚೇತನವು ಕಲ್ಪಿಸುತ್ತದೆ ಎಂದು ಹೇಳುತ್ತಿದ್ದಾರೆ. ಈ ಜಗದ ಲಕ್ಷಣಗಳು, ನಡೆ, ಹೊರಳು, ತಿರುವು ಮತ್ತು ಪ್ರಕ್ರಿಯೆಯನ್ನು ಆಳವಾಗಿ ಪರಿಶೀಲಿಸಿದರೆ, ಇದೆಲ್ಲ ಒಂದು ಆಕಸ್ಮಿಕ ಎಂಬಂತೆ ಭಾಸವಾಗುತ್ತದೆ; ಆಕಸ್ಮಿಕ ಅಂದರೆ ಕೇವಲ ಆಕಸ್ಮಿಕ ಅಲ್ಲ, ಪರಸ್ಪರ ಅವಲಂಬಿತವಾಗಿರುವ, ನಿರ್ದಿಷ್ಟ ಸಂಬಂಧ ಇರುವ ಆಕಸ್ಮಿಕಗಳ ಸರಣಿ ಎಂದು ತೋರುತ್ತದೆ. ಹಾಗೂ ಇಲ್ಲಿ ಆಕಸ್ಮಿಕಗಳು ಅಭ್ಯಾಸ ಬಲದಿಂದ ಎಂಬಂತೆ ಭೌತಿಕದ ಗಟ್ಟಿಗಂಭದ ಸುತ್ತ ಪುನರಾವರ್ತಿಸುತ್ತ ಹೋಗುತ್ತವೆ ಎಂದೂ ಅರ್ಥವಾಗುತ್ತದೆ. “ಆಕಸ್ಮಿಕಗಳ ಸರಣಿ, ಪರಸ್ಪರ ಸಂಬಂಧವಿರುವ ಆಕಸ್ಮಿಕಗಳು” ಅಂದರೆ ಏನು? ಆಕಸ್ಮಿಕಗಳ ನಡುವೆ ಸಂಬಂಧ ಇರುವುದಾದರೆ ಅವು ಆಕಸ್ಮಿಕ ಹೇಗಾಗುತ್ತದೆ? tied Chance ಅಂದರೆ ಏನು? ಆಕಸ್ಮಿಕಗಳು ಇರುವುದೂ ನಿಜ, ಹಾಗೆಯೇ ಪರಸ್ಪರ ಸಂಬಂಧಿತ ಅಥವಾ ಸಹೇತುಕ (ಕಾರಣವುಳ್ಳ) ಆಕಸ್ಮಿಕಗಳಿರುವುದೂ ನಿಜ. ಇದೇ ಅನಿಶ್ಚಿತತೆಯ ಸಿದ್ಧಾಂತದ ಮೂಲ. ಇದು ವಿಜ್ಞಾನದ ಯುಗ, ನೀವು ಯಾವುದೇ ಸಿದ್ಧಾಂತ ಮಂಡಿಸಿದರೂ ಅದಕ್ಕೆ ಗಣಿತದ ಆಧಾರ ಇರಲೇಬೇಕು. ಆದರೆ ವಿಶ್ವದ ವಿವಿಧ ವ್ಯಾಪಾರಗಳಿಗೆ ಇಂಥ ಕರಾರುವಕ್ಕಾದ ಗಣಿತದ ತಳಹದಿ ಇದೇಯೇ? ಇದ್ದರೆ, ಗಣಿತದ ಪ್ರಕಾರ ವಿಶ್ವದ ಎಲ್ಲ ಆಗುಹೋಗುಗಳನ್ನು ಮುಂದಾಗಿಯೇ ಗಣಿಸಬಹುದಲ್ಲ! ಮಹಾ ಸಮನ್ವಯ ಸಿದ್ಧಾಂತವು Grand Unified Theory ಈ ದೃಷ್ಟಿಕೋನದಿಂದಲೇ ಹುಟ್ಟಿತಾದರೂ ಇದರಿಂದ ಎಲ್ಲ ಸಂಗತಿಗಳನ್ನು ವಿವರಿಸಬಹುದೇ ಹೊರತು

ಮುಂದಾಗಿ ಗುರುತಿಸಲು ಸಾಧ್ಯವಾಗುವುದಿಲ್ಲ. ನಮ್ಮ ಸುತ್ತ ಕಾಣುವ ಅತ್ಯಂತ ಕ್ಷುಲ್ಲಕವೆಂದು ತೋರುವ ಸಂಗತಿಗಳು ಕೂಡ ತುಂಬ ಜಟಿಲ, ಗಹನವಾಗಿರುವುದನ್ನು ನೋಡಿದರೆ ಅಂಥ ಸುಲಭ, ಸರಳವಾದ ಸೂತ್ರ ಅಥವಾ ನಿಯಮ ಇದೆ ಎಂದೇನೂ ಅನಿಸುವುದಿಲ್ಲ. ಮಹಾ ಸಮನ್ವಯ ಸಿದ್ಧಾಂತದ ಪ್ರಕಾರ, ಎಲ್ಲವನ್ನೂ ಗಣಿತೀಕರಿಸಬಹುದು, ಎಲ್ಲವೂ ಪರಿಪೂರ್ಣ ಗಣಿತದ ಆಧಾರದ ಮೇಲೆಯೇ ನಡೆಯುವುದು ಎನ್ನುವುದು ನಿಜವಾದರೆ, ನಾವು ಯಾವ ವಿಷಯವಾಗಿ ಏನು ನಿರ್ಧಾರ ಮಾಡುವೆವೋ ಅದು ಕೂಡ ಆ ಮೊದಲೇ ನಿರ್ಧಾರ ಆಗಿರಬೇಕು ಎಂದಾಗುವುದು, ಹಾಗಾದಾಗ ಅದು ನಮ್ಮ ನಿರ್ಧಾರ ಹೌದೋ ಅಲ್ಲವೋ ಎಂದು ಹೇಳುವುದು ಹೇಗೆ? ಜಗತ್ತಿನಲ್ಲಿ ಎಷ್ಟು ಬಗೆಯ ಸಿದ್ಧಾಂತಗಳು ಇವೆಯೋ, ಭಿನ್ನಾಭಿಪ್ರಾಯ, ವಿರೋಧ ಇವೆಯೋ ಅವೆಲ್ಲವೂ ಸರಿ, ಎಲ್ಲವೂ ನಿರ್ಧಾರಿತ ಎಂದೇ ಹೇಳಬೇಕಾಗುವುದು. ಇಲ್ಲವಾದರೆ ವ್ಯತಿರಿಕ್ತವಾಗಿ, ಎಲ್ಲವೂ ಪೂರ್ವ ನಿರ್ಧಾರಿತವಲ್ಲ ನಮ್ಮ ನಮ್ಮ ನಿರ್ಣಯಗಳು ಆಕಸ್ಮಿಕಗಳನ್ನು ಸೃಷ್ಟಿಸುತ್ತವೆ ಎಂದು ಹೇಳಿದರೆ, ವಾಸ್ತವದಲ್ಲಿ ಹಾಗೆ ಕಂಡುಬರುವುದಿಲ್ಲ. ನಮಗೆ ತೋಚಿದಂತೆ ಯಾವಾಗಲೂ ಮಾಡಲು ನಮಗೆ ಸಾಧ್ಯವಿಲ್ಲ, ಅಂಥ ಸಂಪೂರ್ಣ ಸ್ವಾತಂತ್ರ್ಯ ನಮಗೆ ಇಲ್ಲ. ನಮಗೆ ತೋಚಿದಂತೆ ಮಾಡಲು ನಮಗೆ ಸಾಧ್ಯವಾಗುವುದಿಲ್ಲ ಎಂದಾದರೆ, ನಮ್ಮ ಕಾರ್ಯಗಳಿಗೆ ನಾವು ಹೇಗೆ ಹೊಣೆಗಾರರಾಗುತ್ತೇವೆ? ಇಂಥ ವಿರೋಧಾಭಾಸದ ವಿಚಾರಗಳನ್ನು ಕುರಿತು ಸಾವಿರಾರು ಪುಟಗಳಷ್ಟು ಚರ್ಚೆ ಆಗಿದೆ, ಆದರೆ ಯಾವ ವಿಚಾರಕ್ಕೂ ನಿಖರವಾದ ವೈಜ್ಞಾನಿಕ ವಿವರಣೆ ಅಥವಾ ತಳಹದಿ ಸಿಕ್ಕಿಲ್ಲ. ಕ್ವಾಂಟಮ್ ಮೆಕ್ಯಾನಿಕ್ಸನ ಅನಿರ್ದಿಷ್ಟತೆಯ ತತ್ವವೇ ತುಸು ಸಮಾಧಾನಕರವಾಗಿದೆ. ಇದರ ಪ್ರಕಾರ ವಸ್ತುವಿನ ಸ್ಥಿತಿ ಹಾಗೂ ಗತಿ ಎರಡನ್ನೂ ಏಕಕಾಲಕ್ಕೆ ನಿಖರವಾಗಿ ಅಳೆಯಲು ಸಾಧ್ಯವಿಲ್ಲ. ದ್ರವ್ಯವೊಂದರ ಸ್ಥಿತಿ ಅಳೆಯುವಾಗ ಗತಿಯ ಲೆಕ್ಕ ತಪ್ಪುತ್ತದೆ, ಗತಿಯನ್ನು ಅಳೆಯುವಾಗ ಸ್ಥಿತಿಯ ಲೆಕ್ಕ ತಪ್ಪುತ್ತದೆ. ಈ ಅನಿಶ್ಚಿತತೆಯು ಆಕಾಶ ಕಾಯದಂಥ ಅತಿ ದೊಡ್ಡ ವಸ್ತುಗಳನ್ನು ಅಳೆಯುವಾಗ ಅಷ್ಟು ವ್ಯತ್ಯಾಸವೆನಿಸುವುದಿಲ್ಲ, ಆದರೆ ಬ್ರಹ್ಮಾಂಡದ ಆರಂಭದ (ಅದು ಅನಾದಿ ಎಂದು ಹೇಳುವುದರ ಅರ್ಥವೇನೆಂದರೆ, ಅದರ ಆರಂಭವನ್ನು ಯಾರೂ ಯಾವ ಕಾಲಕ್ಕೂ ತಿಳಿದುಕೊಳ್ಳಲಾರರು) ದೆಶೆಯಲ್ಲಿ ಎಲ್ಲ ವಸ್ತುಗಳು ಬಹು ಹತ್ತಿರ ಹತ್ತಿರದಲ್ಲಿಯೇ ಇದ್ದವಲ್ಲ, ಆವಾಗಲೇ ಈ ಅನಿಶ್ಚಿತತೆಯ ತತ್ವ ಇತ್ತು ತಾನೇ?

ಅಂತೆಯೇ ಯಾವಾಗಲೂ ಅನೇಕ ಸಿದ್ಧಾಂತಗಳು, ವಾದವಿವಾದಗಳು, ಇತಿಹಾಸಗಳು ಚರ್ಚೆಯಲ್ಲಿ ಇದ್ದೇ ಇರುತ್ತವೆ. ಇದನ್ನು ಶುದ್ಧ ವಿಜ್ಞಾನ ಅಧ್ಯಯನ ಮಾಡಿದವರು ಬಲು ಚೆನ್ನಾಗಿ ವಿವರಿಸಬಲ್ಲರು. ಒಟ್ಟಿನಲ್ಲಿ, ಶ್ರೀ ಅರವಿಂದರು *a tied Chance repeating her old step*s ಎಂದು ಹೇಳುವುದರ ಮುಖಾಂತರ ಪರ್ಯಾಯವಾಗಿ ಅನಿಶ್ಚಿತತೆಯ ಸಿದ್ಧಾಂತವನ್ನೇ ಸೂಚಿಸುತ್ತಿದ್ದಾರೆ ಎಂದು ಹೇಳಬಹುದು.

ವಿಶ್ವದಲ್ಲಿ ಎಲ್ಲ ಸಂಗತಿಗಳು, ಘಟನೆಗಳು ಪರಸ್ಪರ ಸಂಬಂಧಿತವಾಗಿದ್ದರೂ ಅವುಗಳ ನಡುವಣ ಸಂಬಂಧ ಏನೆಂಬುದು ಖಚಿತವಾಗಿ ಹೇಳಲಾಗುವುದಿಲ್ಲ. ಹೀಗಾಗಿ ಒಂದೊಂದಾಗಿ ನೋಡಿದರೆ ಪ್ರತಿ ಸಂಗತಿಯೂ ಸ್ವತಂತ್ರ, ಹಿಂದಿನದಕ್ಕೆ ಮುಂದಿನದಕ್ಕೆ ಹೋಲಿಸಿದಾಗ ವಿಸಂಗತ ಎಂದು ತೋರುತ್ತವೆ. ಅಂತೆಯೇ ತರ್ಕವು ಅವುಗಳ ನಡುವಣ ಕೊಂಡಿಯೇ ಒಂದು ರೀತಿಯ ಭ್ರಮೆ ಎಂದು ಹೇಳುವ ಪ್ರಯತ್ನ ಮಾಡುತ್ತದೆ. ಅದು ತನ್ನದೇ ಆದ ತರ್ಕವನ್ನು ಮುಂದೊಡ್ಡುತ್ತದೆ. ಸ್ಥೂಲ ಪ್ರಾಣ ತತ್ವವು ಇಲ್ಲಿನ ಜೀವನದಲ್ಲಿ ಏನನ್ನೋ ಹುಡುಕುವ, ತನ್ನ ಜೀವಿತದ ಸಾರ್ಥಕತೆಯನ್ನು ಕಾಣುವ ಪ್ರಯತ್ನ ಮಾಡುತ್ತದೆ. ಅಥವಾ ಇದೆಲ್ಲ ಅಜ್ಞಾನದ ಮನಸ್ಸಿನ ಮಹಾ ಕಾರ್ಯವಿದ್ದಿರಲೂ ಬಹುದು, ಖಚಿತವಾಗಿ ಹೇಳಲಾಗದು ಎಂದು ಪ್ರತಿಪಾದಿಸುತ್ತದೆ. ಇಲ್ಲಿ ಪುನಃ ಅನಿಶ್ಚಿತತೆಯ ಪ್ರಸ್ತಾಪ ಬಂದಿದೆಯಾಗಿ ಮತ್ತೊಮ್ಮೆ ಅದನ್ನು ಕುರಿತು ತುಸು ಆಲೋಚನೆ ಮಾಡೋಣ. ಹಾಗಾದರೆ ಶ್ರೀ ಅರವಿಂದರೂ ಸಹ ಅನಿಶ್ಚಿತತೆಯ ತತ್ವವನ್ನೇ ಪ್ರತಿಪಾದನೆ ಮಾಡುತ್ತಾರೆಯೇ ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಇಲ್ಲ. ಇದು ಸಾಮಾನ್ಯ ಮನುಷ್ಯನು ಆಲೋಚಿಸುವ ರೀತಿ, ಅಂದರೆ ಕೇವಲ ಸಿದ್ಧಾಂತಗಳ ಮೇಲೆ ಸಿದ್ಧಾಂತ, ಪ್ರಯೋಗಗಳ ಮೇಲೆ ಪ್ರಯೋಗ, ಹೊಸ ಹೊಸ ಸಂಶೋಧನೆ ಹೀಗೆ ನಿರಂತರವಾಗಿ ಪ್ರಯತ್ನ ಮಾಡುವ ಮಾನವನ ಮನಸ್ಸು ಒಂದು ನಿರ್ಣಯಕ್ಕೆ ಬರುವುದಿಲ್ಲ. ಅದು ವಿಭಜನೆ, ಪೃಥಕ್ಕರಣ, ಸೀಮಿತತೆ ಇವುಗಳ ಮೂಲಕವೇ, ಹಾಗೂ ತನಗೆ ಯಾವುದು ಸರಿ ಕಾಣುವುದೋ ಅದೊಂದನ್ನೇ ಎತ್ತಿ ಹಿಡಿದು ಉಳಿದುದೆಲ್ಲವನ್ನು ಸಾರಾಸಗಟಾಗಿ ತಿರಸ್ಕರಿಸಿ ಬಿಡುವ ಸ್ವಭಾವವನ್ನು ಹೊಂದಿರುವದರಿಂದ ಅದು ಸದಾ ಅನಿಶ್ಚಿತತೆಯಲ್ಲಿಯೇ ತೊಳಲಾಡುತ್ತದೆ. ಮನಸ್ಸಿಗಿಂತ ಹೆಚ್ಚಿನ, ಹಿರಿದಾದ, ಉನ್ನತವಾದ ತತ್ವ ಕೆಳಗಿಳಿದು ಬರದ ವಿನಃ ಈ ರಹಸ್ಯ ಬಯಲಾಗುವುದಿಲ್ಲ.

ಆದರೆ ವಿವೇಕ, ವಿಜ್ಞಾನ, ಜ್ಞಾನ ಅಂತರಂಗದಲ್ಲಿ ಬೆಳೆಯುತ್ತ ಹೋಗುತ್ತದೆ. ಅದಕ್ಕನುಸಾರವಾಗಿ ದರ್ಶನ ಸಾಮರ್ಥ್ಯ ಕೂಡ ಬೆಳೆಯುತ್ತದೆ. ಪ್ರಕೃತಿಯ ಎಲ್ಲ ರಹಸ್ಯಗಳು ಒಂದೊಂದಾಗಿ ಬಯಲಾಗುತ್ತವೆ. ಪ್ರಕೃತಿಯ ಉಪಕರಣವಾದ ಅಜ್ಞಾನವು ಮಾನವನ್ನು ಪ್ರಕೃತಿಯ ಅಧಿಪತಿಯನ್ನಾಗಿ ಮಾಡುತ್ತದೆ. ಮಾನವನೂ ಕೂಡ ಪ್ರಕೃತಿಯ ಉಪಕರಣವೇ, ತನ್ನ ಉಪಕರಣವನ್ನೇ ಅದು ತನ್ನ ಪ್ರಭುವಾಗಿ ಒಪ್ಪಿಕೊಳ್ಳುತ್ತದೆ. ಮಾನವನೊಳಗಿನ ಸಾಕ್ಷಿಪುರುಷ ಜಾಗೃತನಾಗುತ್ತಾನೆ. ತನ್ನೊಳಗಿನ ಚೈತನ್ಯ ಶಕ್ತಿಯ ಅರಿವಾಗುತ್ತದೆ. ಅವನ ಆತ್ಮವು ತುಸು ಹಿಂದೆ ಸರಿದು, ಪ್ರಕೃತಿಯ ಬಾಹ್ಯ ವ್ಯಾಪಾರಗಳಿಂದ ಮುಕ್ತವಾಗಿ ಶ್ರೇಷ್ಠವಾದ ಜ್ಞಾನವನ್ನು ಪಡೆದುಕೊಳ್ಳುತ್ತದೆ.

ಈ ಮಹಾ ಸತ್ಯವು ಸಾವಿತ್ರಿಗೆ ಪ್ರಖರವಾದ ಅಗ್ನಿ ಜ್ವಾಲೆಯಂತೆ ಮನದಟ್ಟಾಯಿತು. ಆಕೆಗೆ ಈ ಮಹಾ ಸತ್ಯದ ದರ್ಶನವಾಯಿತು. ಜಗತ್ತಿನ ಇತಿಹಾಸದಲ್ಲೇ ಇದು ಅಪೂರ್ವವಾದ ದಿನ. ಮಾನವನಿಗಾಗಿ ಸಾವಿತ್ರಿ ಒಂದು ಮಹಾ ಯುದ್ಧವನ್ನು ಗೆದ್ದಂತಾಯಿತು. ಗೆದ್ದಂತೆ ಅಲ್ಲ, ಗೆದ್ದಳು. ಮಹಾ ವಿಜಯ ಸಾಧಿತವಾಯಿತು. ವಿಜಯಲಕ್ಷ್ಮಿ ಸಾಕ್ಷಾತ್ ಆಗಿ ಸಾವಿತ್ರಿಯ ಮೂಲಕ ಪ್ರಕಟವಾದಳು.

ಸಾವಿತ್ರಿಯಲ್ಲಿ ಈಗ ಸಾಕ್ಷಾತ್ ಜಗಜ್ಜನನಿ, ಜಗನ್ಮಾತೆ, ಸರ್ವ ಲೋಕಗಳ ತಾಯಿಯೇ ಜಾಗೃತಳಾದಳು. ಜೀವಂತಿಕೆಯಿಂದ ಕೂಡಿದ ಆಯ್ಕೆಯು ವಿಧಿಯ ಮೂಕ, ನಿರ್ದಯ ನಡೆಯನ್ನು ಪಲ್ಲಟಗೊಳಿಸಿತು. ಸಾವಿತ್ರಿಯ ಆಯ್ಕೆ ಜೀವಂತವಾದ ಆಯ್ಕೆ; ಆಲೋಚನೆ ಮಾಡಿ, ವಿಮರ್ಶೆ ಮಾಡಿ, ಅಳೆದು ತೂಗಿ ತೆಗೆದುಕೊಂಡ ನಿರ್ಣಯ ಅಲ್ಲ, ಅದು ಅಂತರ್ಬೋಧೆಯಿಂದ ಬಂದ ನಿರ್ಣಯ. *"ನನ್ನ ಹೃದಯ ಒಮ್ಮೆ ಆಯ್ದುಕೊಂಡ ಮೇಲೆ ಮುಗಿಯಿತು, ಅದು ಎರಡನೆಯ ಬಾರಿ ಆಯ್ಕೆ ಮಾಡುವುದಿಲ್ಲ. ನಾನು ಆಡಿದ ಶಬ್ದ ಅಳಿಸಿಹೋಗದು, ಯಾರೂ ಅಳಿಸಲಾರರು. ಅದು ಭಗವಂತನ ದಾಖಲೆಗಳ ಪುಸ್ತಕದಲ್ಲಿ ಸೇರಿಬಿಟ್ಟಿದೆ." ವಿಧಿಯ ನಿಯಮವೇ ಬದಲಾದೀತೇ ವಿನಃ ನನ್ನ ಆತ್ಮದ ನಿರ್ಣಯ ಬದಲಾಗದು.* ಇದು ಅಂತರ್ಬೋಧೆಯಿಂದ ಬಂದ ಮಾತು, ಶಬ್ದ. ಇದು ಅಂತಿಮ, ಇದಕ್ಕೆ ಎದುರಿಲ್ಲ. ಇದು ವಿಧಿಯನ್ನು ಬದಲಿಸಬಲ್ಲದು. ಅಂಥ ಅದ್ಭುತ ಶಕ್ತಿ ಅಂತಃಸ್ಫೂರ್ತಿಯ ಶಬ್ದಗಳಲ್ಲಿ ಇರುತ್ತದೆ. ನಾವು ವಿಸಂಗತ, ಅಸಂಗತ,

ಅಸಂಬದ್ಧ, ಪರಸ್ಪರ ಸಂಬಂಧವೇ ಇಲ್ಲದ ಆಕಸ್ಮಿಕಗಳ ಸರಣಿ ಎಂದು ಹೇಳುವ ಜಗದ ಪ್ರತಿ ಹೆಜ್ಜೆಯಲ್ಲೂ ಚೈತನ್ಯದ ಪ್ರಭಾವ ಇರುವುದನ್ನು ಸಾವಿತ್ರಿಯ ನಿರ್ಣಯ ಹಾಗೂ ಸಾಧನೆ ಶ್ರುತಪಡಿಸಿತು. ಕಾಲದ ನಿರರ್ಥಕ ಪರಿಭ್ರಮಣವನ್ನು, ಸಾವಿನ ಅರ್ಥ ಹೀನ ಚಕ್ರವನ್ನು ಆಕೆಯ ಸಂಕಲ್ಪ ತಡೆದು ನಿಲ್ಲಿಸಿದ್ದಲ್ಲದೆ ಹಿಂದಕ್ಕೆ ಉರುಳುವಂತೆ ಮಾಡಿತು. ಸಾವಿನ ಅವಶ್ಯಕತೆಯು ಕೊನೆಗೊಂಡಿತು. ಅನಿವಾರ್ಯವೆಂಬಂತೆ ತೋರುವ ಅದರ ಆಭಾಸಿಕ ನಡೆಗೆ ತಡೆ ಬಿದ್ದಿತು.

ಸಾವಿತ್ರಿ ಶಾಶ್ವತತೆಯ ಗಿರಿ ಶಿಖರಗಳಿಂದ ಅವತರಿಸಿದ ತೇಜೋಶಾಲಿಯಾದ ಯೋಧಳು. ಇದುವರೆಗೆ ಯಾರೂ ಒಳ ಪ್ರವೇಶಿಸದಂತೆ ನಿರ್ಬಂಧಿಸಿದ, ಮುಚ್ಚಿದ ಬಾಗಿಲನ್ನು ನೂಕಿ ತೆರೆಯಬಲ್ಲ ಸಾಮರ್ಥ್ಯ ಹಾಗೂ ಅನುಮತಿ ಎರಡೂ ಆಕೆಗಿದ್ದವು. ಅಂತೆಯೇ ಆಕೆ ಮೃತ್ಯುವಿನ ಮುಖವಾಡವನ್ನು ಕಳಚಿಹಾಕಿ, ಅದರ ನಿರಂಕುಶ ಅಧಿಕಾರವನ್ನು ಕಿತ್ತೊಗೆದಳು. ಮಾನವನ ಪ್ರಜ್ಞೆಯ ಹಾಗೂ ಕಾಲದ ನಿರ್ಬಂಧಗಳನ್ನು ನಾಶಪಡಿಸಿ ಆಕೆ ಮುನ್ನಡೆದಳು.

**ಶ್ರೀಮಾತೆ: (ಅನು: ಕೆ.ಎಸ್. ಅಮೂರ)**

ಪ್ರಕಟಗೊಂಡ ದೈವೀ ಪ್ರಜ್ಞೆಯನ್ನು ಪರಮೋಚ್ಚನೊಡನೆ ಏಕತ್ರಗೊಳಿಸುವುದು. ದೈವೀ ಸಾಮರ್ಥ್ಯದ ರಹಸ್ಯವಾಗಿದೆ. ಈ ಏಕತೆ ಇಡಿಯಾದದ್ದಾದಾಗ ಪ್ರಕಟವಾದ ಈ ದೈವೀ ಸಾಮರ್ಥ್ಯಕ್ಕೆ ಯಾವ ಮಿತಿಯೂ ಇರುವುದಿಲ್ಲ. ಇದು ಸತತ ಇದ್ದರೆ ಜಗತ್ತನ್ನು ಪರಿವರ್ತನೆಗೆ ಒಳಪಡಿಸಬಹುದು. ಇದನ್ನು ಸಿದ್ಧಿಸಿಕೊಂಡರೆ, ಯಾವುದನ್ನು ದೊರಕಿಸಲು ಸಹಸ್ರಾರು ವರ್ಷಗಳ ಕಾಲ ತೆಗೆದುಕೊಳ್ಳಬಹುದಾಗಿತ್ತೋ ಅಂತಹದನ್ನು ಕ್ಷಣ ಮಾತ್ರದಲ್ಲಿ ಕೈಕೊಳ್ಳಬಹುದು.

ಹೊಸ ದೈವೀ ಪ್ರಜ್ಞೆ ಜಗತ್ತನ್ನು ಕಂಡುಕೊಂಡಿದ್ದು ಈ ರೀತಿಯಲ್ಲಿ, ಮತ್ತು ಜಗತ್ತು ಆ ಸ್ಥಿತಿ ಬದಲಾಗುವುದನ್ನು ಯೋಚಿಸದೆ ಇನ್ನೂ ಅಲೆದಾಡುತ್ತಿದೆ, ಆದರೆ ವಿಷಯ–ವಸ್ತುಗಳು ಬದಲಾಗುವ ಕಾಲವೊಂದು ಬರಲಿದೆ, ಆ ಕಾಲ ಈಗ ಬಂದಿದೆ ಮತ್ತು ಮನುಷ್ಯ ಅದಕ್ಕಾಗಿ ತಯಾರಾಗಿರಬೇಕು.

ಇದು ಕೇವಲ ಸಂಭವಿಸಿದ ವಿಷಯ, ಅದಿನ್ನೂ ಸಂಭವಿಸುತ್ತಲೇ ಇದೆ. ಧೈರ್ಯ ತಂದುಕೊಳ್ಳುವುದಕ್ಕಾಗಿ ಬಹಳ ದೂರವಿರದ ಭವಿಷ್ಯದತ್ತ ನೋಡುವುದು

ಮಾತ್ರವಿದೆ. ನಾವು ನಿಧಾನವಾಗಿ ಆದರೆ ನಿಶ್ಚಿತವಾಗಿ, ಬಹುಮಟ್ಟಿಗೆ ಹತಾಶವಾದ, ಭೂತಕಾಲದಿಂದ ಭವಿಷ್ಯದತ್ತ ಬರುತ್ತಿದ್ದೇವೆ. ಭವಿಷ್ಯ ಭರವಸೆಗಳಿಂದ ತುಂಬಿಕೊಂಡಿದೆ ಮತ್ತು ದಣಿದ, ಬಳಲಿದ, ಬಹುಮಟ್ಟಿಗೆ ನಿರಾಶೆಯಲ್ಲಿರುವ ಮನುಕುಲಕ್ಕೆ ಸಿದ್ಧಿಯ ದರ್ಶನವನ್ನು ಕೊಡುತ್ತದೆ, ಆ ಸಿದ್ದಿ ಕೇವಲ ಭರವಸೆಯನ್ನಷ್ಟೇ ಮರಳಿ ತರುವುದಿಲ್ಲ, ಆದರೆ ದೈವೀ ಪ್ರಕಾಶ, ಸಾಮರ್ಥ್ಯಗಳನ್ನೂ ಕೂಡ ಮರಳಿ ತರುತ್ತದೆ.

**ಡಾ॥ ಬಿ.ಆರ್. ಭೀಡ**

ಮೇಲೆ ಕಾಣುವ ಈ ಭೌತಿಕ ಅಸ್ತಿತ್ವ, ಭೌತಿಕ ಶರೀರವೇ ಸರ್ವಸ್ವ ಅಲ್ಲ. ಆಕಾರವು ವಂಚಿಸುವಂಥದು. ವ್ಯಕ್ತಿ ಎಂದು ನಾವೇನು ಕರೆಯುವೆವೋ, ಅವನೊಂದು ಮಾರುವೇಷದ ಸ್ವರೂಪದಲ್ಲಿರುತ್ತಾನೆ. ಆದರೆ ನಮ್ಮ ಮನವು (ಸಮಸ್ತ ಮಾನವನ ಮನವು) ಮತ್ತು ವಿಕಾಸದ ಪ್ರಗತಿಯಲ್ಲಿ ಇರುವ ಮಾನವನಲ್ಲಿ ಅನೇಕ ಅಲೌಕಿಕ ಶಕ್ತಿಗಳು ರಹಸ್ಯವಾಗಿ ಇವೆ. ಮಾನವನ ಶರೀರ ನಶ್ವರವಾದುದು. ಆದರೆ ಇದನ್ನು ತೆಗೆದುಕೊಂಡೇ ಮಾನವ ಯುಗಯುಗಾಂತರ–ಗಳವರೆಗೆ ಜನ್ಮ ಜನ್ಮಾಂತರಗಳಲ್ಲಿ ಅವಿರತವಾಗಿ ಪಯಣಿಸುತ್ತಿದ್ದಾನೆ. ಅದರ ಆಂತರ್ಯದಲ್ಲಿ ಅವಿನಾಶಿಯಾದ ಪರಮಾತ್ಮನಿದ್ದಾನೆ. ಮೇಲೆ ಕಾಣುವ ವ್ಯಕ್ತಿಯು, ಆ ಭಗವಂತನ ಛದ್ಮವೇಷವಾಗಿದೆ. ಭಗವಂತನ ಜ್ವಲಂತ ಪ್ರಖರ ಅಗ್ನಿ ಜ್ವಾಲೆಯು ಮಾನವನಲ್ಲಿ ಚೈತನ್ಯ ರೂಪದಲ್ಲಿ ಅಂತರ್ನಿಹಿತವಾಗಿದೆ. ಸಾವಿತ್ರಿಯನ್ನು ನಾವು ಅರ್ಥ ಮಾಡಿಕೊಳ್ಳಲು, ಪ್ರಯತ್ನದ ಆ ಪ್ರಜ್ವಲ ಅಂಶವನ್ನು, ನಾವು ಆತ್ಮ ಎಂದು ಕರೆಯುತ್ತೇವೆ. ಆ ಆತ್ಮ ಅಥವಾ ಅಂತರಾತ್ಮವು ತನ್ನ ಸೌಂದರ್ಯ, ತನ್ನ ಆನಂದವನ್ನು ತಾನೇ ಸೃಜಿಸಿಕೊಂಡು ಹಾಗೂ ನಮ್ಮ ಸಂಗ್ರಹ ಸಾಮರ್ಥ್ಯವನ್ನೂ ಸೃಷ್ಟಿಸಿಕೊಳ್ಳುತ್ತದೆ. ತನ್ನ ಜೀವನದ ಆನಂದದ ಸ್ವರೂಪಗಳನ್ನೂ ಸಹಿತ ತಾನೇ ರೂಪಿಸಿಕೊಳ್ಳುತ್ತದೆ. ನಮ್ಮ ಮರ್ತ್ಯ ಜೀವನದ ದಾರಿದ್ರ್ಯದಲ್ಲಿ ಅಮರವಾಗಿರುವ ಅಂಶ ಅದೊಂದೇ.

ಆತ್ಮಕ್ಕೆ ತನ್ನದೇ ಯೋಜನೆ ಇದೆ, ಗುರಿ ಇದೆ, ಉದ್ದೇಶ ಇದೆ, ನಿರ್ದಿಷ್ಟ ಪಕ್ಷ ನಮ್ಮ ಮನವು, ಸಮಸ್ತ ಮಾನವನ ಮನವು ವಿಕಾಸದ ದಿವ್ಯತ್ವವನ್ನು ಕಂಡುಕೊಳ್ಳುತ್ತದೆ. ಆದರೆ ನಮ್ಮ ಮನಕ್ಕೆ ಇದರ ಬೋಧವಾಗುವುದಿಲ್ಲ. ಹೀಗಾಗಿ ನಮಗದು ರಹಸ್ಯವೇ.

ಆದರೆ ಈ ಯೋಜನೆಗನುಗುಣವಾಗಿಯೇ ಆತ್ಮವು ಕಾಲಕಾಲಕ್ಕೆ ಯಾವ ಶರೀರ ಧರಿಸಬೇಕು, ಏನು ಕಾರ್ಯ ಮಾಡಬೇಕು, ಏನು ಸಾಧನೆ ಮಾಡಬೇಕು ಎಂಬುದನ್ನು ಮೊದಲೇ ನಿಶ್ಚಯ ಮಾಡಿಕೊಂಡಿರುತ್ತದೆ. ಆದರೆ ಈ ಗುಟ್ಟು ಕೊನೆಯವರೆಗೂ ಗೊತ್ತಾಗುವದಿಲ್ಲ. ಜನ್ಮದಿಂದ ಜನ್ಮಕ್ಕೆ, ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಹೋದಂತೆಲ್ಲಾ ಆಕಾರ, ಶರೀರ ಜೀವನ ಮತ್ತು ಕಾರ್ಯ ಎಲ್ಲವನ್ನೂ ಬದಲಾಯಿಸುತ್ತ ಹೋಗುತ್ತದೆ. ಜನ್ಮದಿಂದ ಜನ್ಮಕ್ಕೆ ಹಂತ ಹಂತವಾಗಿ ನಾವು ಬೆಳೆಯುವುದನ್ನು ಕೂಡ ಗುರುತಿಸುತ್ತ ಹೋಗುತ್ತದೆ. ತೆವಳುವ ಪ್ರಾಣಿಯಿಂದ ಹಿಡಿದು ಎಲ್ಲದರಲ್ಲೂ, ಎಲ್ಲರಲ್ಲೂ ಮುಂದೆ ಮತ್ತೆ ಪ್ರಕಟವಾಗಲಿರುವ ಸತ್ಯವನ್ನು ಕೂಡ ನಿಚ್ಚಳವಾಗಿ ಕಾಣಿಸುತ್ತದೆ.

ಮಾನವನ ಜೀವನವೊಂದು ನಿಧಾನಗತಿಯ ದೀರ್ಘ ಸಿದ್ಧತೆಯಾಗಿದೆ. ಸತತ ಪ್ರಯತ್ನ, ಆಶೆ, ನಂಬಿಕೆ, ಹೋರಾಟ, ಯುದ್ಧ, ಶಾಂತಿ, ಸಮಾಧಾನ, ಎಲ್ಲವೆಲ್ಲವೂ ಬರುತ್ತ–ಹೋಗುತ್ತ ಇರುತ್ತವೆ. ಜಲಯಂತ್ರದ ಚಕ್ರದ ಹಾಗೆ ಅವು ಪುನಃಪುನಃ ಬರುವದು ಹೋಗುವದು ನಡೆದೇ ಇರುತ್ತದೆ. ಭೌತಿಕದ ಅಭದ್ರತೆಯ ಮಧ್ಯದಲ್ಲಿಯೂ ಸದ್ಯದ ಸೃಷ್ಟಿ ಮತ್ತು ನಮ್ಮ ಸಂಗ್ರಹದ ಸಾಮರ್ಥ್ಯ ದೃಷ್ಟಿಯಲ್ಲಿ ಮಾನವನು ಅತ್ಯಂತ ಉನ್ನತ ಜೀವಿ. ಆದರೆ ಅವನೀಗ ತನನ್ನು ತಾನೇ ಮೀರಿ ಬೆಳೆಯಬೇಕಾಗಿದೆ. ಹೀಗಾಗಿ ಯಾರೂ ತುಳಿಯದ ದಾರಿಯನ್ನು ಅವನು ತುಳಿಯಬೇಕಾಗಿದೆ. ಯಾರೂ ಏರಿರದ ಎತ್ತರಕ್ಕೆ ಅವನು ಏರಬೇಕಾಗಿದೆ. ಅವನು ಹುಡುಕುತ್ತಿರುವದು ದೀಪದ ಕೆಳಗಿನ ಕತ್ತಲೆಯಲ್ಲಿ. ಗುರಿ ಇಟ್ಟು ಬಿಟ್ಟ ಪಂಜಿನ ಬಾಣದ ಕೆಳಗಿನ ಮಂದ ಬೆಳಕಿನಲ್ಲಿ ಅವನು ತಡಕಾಡುತ್ತಿದ್ದಾನೆ. ಹೀಗಾಗಿ ಅವನು ಹುಡುಕುತ್ತಿರುವ ಸತ್ಯ ಅಲ್ಲಿಯೇ ಇದೆ, ಆದರೆ ಅರೆಗತ್ತಲಲ್ಲಿ ಕಾಣಲೊಲ್ಲದು. ಅವನು ಏನನ್ನು ಹುಡುಕುತ್ತಾ ಇದ್ದಾನೋ ಅಥವಾ ಯಾರಿಗಾಗಿ ಹುಡುಕಾಡುತ್ತಿದ್ದಾನೋ ಅವನು ಅಥವಾ ಅದು ಕೈಗೆ ಸಿಗುತ್ತಿಲ್ಲ. ಸತ್ಯ ಕೈ ಕೊಡುತ್ತಿದೆ. ಅದೊಂದು ರೀತಿಯ ಆದರ್ಶದ ಬೆನ್ನು ಹತ್ತಿಹೊರಟಂತೆ. ಆದರ್ಶ ಬಹುತೇಕ ಅವಾಸ್ತವಿಕ. ಆದರ್ಶವು ವ್ಯಾವಹಾರಿಕ ಸತ್ಯವಾಗಿರುವುದು ಬಹುತೇಕ ಸಂದರ್ಭಗಳಲ್ಲಿ ಸುಳ್ಳು ಅಪ್ರಾಯೋಗಿಕ. ಹೀಗಾಗಿ ಅವನ ಜೀವನ ಒಂದು ಕೊನೆಯೇ ಇಲ್ಲದ ಚಕ್ರಾಕಾರದ ಮೆಟ್ಟಲುಗಳ ಶ್ರೇಣಿಯಂಥಾಗಿದೆ. ಮೇಲೆ ಏರುವದು ಕೆಳಗೆ ಇಳಿಸುವದು ನಡೆದೇ ಇದೆ.

# ‘ಸಾವಿತ್ರಿ’ಯ ರಹಸ್ಯ

**– ಪುಟ್ಟು ಕುಲಕರ್ಣಿ**

## 1
## ದೇವತೆಗಳು ಮತ್ತು ಸಾವಿತ್ರಿ

ಶ್ರೀ ಅರವಿಂದರ ‘ಸಾವಿತ್ರಿ’ ಒಂದು ಮಂತ್ರಕಾವ್ಯವೆನ್ನುವದನ್ನು ಈಗಾಗಲೇ ಮಾನ್ಯ ಮಾಡಲಾಗಿದೆ. ಮಂತ್ರದ ಅಸ್ಮಿತೆಯಾಗಿರುವ ವೈಶ್ವಿಕ ಆಯಾಮಗಳಲ್ಲಿ ಇರುವ ಅಭಿವ್ಯಕ್ತಿಯನ್ನು ಆಯಾ ಆಯಾಮದ ಪರಿಭಾಷೆಯಲ್ಲಿಯೇ ಸದನಗೊಳಿಸಬೇಕಾಗುತ್ತದೆ. ಇಲ್ಲಿ ಉಪನಿಷತ್ತಿನಲ್ಲಿ ಇರುವ ರಹಸ್ಯದ ಕುರಿತು ‘ಸಾವಿತ್ರಿ’ ಮಾರ್ಗದರ್ಶನ ಮಾಡುತ್ತಿದೆ. ಸಾವಿತ್ರಿ ದಳ 1 ರೇಣು 4 ಪುಟ 47ರಲ್ಲಿ ಇದರ ಉದಾಹರಣೆಯನ್ನು ಕಾಣಬಹುದು.

And moon-flame oceans of swift fathomless Bliss
And calm immensities of spirit Space

**- Savitri, book 4**

**ಶೀತಚಂದ್ರ ಸಹ ಮೂಡಿರದ ಗುಹೆಯು**

ಇದು ಯೋಗದ ಪರಿಭಾಷೆಯಲ್ಲಿ ಒಂದು ಸೂತ್ರವಾಕ್ಯವಾಗಿದೆ. ಶ್ರೀಅರವಿಂದರ ಅಭಿಪ್ರಾಯದಲ್ಲಿ ‘ಚಂದ್ರ’ ಪ್ರಜ್ಞಾದೇವತೆ. ಸತ್ಯಕ್ಕೆ ಸೂರ್ಯ ದೇವತೆ, ಮನಸ್ಸಿಗೆ ಇಂದ್ರ, ಸೂಕ್ಷ್ಮ ಪ್ರಾಣಕ್ಕೆ ವಾಯು, ಭಾವನಾತ್ಮಕ ಮನಸ್ಸು ಅಥವಾ ಗುಣಕ್ಕೆ ಮಿತ್ರ–ವರುಣ–ಆರ್ಯಮಾ ಮತ್ತು ಭಗ ದೇವತೆಗಳು, ಸಹೇತುಕ ಚಿತ್ತಿಗೆ ಅಥವಾ ತಪಸ್ಸಿಗೆ ಬೃಹಸ್ಪತಿ ದೇವತೆ, ಸಹೇತುಕ ಸತ್‌ಗೆ ಬ್ರಹ್ಮ ದೇವತೆಯಾಗಿದ್ದಾನೆ. ಅದೇ ರೀತಿಯಲ್ಲಿ ಸಹೇತುಕ ತಪಸ್ಸಿಗೆ ಅಗ್ನಿ ದೇವತೆ. ಈ ಎಲ್ಲ ವಿವರಗಳನ್ನು ಪ್ರತಿಮಾ ತತ್ತ್ವದಲ್ಲಿ (ಸಂಕೇತ ತತ್ತ್ವದಲ್ಲಿ) ವೇದದಲ್ಲಿಯೇ ರೂಪಿತಗೊಂಡಿವೆ. ಶ್ರೀ ಅರವಿಂದರು ಈ ರಹಸ್ಯಗಳನ್ನು ತಮ್ಮ “ಋಗ್ವೇದದ ಪ್ರಥಮ ಋಕ್” ಪ್ರಬಂಧದಲ್ಲಿ ಸವಿವರವಾಗಿ ಚಿತ್ರಿಸಿದ್ದಾರೆ.

ಇವೆಲ್ಲವುಗಳನ್ನೂ ಕಾವ್ಯಾತ್ಮಕವಾಗಿ ಋತ–ಚೇತನದ ನೆಲೆಯಲ್ಲಿ, ‘ಸಾವಿತ್ರಿ’ಯಲ್ಲಿ ನೀಡಿದ್ದಾರೆ. ಮೇಲ್ಕಂಡ ವರ್ಗೀಕರಣವು ಕೇವಲ ಮಾರ್ಗದರ್ಶಿ ಸೂತ್ರವಾಗಿದ್ದು, ಹಲವಾರು ಗುಣಗಳ ಮತ್ತು ಶಕ್ತಿಗಳ ಸಂಗಮವಾಗಿರುವ

ಇವುಗಳನ್ನು ಪ್ರತಿನಿಧಿಸುವ ಹಲವಾರು 'ಉಪದೇವತಾ ಗಣ(gods)'ಗಳ ಬಗೆಗೆ, ಅತ್ಯಂತ ನಿಖರವಾಗಿಯೇ ನಿಕಷಕ್ಕೆ ಒಡ್ಡಿಯೇ ವೇದವು ಈ ವ್ಯವಸ್ಥೆಯನ್ನು ಅಂಗೀಕರಿಸಿಕೊಂಡಿದೆ. ಜೊತೆಜೊತೆಗೆ ನಿತ್ಯವೂ ಪ್ರತಿನಿಧಿಸುತ್ತಿದೆ ಕೂಡಾ. ಈ ದೇವ ಗಣಗಳೇ ಪುರುಷನ, ಈಶನ, ಆಧಾರಭೂತದ ಶಕ್ತಿಯಾದ 'ಸಪ್ತರೂಪಿ ಆವಿಷ್ಕಾರಕ್ಕೆ' ಪರಿಪಕ್ವ ನೆಲೆಯಲ್ಲಿ ಕಾರ್ಯಪ್ರವೃತ್ತವಾಗಿರುತ್ತವೆ.

ಈ ವಿಷಯವನ್ನೇ "ಸೌಭಾಗ್ಯ ಸು(ಶು)ಭೋದಯ" ಗ್ರಂಥವು, ಎಲ್ಲವನ್ನೂ ತನ್ನಲ್ಲಿಯೇ ನೋಡುವದರಿಂದಲೂ, ಕರಣಗಳ ಮೇಲೆ ಏಳುವದರಿಂದಲೂ ಶ್ರೀಮಾತೆಯು 'ಪಶ್ಯಂತಿ ಉತ್ತೀರ್ಣಾ' ಎಂದು ಕರೆಯಲ್ಪಡುತ್ತಾಳೆ. (ಪಶತೀ ಸರ್ವಂ ಸ್ವಾತ್ಮಾನಿ ಕರುಣಾನಾಂ ಸುರಣಿಮಪಿ ಯದುತ್ತೀರ್ಣಾ। ತೇನೇಯಂ ಪಶ್ಯಂತೀತ್ಯುತ್ತೀರ್ಣೇತ್ಯಪ್ಯುದೀಯತೇ ಮಾತಾ॥) ಎಂದು ಸೂತ್ರವಿದೆ. ಇದೇ ಸೂತ್ರವನ್ನೇ 'ಸಾವಿತ್ರಿ'ಯಲ್ಲಿ ಬರುವ 'ಪ್ರಸವ' ವೇದನೆಯ ಝಳಪು, ಶೀತಚಂದ್ರದ ವಿವರಗಳು ಹೀಗೆ ಮಾರ್ಗದರ್ಶಿಯಾಗಿವೆ. ಪಶ್ಯಂತಿಯಲ್ಲಿ ಉತ್ತೀರ್ಣಳಲ್ಲದೇ ಇರುವದರಿಂದಲೂ (ಇದನ್ನೇ 'ಶೀತಚಂದ್ರ ಸಹ ಮೂಡಿರದ ಗುಹೆ' ಎನ್ನಲಾಗುತ್ತದೆ), ಅದೇ ಸಮಯಕ್ಕೆ 'ವೈಖರೀ'ಯಂತೆ ಇನ್ನೂ ಬಾಹ್ಯದಲ್ಲಿ ಪ್ರಕಟಗೊಳ್ಳದಂತೆ ಇರುವದರಿಂದಲೂ, ಇವೆರಡರ ಮಧ್ಯದ ಸ್ಥಿತಿಯಾದ 'ಮಧ್ಯಮಾ' ಎನಿಸುತ್ತಾಳೆ.

ಈ 'ಪ್ರಸವಿತ್ರೀ' ಎನ್ನುವದನ್ನೇ ಲಲಿತಾ ಸಹಸ್ರನಾಮವೂ (826) ಸಹಿತ 'ಆಕಾಶಾದಿ' ಪ್ರಪಂಚಗಳನ್ನು ಪ್ರಸವಿಸುವದರಿಂದ ಅವಳಿಗೆ ಪ್ರಸವಿತ್ರೀ ಎಂದು ಹೆಸರಿಸುತ್ತಿದೆ. ಪ್ರಜೆಗಳನ್ನು ಪ್ರಸವಿಸುವದರಿಂದ 'ಸವಿತಾ' ಎನ್ನುವ ಹೆಸರಿದೆ. ವಿಷ್ಣು ಧರ್ಮೋತ್ತರವೂ ಸಹಿತ ಇದನ್ನೇ "ಪ್ರಜಾನಾಂ ಚ ಪ್ರಸವತೇ ಸವಿತೇತಿ ನಿಗದ್ಯತೇ" ಎಂದು ಹೇಳಿದೆ. 'ಭಗವತೀ' ಪುರಾಣವೂ ಸಹಿತ 'ಬ್ರಹ್ಮಾದ್ಯಾಃ ಸ್ಥಾವರಾಂಶ್ಚಯಸ್ಯಾ ಏವ ಸಮುದ್ಗತಾ। ಮಹದಾದಿ ವಿಶೇಷತಾಂ ಜಗದಸ್ಯಾ ಸಮುದ್ಗತಮ್। ತಾಮೇವ ಸಕಲಾರ್ಥಾನಾಂ ಪ್ರಸವಿತ್ರೀಂ ಪರಾಂ ನುಮಃ॥' ಎಂದು ವಿವರಣೆಗಳನ್ನು ನೀಡುತ್ತಿದೆ. ಹೀಗಾಗಿ ಸಾವಿತ್ರಿ ಪ್ರಥಮ ಸಾಲಿನ 'The hour before' ಶಬ್ದ–ಸಮುಚ್ಚಯವನ್ನು ಅರಿತುಕೊಳ್ಳಬೇಕಿದೆ.

ಇನ್ನು "ಶೀತಚಂದ್ರ" ವಿಷಯದಲ್ಲಿ, ಚಂದ್ರಮಂಡಲ ಮಧ್ಯದಲ್ಲಿರುವವಳು ಎನ್ನುವ ವಿವರಗಳಿವೆ. 'ಸಹಸ್ರದಳ ಪದ್ಮಕರ್ಣಿಕೆ'ಯಲ್ಲಿರುವ ಚಂದ್ರನನ್ನು ಕುಂಡಲೀನಿ ಭೇದಿಸುವದರಿಂದ 'ಚಂದ್ರಮಂಡಲ ಮಧ್ಯಗಾ' ಎನ್ನುವ ಹೆಸರಿದೆ.

ಇದನ್ನು ಲೌಕಿಕವಾಗಿ ಸಂಪತ್ತು ಮೊದಲಾದವುಗಳನ್ನು ಪಡೆದುಕೊಳ್ಳಲು, ಸಾಯಂಸಂಧ್ಯಾವಂದನದಲ್ಲಿ ದೇವಿಯನ್ನು ಚಂದ್ರಮಂಡಲ ಮಧ್ಯದಲ್ಲಿಯೇ ಆರಾಧಿಸುತ್ತಾರೆ. (ಈ ಚಂದ್ರಮಂಡಲವೇ ಶ್ರೀಚಕ್ರ ಎನ್ನುವದು ರಹಸ್ಯಾರ್ಥವಿದೆ).

ಇದೇ ವಿಷಯವನ್ನು ಯೋಗದ ಬಗೆಗಿನ ಹಲವು ಭಾಷ್ಯಗಳಲ್ಲಿ/ಗ್ರಂಥಗಳಲ್ಲಿ ವಿವರಿಸಿದ್ದನ್ನು ಕಾಣಬಹುದು. ಅದರಲ್ಲೂ ಕನ್ನಡ ಭಾಷೆಯಲ್ಲಂತೂ 12 ನೇ ಶತಮಾನದ ಅಲ್ಲಮಪ್ರಭು ಅಪ್ರತಿಮವಾಗಿ ರೂಪಿಸಿದ್ದಾನೆ;

ಚಂದರನೊಳಗಿನ ಎರಳೆಯ ರಾಹು ನುಂಗಿದ ನೋಟವು
ಅಂದಂದಿಗೆ ಕಾಡಿತ್ತು ನೋಡಾ
ಒಂದು ತಲೆ ಬಸುರು
ಅಂದಂದಿಗೆ ಬಂದು ಕೂಡಿತ್ತು ನೋಡಾ
ನಂದಿ ನಂದಿಯ ನುಂಗಿ ಬಂದುದು ಮಹೀತಳಕ್ಕಾಗಿ
ಇಂದು ರವಿ ಗಡಣವ ನಾನೇನೆಂಬೆ ಗುಹೇಶ್ವರಾ (ವಚನ 25)

ಇಲ್ಲಿ ತಮೋಗುಣ ನಿವೃತ್ತಿ ಮಾಡುವ ಷೋಡಶಕಳಾಪರಿಪೂರ್ಣ ಭಾವದಿಂದಿರುವ ಹಾಗೂ ಸುಧಾಕರ ಸ್ವರೂಪವಾಗಿರುವ ಚಂದ್ರನಿಗೆ ಅಜ್ಞಾನ ತಮೋವೃತ್ತಿಯನ್ನು ತೊಡೆದು ಹಾಕಿ, ಅಮೃತಪಿಂಡ ಸ್ವರೂಪದಿಂದ ತೋರುವ ಪರಮ ಶಾಂತಿ ಎನ್ನುವ "ಚಿತ್ತು" – ಈ ಶೀತಚಂದ್ರ ಎಂದು ವ್ಯಾಖ್ಯಾನಗಳಿವೆ. ಇದಿನ್ನೂ ಮೂಡಿರದ ಗುಹೆಯ ಸ್ವರೂಪದಲ್ಲಿ ಹಾಗೂ ಅದು ಉದಿಸಲಿರುವ (ಪ್ರಸವದ ಮೂಲಕ) ಸ್ಥಿತಿಯ ವಿವರಣೆಗಳನ್ನು 'ಸಾವಿತ್ರಿ'ಯ ಪ್ರಥಮ ಪುಟದಲ್ಲಿ ಕಾಣಬಹುದು. ಈ ಎಲ್ಲ ವಿವರಗಳನ್ನು ಶ್ರೀ ಅರವಿಂದರು "Moon flame Ocean"ದಲ್ಲಿ ಸಂಕೇತಿಸಿದ್ದಾರೆ.

**2**

ಇದನ್ನು ಶ್ರೀ ಅರವಿಂದರು 'ಲೀಲಾ' ಎನ್ನುವ ಸುನೀತ(ಸಾನೆಟ್)ದಲ್ಲಿ ಸೂತ್ರ ಸ್ವರೂಪದಲ್ಲಿ ಹೇಳಿದ್ದಾರೆ.

ನಮ್ಮ ಅಂತರಂಗದಲ್ಲಿರುವ ಆ ಏಕೈಕ ವೈಶ್ವಿಕ ತತ್ತ್ವವಾಗಿರುವ ಋತ–ಚೇತನವು, ಸಾವಿರದ–ದಳದ ಕಮಲದಂತೆ ಚಿತ್ಸ್ವರೂಪದಲ್ಲಿ ವಿಕಸಿಸುತ್ತದೆ. ಇದು ನಿರ್ಮಾಯ ಮೌನದಲ್ಲಿದ್ದು, ಘನಶಾಂತತೆಯ ಪ್ರಶಾಂತಪೂರ್ಣವಾಗಿರುವ

ಶಾಶ್ವತದ ಸತ್ತಿನಂತಿರುತ್ತದೆ. ದೃಷ್ಟಾರನಾದವನು ಇದನ್ನು – 'ಸೃಷ್ಟಿಗೊಂಡದ್ದನ್ನು' – ದೃಷ್ಟಿಸಿ, ಅದು 'ಸವಿತೃ'ವಿನ ಸರ್ವ–ಸತ್ತೆಯಾಗಿರುವದನ್ನು ಮನನ ಮಾಡಿಕೊಳ್ಳುತ್ತಾನೆ. ಇಂತಹ ಬ್ರಹ್ಮಾಂಡ ಗುಹ್ಯವನ್ನು (ರಹಸ್ಯವನ್ನು) ಅರಿತು 'ಕವಿಬ್ರಹ್ಮನಾಗಿ' ಯುಗಪುರುಷನಾಗುತ್ತಾನೆ.

ಜನನ–ಮರಣಗಳ ಚದುರಂಗದಾಟದಲ್ಲಿ, ಸಂತೋಷ–ದುಃಖದ ಅಲೆಗಳಲ್ಲಿ ಈ ವೈಶ್ವಿಕದ ಅರ್ಣವದಲ್ಲಿ ಪಯಣಿಸುವವನು, ರಚಿತಗೊಂಡಿರುವ ಆ ದೀಪ್ತಿಮಯ ಗುಚ್ಛ–ಪರ್ವವನ್ನು ಕಾಣುತ್ತಾನೆ. ಮಹತಿಗೆ ಅಧಿಪತಿಯಾಗಿದ್ದರೂ ಸಹಿತ 'ವಿಶ್ವ ಪ್ರೇಮಕ್ಕೆ' ಅಥವಾ 'ದೈವೀ ಪ್ರೇಮ'ಕ್ಕೆ ದಾಸನಾಗಿ, ಆ ಮೂಲಕ ತಾರೆಗಳಿಗೂ ಸಹಿತ ಉತ್ಥರಣದ ಅತಿಥಿಯಾಗುತ್ತಾನೆ. ಪರಮಾತಿ ಪರಮದಲ್ಲಿರುವ ಆ ದೃಷ್ಟಾರ ಪೀಠವನ್ನು ಏರುವಲ್ಲಿ, ನಿಯತಿಯ ಅನುಸಾರವಾಗಿಯೇ ಅತಿಮಾನವನಾಗಿ ಈ ವಿಶ್ವ–ಕ್ರೀಡೆಯನ್ನು ಮುಂದುವರೆಸುತ್ತಾನೆ. ಹೀಗೆ ಸಂರಚನೆಗೊಂಡ ಇಡೀ ಬ್ರಹ್ಮಾಂಡವು 'ಪ್ರೇಮದ ನಾದ'ವೇ ಆಗಿದೆ ಎಂದು 'ಸಾವಿತ್ರಿ' ಮನದಟ್ಟು ಮಾಡಿಕೊಡುತ್ತಾಳೆ.

– – – – –

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ.ನಗರ 1ನೇ ಹಂತ, ಬೆಂಗಳೂರು

1) ದಿನಾಂಕ 5ನೇ ಡಿಸೆಂಬರ್ 2021 ಭಾನುವಾರ "ಶ್ರೀ ಅರವಿಂದರ ಮಹಾಸಾಮಾಧಿ"ಯ ದಿನವನ್ನಾಗಿ ಆಚರಿಸಲಾಯಿತು. ತತ್ಸಂಬಂಧ ಬೆಳಿಗ್ಗೆ 10.00 ರಿಂದ 10.20 ರವರೆಗೆ ಸಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ನಂತರ 10.30 ರಿಂದ 12.00 ಗಂಟೆಯವರೆಗೆ ಡಾ॥ ಅಜಿತ್ ಸಬ್ನೀಸ್‌ರವರು "Delight of Existence" ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು, ಸಾಧಕರು ಮತ್ತು ಇತರರು ಹಾಜರಿದ್ದರು. ಜೂಮ್ ಹಾಗೂ ಯೂಟ್ಯೂಬ್ ಮುಖಾಂತರ ಸಹ ಕಾರ್ಯಕ್ರಮವನ್ನು ಪ್ರಸ್ತುತ ಪಡಿಸಲಾಯಿತು.

2) ದಿನಾಂಕ 11ನೇ ಡಿಸೆಂಬರ್ 2021 ಶನಿವಾರ ಸಂಜೆ 4:00 ರಿಂದ 5:30 ರವರೆಗೆ ಪ್ರೊ. ಆರ್.ಕೆ. ಕುಲಕರ್ಣಿ, ವಿಜಯಪುರ, ಇವರು ಶ್ರೀ ಅರವಿಂದರ 150ನೇ ಜನ್ಮವಾರ್ಷಿಕೋತ್ಸವ ಅಂಗವಾಗಿ "ಶ್ರೀ ಅರವಿಂದರ ಲಘುಕಾವ್ಯಗಳು: ಊರ್ವಶೀ ಹಾಗೂ ಲವ್ವ್ ಆ್ಯಂಡ್ ಡೆತ್" ಎಂಬ ವಿಷಯವಾಗಿ ಆನ್‌ಲೈನ್ ಮೂಲಕ ಉಪನ್ಯಾಸ ನೀಡಿದರು. ಉಪನ್ಯಾಸ ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು ಮತ್ತು ಶ್ರೀಮಾತಾರವಿಂದರ ಭಕ್ತರು ಭಾಗವಹಿಸಿದ್ದರು.

3) ಮಹರ್ಷಿ ಶ್ರೀ ಅರವಿಂದರ 150ನೇ ಜನ್ಮವಾರ್ಷಿಕೋತ್ಸವ ಮತ್ತು ಭಾರತದ 75ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಶ್ರೀ ಅರವಿಂದೋ ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ, "ಶ್ರೀ ಅರವಿಂದರ ತತ್ವ ಸಿದ್ಧಾಂತ, ಜೀವ ಚರಿತ್ರೆ ಮತ್ತು ಯೋಗ" ಕುರಿತು ಫೋಟೋ ಚಿತ್ರ ಪ್ರದರ್ಶನ, ಪುಸ್ತಕ ಪ್ರದರ್ಶನ ಹಾಗೂ ಉಪನ್ಯಾಸಗಳನ್ನು ಪಾಂಡಿಚೇರಿ ಶ್ರೀ ಅರವಿಂದೋ ಸೊಸೈಟಿ ಮಾರ್ಗದರ್ಶನದಲ್ಲಿ ದಿನಾಂಕ 14, 15, 16ನೇ ಡಿಸೆಂಬರ್ 2021 ಕರ್ನಾಟಕ ಚಿತ್ರಕಲಾ ಪರಿಷತ್, ಡಿ. ದೇವರಾಜ್ ಅರಸ್ ಗ್ಯಾಲರಿ ಮತ್ತು ಸಭಾಂಗಣ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ದಿನಾಂಕ 14ನೇ ಡಿಸೆಂಬರ್ 2021 ಮಂಗಳವಾರ ಡಾ॥ ರ.ವಿ. ಜಹಾಗೀರದಾರ, ಟ್ರಸ್ಟಿ, ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ ಹಾಗೂ ನಿವೃತ್ತ ಐಎಎಸ್ ಅಧಿಕಾರಿ ಶ್ರೀ ಅನಿಲ್ ಗೋಕಾಕರವರು ಮುಖ್ಯ ಅತಿಥಿಗಳಾಗಿ ಆಗಮಿಸಿ, ದೀಪ ಬೆಳಗುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಅರವಿಂದೋ ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ ಅಧ್ಯಕ್ಷರಾದ ಡಾ॥ ಅಜಿತ್ ಸಬ್ನೀಸ್ ವಹಿಸಿದ್ದರು. ಫೋಟೋ ಚಿತ್ರ ಪ್ರದರ್ಶನವನ್ನು ಶ್ರೀಮಾತಾರವಿಂದರ ಭಕ್ತರು, ಸಾಧಕರು, ಚಿತ್ರಕಲಾ ಪರಿಷತ್ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಉತ್ಸಾಹದಿಂದ ವೀಕ್ಷಿಸಿದರು. ಶ್ರೀ ಅರವಿಂದರ ಕುರಿತು ಫೋಟೋ ಚಿತ್ರ ಪ್ರದರ್ಶನಕ್ಕೆ ಹಲವರು ಮೆಚ್ಚುಗೆ ವ್ಯಕ್ತಪಡಿಸಿದರು.

4) ದಿನಾಂಕ 25ನೇ ಡಿಸೆಂಬರ್ 2021 ಶನಿವಾರ ಸಂಜೆ 4:00 ರಿಂದ 5:30 ರವರೆಗೆ ಆರೋವಿಲ್‌ನ ಶ್ರೀ ಮನೋಜ್ ಪವಿತ್ರನ್ ಇವರು ಶ್ರೀ ಅರವಿಂದರ 150ನೇ ಜನ್ಮವಾರ್ಷಿಕೋತ್ಸವ ಅಂಗವಾಗಿ "Purification of the Intelligence and Will" ಎಂಬ ವಿಷಯದ ಬಗ್ಗೆ ಆನ್‌ಲೈನ್ ಮೂಲಕ ಉಪನ್ಯಾಸ ನೀಡಿದರು. ಉಪನ್ಯಾಸ ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು ಮತ್ತು ಶ್ರೀಮಾತಾರವಿಂದರ ಭಕ್ತರು ಭಾಗವಹಿಸಿದ್ದರು.

# ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್

## ಪ್ರಕಟವಾಗಿರುವ ಪುಸ್ತಕಗಳ ಪಟ್ಟಿ

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 1 | ಸಮಗ್ರ ಶಿಕ್ಷಣ |
| 2 | ಶ್ರೀ ಅರವಿಂದರು ದಿವ್ಯ ಜೀವನ |
| 3 | ಶ್ರೀ ಅರವಿಂದರು ಭಾರತೀಯ ಧರ್ಮ ಪರಂಪರೆ ಮತ್ತು ಭಗವಾನ್ ಶ್ರೀ ಅರವಿಂದರ ದರ್ಶನ |
| 4 | ಶ್ರೀಮಾತಾರವಿಂದರ ಪೂರ್ಣಯೋಗ |
| 5 | ಪ್ರಾರ್ಥನಾ ಪದ್ಯಗಳು |
| 6 | ರವಿ ಬೆಳಗಿದ ಪಥ (ಶ್ರೀಮಾತೆಯವರ ವಚನವೇದ ಸಂಕಲನ) |
| 7 | ನವ್ಹೆಂಬರ್ 24, 1926 ಅಧಿಮಾನಸ ಪ್ರಜ್ಞೆಯ ಅವರೋಹಣ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ದೃಷ್ಟಿಯಲ್ಲಿ ಸಿದ್ಧಿದಿನದ ಮಹತ್ವ |
| 8 | ಶ್ರೀ ಅರವಿಂದರು (ಒಂದು ಸಂಕ್ಷಿಪ್ತ ಪರಿಚಯ) |
| 9 | ಶ್ರೀಮಾತೆ (ಒಂದು ಸಂಕ್ಷಿಪ್ತ ಪರಿಚಯ) |
| 10 | ಕೇಂಬ್ರಿಜ್‌ನ ಸುಗಂಧಿತ ಪುಷ್ಪ (ಮಾನವತೆಗೆ ಶ್ರೀ ಅರವಿಂದರ ಕೊಡುಗೆ) |
| 11 | ಅತಿಮಾನಸ ಹಾಗೂ ಹೊಸ ಜಗತ್ತೊಂದರ ಜನನ (ಶ್ರೀಮಾತೆ ಹಾಗೂ ಶ್ರೀ ಅರವಿಂದರ ಬರಹಗಳ ಸಂಕಲನ) |
| 12 | ಭಾರತ ಮತ್ತು ಭರತಮಾತೆಯ ದೈವನಿಯತಿ |
| 13 | ಆದರ್ಶ ಶಿಕ್ಷಕ |
| 14 | ಪೂರ್ಣಯೋಗ |
| 15 | ಶ್ರೀ ಅರವಿಂದರ ಧರ್ಮ ಹಾಗೂ ರಾಷ್ಟ್ರೀಯತ್ವ |
| 16 | ಶ್ರೀಮಾತೆಗೆ 72 (ಬಾಹತ್ತರ) ಕವನಗಳ ಅರ್ಪಣೆ |

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 17 | ಶಿಕ್ಷಣ ಕುರಿತು ಶ್ರೀಮಾತಾರವಿಂದರ ವಿಚಾರಧಾರೆ |
| 18 | ಶ್ರೀ ಅರವಿಂದ ದರ್ಶನ |
| 19 | ಶ್ರೀಮಾತೆ ಭಾರತಮಾತೆ |
| 20 | ದುರ್ಗಾಸ್ತೋತ್ರ |
| 21 | ಚಿಂತನಗಳು ಮತ್ತು ಸೂಕ್ತಿಗಳು |
| 22 | ಯೋಗ ಸಮನ್ವಯ |
| 23 | ಶ್ರೀ ಅರವಿಂದಾಶ್ರಮ |
| 24 | ಪ್ರಸೂತಿ ಪೂರ್ವದ ಶಿಕ್ಷಣ ಶೋಭಾಯಮಾನ ಭವಿಷ್ಯತ್ತಿನೆಡೆಗೆ |
| 25 | ಮಗುವನ್ನು ಪೋಷಿಸುವುದು ಹೇಗೆ? |
| 26 | ಸುಪ್ರಮಾನಸದ ಶ್ರೀಮಾತೆ |
| 27 | ಸಾವಿತ್ರಿ (ಶ್ರೀ ಅರವಿಂದರ ಮಹಾಕಾವ್ಯದ ಸಾರಾಂಶ) |
| 28 | ಪೂರ್ಣಯೋಗದ ಪಥದಲ್ಲಿ |
| 29 | ಬೆಳಕಿನ ಕಿರಣಗಳು |
| 30 | 24th November 1926 (Descent of Overmental Consciousness) |
| 31 | ಶ್ರೀ ಅರವಿಂದರ ಸಾವಿತ್ರಿ |
| 32 | ಮಾನುಷ ಚಕ್ರ |
| 33 | ಚೈತ್ತ್ಯ ಪುರುಷ |
| 34 | ಭವಾನಿ ಭಾರತಿ |
| 35 | ಶಿಕ್ಷಣ |
| 36 | ಯೋಗಾರಂಭ |



ನಭೋನೀಲದಾ ಪದ್ಮಸರಸಿನಲಿ ಚಿದ್ಘನದ ಲೀಲೆ–ಛಂದ
ಆತ್ಮಹಂಸವದು ಮಂದ್ರಸ್ಥಾಯಿಯಲಿ ಅತಿಧವಲಗೊಳಿಸೆ ಸ್ಪಂದ
ಮಂತ್ರಮೋಹಕದ ಧವಳ ಸಾಕಾರ, ಸ್ವಪ್ನ ಪಥದೊಳಗೆ ತೇಲಿ
ಸಂಲಗ್ನಗೊಂಡು ಲಹರಿಗಳ –ಭಾವ–ಜಲ–ನಿನದ ನಾದಗಳಲಿ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 5 ರೇಣು 3 ಪುಟ 405)**

**ಫೋಟೊ: ಇಮೇಜಿಂಗ್ ಸಾವಿತ್ರಿ**

**RNI No. 22511/1971**
No. of Pages **76 + 4 (Cov. Page)**
KAR Reg No.: RNP/KA/BGS/368/2021-2023
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2023
Licensed to Post at BG PSO, Mysuru Road, Bengaluru - 560 026



ಸತತದಲು ಅವಳು ಚಿನ್ಮೂಲವಾಗಿ ಆಹ್ವಾನವಿಡುತ ಸಾಗಿ
ಜ್ಞಾನವಾಹಿನಿಯ ಮಂತ್ರದಂಡದಲಿ ಸಮೃದ್ಧ ಸಾರವಾಗಿ
ಜೀವಿಗಳು ಜೊತೆಗೆ ಸಾಕಾರಗಳಿಗೆ ಅಗಣಿತದ ದೃಶ್ಯಗಳಿಗೆ
ಶೋಭೆಯಾತ್ರೆಯಲಿ ಜ್ಯೋತಿವಾಹಕರ ಗಡಣ–ಗಡಣಗಳಿಗೆ
ಕಾಲದಲು ಮತ್ತೆ ಅವಕಾಶದಲ್ಲು ಅವಳ ವೈಭವದ ಗತಿಗೆ
ಅನವರತದಲ್ಲಿ ವಿಕಸನದ ಗಮನ ಗತಿ–ಪ್ರಗತಿ ಪೂರ್ಣವಾಗೆ.

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ ‘ಸಾವಿತ್ರಿ’; ದಳ 2 ರೇಣು 6 ಪುಟ 181)**

Ed: Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, ‘Sri Aurobindo Marg’,
J.P. Nagar I Phase, Bengaluru - 560 078. Phone: 080 - 22449882.